M

On Demons 1867.

ON DEMONS

ಭೂತ ವಿದ್ಯೆಯು

ಮೂರು

ಸಂಭಾಷಣೆಗಳಲ್ಲಿ ವಿವರಿಸಿದ್ದು

MANGALORE
…ISHED BY PFLEIDERER & RIEHM
…L MISSION BOOK & TRACT DEPOSITORY
1867

Gk
VI
32.

ಕ್ರಯ ೧ ಆಣೆ.

ON DEMONS

ಭೂತ ವಿದ್ಯೆಯು

ಮೂರು

ಸಂಭಾಷಣೆಗಳಲ್ಲಿ ವಿವರಿಸಿದ್ದು

MANGALORE
PRINTED BY PLEBST & STOLZ, BASEL MISSION PRESS
1867

UNIV. BIBL. TÜBINGEN

GR VI 32

ಭೂತ ವಿದ್ಯೆಯ

ಮೊದಲನೇ ಸಂಭಾಷಣೆಯು

1. ಭೂತವಂದರೇನು

ಒಬ್ಬ ಪಾದ್ರಿ ಧೊರೆ ಹೋದ ಮಳೆಗಾಲದಲ್ಲಿ ಪೂರ್ವ ದಿಕ್ಕಿನಲ್ಲಿರುವ ಒಂದು ಊರಿಗೆ ಹೋಗುವಾಗ ಮಳೆ ಬಂತು; ಅದಕ್ಕಾಗಿ ದಾರಿಯಲ್ಲಿರುವ ಒಂದು ಅಂಗಡಿಯಲ್ಲಿ ಕೂತರು. ಆ ಅಂಗಡಿಯ ಹತ್ತರ ಒಂದು ನಾಗ ಕಲ್ಲು ಇಟ್ಟದೆ. ಅಂಗಡಿಯವನಾಗಿರುವ ರಾಮುಶೆಟ್ಟಿಯೂ ಕೃಷ್ಣರಾಯರೆಂಬ ಬ್ರಾಹ್ಮಣನೂ ಊರಿನ ಭೂತಸ್ಥಾನದಲ್ಲಿ ಕುಣಿದಾಡುವ ಪಾಟಾಳಿ ಪೂಜಾರಿಯೂ ಇದ್ದು, ಊರಿನ ಸಂಗತಿಗಳ ವಿಷಯದಲ್ಲಿಯೂ, ಮಳೆಯ ವಿಷಯದಲ್ಲಿಯೂ, ಮಾತಾಡುವವರಾಗಿ ಶಿಕ್ಕಿದರು. ಪಾದ್ರಿ ಧೊರೆ ಬರುವದನ್ನು ನೋಡಿ ನೆಗಾಡಿ, ಚಾಪೆ ಹಾಕಿ, ಕೂತು ಕೊಳ್ಳಿರಿ ಎಂದು ಹೇಳಿ, ನಮ್ಮ ಊರಿಗೆ ಏನು ಬಂದಿರಿ? ಎಂದು ಕೇಳುವಾಗ ನಿಮ್ಮ ಕ್ಷೇಮ ಸಮಾಚಾರಕ್ಕಾಗಿ ಬಂದೆನೆಂದು ಹೇಳಿದರು.

ರಾಮುಶೆಟ್ಟಿಯು: ನಮ್ಮ ಕ್ಷೇಮವು ನಿಮಗೇನು?

ಪಾಟಾಳಿ ಪೂಜಾರಿಯು: ಅಹಹ! ಇವರು ಅದರ ವಿಷಯ ಚಿಂತಿಸುವದು ನಿಶ್ಚಯವೇ. ಯಾವ ಸಂಕಟದವನಾದರೂ ಅವರ ಹತ್ತರ ಬಂದು ಮದ್ದು ಕೇಳಿದರೆ ಉಚಿತವಾಗಿ ಎಲ್ಲರಿಗೆ ಕೊಡುತ್ತಾರೆ; ಅನೇಕರಿಗೆ ಗುಣವಾಯಿತು.

ಪಾದ್ರಿ: ಹೌದು ನಾವು ಕೂಡುವಷ್ಟು ಪ್ರಯತ್ನ ಮಾಡಿ, ನಿಮ್ಮ ಊರುಗಳಿಗೆ ಬಂದು, ನಿಮ್ಮನ್ನು ನೋಡಿ, ನಿಮ್ಮಲ್ಲಿರುವ ಸಂಕಟದವರಿಗೆ ತಿಳಿಯುವಷ್ಟು ಔಷಧ ಕೊಟ್ಟು, ದೇವರ ಸಹಾಯದಿಂದ ನಿಮಗೆ ಗುಣ

ವಾಗುವ ಹಾಗೆಯೂ, ವಿಶೇಷವಾಗಿ ಎಲ್ಲಾರೋಗಗಳ ಕಾರಣವಾಗಿರುವ ಪಾಪದಿಂದಲೂ ಸೈತಾನನಧಿಕಾರದಿಂದಲೂ ನಿಮಗೆ ಬಿಡುಗಡೆ ಆಗುವ ಮಾರ್ಗವನ್ನು ತಿಳಿಸುವ ಹಾಗೆಯೂ, ಚಿಂತಿಸಿ ಪ್ರಾರ್ಥನೆ ಮಾಡುತ್ತಾ ಇದ್ದೇವೆ.

ಅಷ್ಟು ವರೆಗೆ ಏನೂ ಮಾತಾಡದ ಕೃಷ್ಣರಾಯರು ಈಗ ಮಾತಾಡಿದ್ದು: ನಿಮ್ಮನ್ನು ಯಾರು ಕಳುಹಿಸಿದರು? ನೀವು ಸರ್ಕಾರಿನವರಾಗಿದ್ದು ನಿಮಗಿರುವ ಈ ಉದ್ಯೋಗಕ್ಕಾಗಿ ಒಳ್ಳೇ ಸಂಬಳವನ್ನು ತಿಂದು ಈ ಪ್ರಕಾರ ಮಾಡಿ, ಜಾತಿ ಕೆಡಿಸುತ್ತೀರಲ್ಲವೋ? ಬಿಟ್ಟು ಮಾಡ ಬೇಡಿರಿ! ಹಾಗೆ ಹೇಳುತ್ತಾರಪ್ಪ.

ಪಾದ್ರಿ: ನಾವು ಸರ್ಕಾರಿನವರಲ್ಲ. “ಭೂಪರಲೋಕಗಳಲ್ಲಿ ಸಮಸ್ತ ಅಧಿಕಾರವು ನನಗೆ ಕೊಡಲ್ಪಟ್ಟದೆ; ಆದದರಿಂದ ನೀವು ಹೋಗಿ ಸಮಸ್ತ ಜನಾಂಗಗಳನ್ನು ಶಿಷ್ಯರಾಗ ಮಾಡಿ, ಅವರಿಗೆ ಸ್ನಾನವನ್ನು ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದವುಗಳನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ” ಎಂಬ ದೇವರ ಆಜ್ಞೆಯ ಪ್ರಕಾರ ಬಂದು, ನಮ್ಮ ದಿನದ ಖರ್ಚಿಗೆ ತಕ್ಕಷ್ಟು ಹೊಂದುವದಲ್ಲದೆ ಏನೂ ಸಂಬಳ ತೆಗದು ಕೊಳ್ಳುವವರಲ್ಲ.

ಅವರು ನಂಬಲಿಕ್ಕೆ ಸ್ವಲ್ಪ ಮೆಲ್ಲಗೆ ಮಾಡಿದ್ದಾಗ್ಯೂ, ಕಡೆಗೆ ನೀವು ಸುಳ್ಳು ಹೇಳುವವರಲ್ಲವೆಂದು ನಾವು ಬಲ್ಲೆವು ಅಂದರು.

ಅಷ್ಟರೊಳಗೆ ಪಾದ್ರಿ ಎದ್ದು ಹೊರಗೆ ನೋಡಿದರು; ಬಹಳ ಮಳೆ ಬಂದದರಿಂದ ರಾಮಶೆಟ್ಟಿಯು: ಈಗ ಹೋಗಲಾಗದು; ಈ ಹೊತ್ತು ಇಲ್ಲಿ ಕೂತು ಕೊಳ್ಳಿರಿ! ಎಂದು ಹೇಳುವಾಗ,

ಪಾದ್ರಿ: ಅಪ್ಪಣೆ ಇದ್ದರೆ ಹ್ಯಾಗೂ ಮಳೆ ಹೋಗುವ ವರಿಯಂತರ ಇಲ್ಲಿ ಕೂತು ಕೊಳ್ಳುತ್ತೇನೆ.

ಆಗ ಪಾಟಾಳಿ ಪೂಜಾರಿಗೆ: ನೀವು ಕುಣಿದಾಡಿಸುವಂಥ ಭೂತ ಸ್ಥಾನ ಎಲ್ಲಿ? ಎಂದು ಕೇಳಿದರು.

ಪಾಟಾಳಿ ಪೂಜಾರಿಯು: ಅದು ದೂರದಲ್ಲಿ ಅದೆ ಎಂದು ಬೆರಳಿನಿಂದ ತೋರಿಸಿ, ಅದರ ಭೂತಗಳ ಹೆಸರುಗಳನ್ನು ಹೇಳಿದನು.

ಪಾದ್ರಿ: ಹೌದು ಇಂಥವುಗಳಿಗೆ ನೀವು ಹೆದರಿ ಸೇವೆ ಮಾಡಿ ಪೂಜಿಸುತ್ತೀರಿ; ಆದರೆ ನಮ್ಮೆಲ್ಲರನ್ನುಂಟು ಮಾಡಿದ ಒಬ್ಬನಾಗಿರುವ ಜೀವವುಳ್ಳ ದೇವರಿಗೆ ಭಯ ಪಟ್ಟು ನಂಬುವದಿಲ್ಲವಲ್ಲಾ! ನೋಡಿರಿ, ಅದರಿಂದಲೇ ನಿಮಗೆ ಮೋಸ ಬರುತ್ತದೆ.

ಕೃಷ್ಣರಾಯರು: ಭಗವಂತನೆಂಬ ಒಬ್ಬನೇ ದೇವರು ಹೌದು, ಅವನಿಗೆ ನಾವು ನಮಸ್ಕಾರ ಮಾಡುತ್ತೇವೆ.

ರಾಮಶೆಟ್ಟಿಯು: ನಿಮ್ಮ ಹತ್ತಿರ ಯಾರಾದರೂ ಬಂದು ನಿಮ್ಮ ಸಂಗಡ ಮಾತಾಡಲಿಕ್ಕೆ ನೋಡಿದರೆ, ಮೊದಲು ನಿಮ್ಮ ಚಾಕರಿಯವರನ್ನು ಹಿಡಿದು ಬಾಗಲು ಶಿಕ್ಕುವ ಹಾಗೆ ನೋಡುತ್ತಾರೆ; ಅವರಿಗೆ ಒಂದೊಂದು ಸಾರಿ ಲಂಚ ಸಹ ಕೊಡುತ್ತಾರೆ, ಆಗಲವರ ಕಾರ್ಯವು ಬೇಗ ನಡಿಯುತ್ತದಲ್ಲ? ಅದೇ ಪ್ರಕಾರ ನೆಟ್ಟಗೆ ದೇವರ ಹತ್ತಿರ ಹೋಗಲಿಕ್ಕೆ ನಮ್ಮಿಂದಾಗುವದಿಲ್ಲ. ಸ್ವಾಮೀ ದೇವರೇ, ಎಂದು ಕರಿಯುತ್ತೇವೆ ಹೊರ್ತು, ನಮಗೆ ನೋಡಲಿಕ್ಕೆ ಶಿಕ್ಕುವದಿಲ್ಲ. ಅದಕ್ಕಾಗಿ ದೇವರ ಚಾಕ್ರಿಯವರಾಗಿರುವ ಈ ಭೂತಗಳನ್ನು ಹಿಡಿದು ಲಂಚ ಕೊಡುವಾಗ ನಮ್ಮ ಕಾರ್ಯವು ನಡಿಯುತ್ತದೆ.

ಪಾದ್ರಿ: ಹೌದು; ಎಲ್ಲಾ ಹಿಂದು ದೇಶದಲ್ಲಿಯೂ, ವಿಶೇಷವಾಗಿ ಅದರ ತೆಂಕಣಪಶ್ಚಿಮ ಭಾಗದಲ್ಲಿರುವ ಲಂಕಾ ದ್ವೀಪ ಮತ್ತು ತಿರುನೆಲ್‌ವೇಲಿ, ಮಲೆಯಾಳ, ಕನ್ನಡ, ಮಹರಾಷ್ಟ್ರ ಎಂಬ ಶೀಮೆಗಳಲ್ಲಿರುವ ಸಮಸ್ತ ಜನರು ಭೂತ, ಪ್ರೇತ, ಪಿಶಾಚ ಮುಂತಾದವುಗಳಿಗೆ ಬಹಳ ಹೆದರುವದಲ್ಲದೆ ಕೆಲವು ದಿಕ್ಕುಗಳಲ್ಲಿ ದೇವರಿಗಿಂತ ಹೆಚ್ಚು ಭಯ ಪಟ್ಟು ಸೇವೆ ಮಾಡುತ್ತಾರೆ; ಮರುಳು ಉಳ್ಳವನು "ಮಾರಿಯೇ ನನ್ನ ಮನೇ ಹೊಕ್ಕು" ಅಂದ ಹಾಗೆ ಬುದ್ಧಿ ಇಲ್ಲದ ಕೀಳು ಜಾತಿಯವರು ಮಾತ್ರ ಇದನ್ನು ಮಾಡುತ್ತಾರೆಂದು ಎಣಿಸ ಕೂಡದು. ವಿಶೇಷವಾಗಿ ಇಲ್ಲಿ ಬಂಟರೂ ಬೇರೆ ಬೇರೆ ಜಾತಿಯವರಾದ ಬ್ರಾಹ್ಮಣರೂ ತುರುಕರೂ ರೋಮಿಯ ಕ್ರಿಸ್ತಾನರೂ ಸಹ ಭೂತಗಳಿಗೆ ಹೆದರಿ ಅವುಗಳ ಉಪದ್ರಗಳಿಗೆ ಶಿಕ್ಕದ ಹಾಗೆ, ತಮ್ಮಿಂದಾಗುವಷ್ಟು ದೂರವಾಗುವದಕ್ಕೆ ಎಲ್ಲರು ಚಿಂತಿಸುತ್ತಾರೆ. ಭೂತವೆಂದರೇನು ಎಂಬುವದು ಅನೇಕರಿಗೆ ಚನ್ನಾಗಿ

ಗೊತ್ತಿಲ್ಲದಿದ್ದರೂ, ಅವುಗಳಿರುತ್ತವೆಂದೂ, ಅವುಗಳಿಗೆ ಬಹು ತ್ರಾಣವೂ ಶಕ್ತಿಯೂ ಇರುತ್ತವೆಂದೂ ಊಹಿಸಿ ಕೊಂಡು ಅವುಗಳಿಂದ ಆದ ಉಪದ್ರಗಳ ವಿಷಯ ಅನೇಕ ಕಥೆಗಳನ್ನು ವರ್ಣಿಸುತ್ತಾರೆ. ಹೀಗೆ ಈಗ ರಾಮಶೆಟ್ಟಿಯು ಚನ್ನಾಗಿ ತಿಳಿಯದೆ ಹೇಳಿದನು.

ಕೃಷ್ಣರಾಯರು: ಇದರ ಅನುಭವವನ್ನು ಎಲ್ಲರೂ ಪಡ ಕೊಳ್ಳ ಬೇಕಾದೀತು.

ಪಾಟಾಳಿ ಪೂಜಾರಿಯು: ಹೌದು ಇದಕ್ಕೆ ಸಂಶಯವಿಲ್ಲ; ಮತ್ತು ಇದಕ್ಕೆ ತಪ್ಪಿಸಲಿಕ್ಕಾಗಿ ಒಂದೊಂದು ಊರಿನಲ್ಲಿ ಭೂತಸ್ಥಾನಗಳನ್ನು ಕಟ್ಟಿ ಸ್ವಲ್ಪ ಕಡಿಮೆ ಒಂದೊಂದು ಮನೆಯಲ್ಲಿ ಸಹ ಸಂಸಾರದ ಭೂತಗಳನ್ನು ಇಲ್ಲವೇ ಕುಲದೇವತೆಗಳನ್ನಿಟ್ಟು, ಕ್ರಮದ ಪ್ರಕಾರ ಪೂಜೆ ಮಾಡುತ್ತಾ ಬರುತ್ತಾರೆ.

ಪಾದ್ರಿ: "ಸರ್ಪನ ಕೂಡೆ ಸರಸವೇ?" ಎಂಬ ಹಾಗಾಯಿತು. ಈ ಭೂತಗಳು ಬಹು ಕ್ರೂರತ್ವದಿಂದಲೂ ತಂತ್ರ ಉಪದ್ರಗಳಿಂದಲೂ ಮನುಷ್ಯರನ್ನು ಕೆಡಿಸುತ್ತವೆಂದು ನಂಬಿ, ತಪ್ಪಿಸಿ ಕೊಳ್ಳಲಿಕ್ಕೆ ಉಪಾಯ ಹುಡುಕುವಾಗ ಸ್ವಂತ ದುರ್ಬುದ್ಧಿಯಿಂದಾಗಲೀ ಬೇರೆ ಮೋಸಗಾರರ ಕೈಯಿಂದಾಗಲೀ ಹೆಚ್ಚಾದ ಕಷ್ಟ ಪಡ ಕೊಳ್ಳುತ್ತಾರಲ್ಲದೆ ಅನೇಕರು ಮಾನವನ್ನೂ ಆಸ್ತಿಯನ್ನೂ ಜೀವವನ್ನೂ ಕಳ ಕೊಳ್ಳ ಬೇಕಾಯಿತು. ಯಾಕಂದರೆ "ಮತಿ ಇಲ್ಲದವನಿಗೆ ಗತಿ ಇಲ್ಲ; ಶಾಂತಿ ಮಾಡಿದರೂ ಭ್ರಾಂತಿ ಹೋಗಲಿಲ್ಲ" ಎಂಬ ಗಾದೆಗಳ ಹಾಗೆಯೂ, ನೀವು ಒಂದು ಕುಣಿಯಿಂದ ಮತ್ತೊಂದು ಕುಣಿಗೆ ಬೀಳುವದೇ ಹೊರ್ತು ಮತ್ತೇನಾದರೂ ಒಂದು ಪ್ರಯೋಜನವನ್ನು ಹೊಂದಲಾರಿರಿ. ಈಗ ಮಳೆ ಸ್ವಲ್ಪ ಕಡಿಮೆಯಾಯಿತು, ಆದರೆ ಇನ್ನೂ ಬರುವದೆಂದು ಕಾಣುತ್ತದೆ, ಆದದರಿಂದ ಈ ಭೂತಗಳ ಸಂಗತಿ ಇನ್ನು ಸ್ವಲ್ಪ ವಿಚಾರಿಸುವ. ಮೊದಲಾಗಿ ಭೂತದ ಸ್ವಭಾವವೇನೆಂದು ನೋಡುವಾ.

ಅದಕ್ಕೆ ಎಲ್ಲರೂ: ಒಳ್ಳೇದು, ಹಾಗೆ ವಿಚಾರಿಸುವದು ನಮಗೆ ಸಂತೋಷವೇ.

ಪಾದ್ರಿ: ಜನರು ಹೇಳುವ ಪ್ರಕಾರ ಭೂತವಂದರೇನೆಂದು ಚನ್ನಾಗಿ

ತಿಳಿದು ಕೊಳ್ಳುವ ಹಾಗೆ, ಇದಕ್ಕೆ ತಗಲುವ ಸ್ವಲ್ಪ ಶಬ್ದಗಳ ಅರ್ಥವನ್ನು ನೋಡ ಬೇಕು. ಎಲ್ಲವನ್ನು ಉಂಟು ಮಾಡಿ ನಡಿಸುವವನಾಗಿರುವ ದೇವರು ಒಬ್ಬನಾಗಿದ್ದಾನೆಂದು ಎಲ್ಲರು ಹೇಳುತ್ತಾರೆ.

ಪಾಟಾಳಿ ಪೂಜಾರಿಯು: ಹೌದು ಆ ಒಬ್ಬನಾಗಿರುವ ದೇವರಿಗೆ ನಾರಾಯಣನೆಂದು ಹೇಳುತ್ತಾರೆ.

ರಾಮುಶೆಟ್ಟಿಯು: ಪರಮಾತ್ಮನೆಂತಲೂ ಹೇಳುತ್ತಾರೆ.

ಕೃಷ್ಣರಾಯರು: ಭಗವಂತನೂ ಎಂಬ ಹೆಸರುಂಟು.

ಪಾದ್ರಿ: ದೇವರ ಹೆಸರುಗಳನ್ನು ಹೇಳುತ್ತಾರೆ ಸರಿ; ಆದರೂ ಈ ದೇವರಿಗೆ ಯಾರಾದರೂ ನಮಸ್ಕಾರ ಸೇವೆಗಳನ್ನು ಮಾಡದೆ ಬೇರೆ ಬೇರೆ ದೇವರುಗಳನ್ನು ಇಟ್ಟು ಕೊಂಡಿದ್ದಾರೆ.

ಕೃಷ್ಣರಾಯರು: ದೇವರು ಒಬ್ಬನೇ ಎಂದು ತಿಳಿದು ಕೊಂಡಂತೆ, ದೇವದೂತರ ವಿಷಯದಲ್ಲಿಯೂ, ಎಲ್ಲರಿಗೆ ಗೊತ್ತಿರುತ್ತದೆ; ಆದರೆ ಇವರೊಳಗೆ ವಿಶೇಷವಾಗಿ ಕೀಳು ಜಾತಿಯವರಾಗಿಯೂ ಕೆಟ್ಟು ಹೋದಂಥವರಾಗಿಯೂ ಇರುವ ಕೆಲವರು ಮೂರು ಲೋಕಗಳಲ್ಲಿಯೂ, ಆದರೆ ವಿಶೇಷವಾಗಿ, ಆಕಾಶದಲ್ಲಿಯೂ ಭೂಮಿಯಲ್ಲಿಯೂ ತಮ್ಮ ಕೆಲಸವನ್ನು ನಡಿಸುತ್ತಾರೆ; ಇದರಲ್ಲಿ ಮನುಷ್ಯರಿಗೆ ವಿಶೇಷವಾಗಿ ಕಂಟಕವೂ ಕಷ್ಟವೂ ಬರುತ್ತದೆ.

ಪಾದ್ರಿ: ಇವುಗಳಿಗೆ ಸಾಧಾರಣವಾಗಿ ಭೂತಗಳೆಂದು ಹೇಳುತ್ತಾರಲ್ಲವೋ?

ಪಾಟಾಳಿ ಪೂಜಾರಿಯು: ಭೂತಗಳಲ್ಲಿ ಒಂದರಿಂದ ಒಂದಕ್ಕೆ ಹೆಚ್ಚು ಕಾಠಿಣ್ಯವೂ ತಂತ್ರವೂ ಉಪದ್ರವೂ ಉಂಟೆಂದು ಜನರು ನೆನಸುತ್ತಾರೆ ಹೊರ್ತಾಗಿ ಬೇರೆ ಹೆಚ್ಚು ಕಡಿಮೆ ಏನೂ ಮಾಡುವದಿಲ್ಲ.

ಕೃಷ್ಣರಾಯರು: ಆದರೆ ಶಾಸ್ತ್ರಗಳನ್ನು ಬಲ್ಲವರು ಭೂತಗಳೊಳಗೆ ತಾರತಮ್ಯ ಉಂಟೆಂದು ತೋರಿಸಿ, ಗಣಂಗಳೂ ಭೂತಗಣಂಗಳೂ ಪಿಶಾಚರೂ ಪ್ರೇತಗಳೂ ಮುಂತಾದ ಬೇರೆ ಬೇರೆ ತರಗಳನ್ನು ವಿಂಗಡಿಸುತ್ತಾರೆ. ಶಿವನು ತನ್ನ ಜಡೆಯನ್ನು ಝಾಡಿಸಿ ಅದರಿಂದ ಬಿದ್ದ ಧೂಳಿ

ನಿಂದ ಮೂವತ್ತೆರಡು ಸಾವಿರ ಗಣಂಗಳನ್ನುಂಟು ಮಾಡಿ, ಗಣಪತಿ ಎಂಬ ಮುಖ್ಯಸ್ಥನ ಹೇಳಿಕೆಯಲ್ಲಿ ಇಟ್ಟನಂತೆ; ಇವರು ಮನುಷ್ಯರಿಗೆ ಏನೂ ಉಪದ್ರವ ಕೊಡದೆ ಇದ್ದಾಗ್ಯೂ ಮಾರಿ ವಾಂತಿ ಭೇದಿ ರೋಗಗಳಲ್ಲಿಯೂ ಯುದ್ಧಗಳಲ್ಲಿಯೂ ಜನಸಮೂಹವು ಸಾಯುವದರಲ್ಲಿ ವಿಶೇಷವಾಗಿ ಸಂತೋಷ ಪಟ್ಟು, ಇಂಥ ಹೆಣಗಳ ಮಾಂಸವನ್ನು ತಿನ್ನುವದುಂಟು. ಅದಕ್ಕಾಗಿ ಅವರು ರಣರಂಗಗಳಲ್ಲಿಯೂ ಹೆಣಗಳನ್ನು ಹೂಣಿಡುವ ಸ್ಥಳಗಳಲ್ಲಿಯೂ ಅದೃಶ್ಯ ಆತ್ಮಗಳಾಗಿ ಕೂತುಕೊಳ್ಳುವದುಂಟಂತೆ.

ಪಾದ್ರಿ: ಕೆಲವರು ೧೦೦೧, ಮತ್ತು ಕೆಲವರು ೬೪೦೦೦ ಗಣಂಗಳುಂಟೆಂದು ಹೇಳುತ್ತಾರೆ.

ಕೃಷ್ಣರಾಯರು: ಲೆಖ್ಖವಿರಲಿ, ಇದಕ್ಕೆ ಅನೇಕ ವಿಧದ ಹೆಚ್ಚು ಕಡಿಮೆ ತೋರಿಸುತ್ತಾರೆ.

ರಾಮಶೆಟ್ಟಿಯು: ಗಣಂಗಳ ಸ್ವಲ್ಪ ಹೆಸರುಗಳು ಸಹ ಹೇಳಿಯವೆ, ಯಾವವಂದರೆ: ಬೇತಾಳನು, ವೀರಭದ್ರನು, ಭೈರವನು, ಇಂಥವುಗಳು.

ಪಾದ್ರಿ: ಬೇರೆ ಜನರು ಈ ಗಣಂಗಳ ಲೆಖ್ಖದಲ್ಲಿ ಮಾರಿ, ವಾಂತಿಭೇದಿ, ನಾಗ ಮುಂತಾದವುಗಳನ್ನು ಸೇರಿಸಿ ಇವುಗಳಿಗೆ ಬಹಳ ಹೆದರಿ ಕೊಳ್ಳುತ್ತಾರೆ; ಯಾಕಂದರೆ ಇವುಗಳಿಂದ ಸತ್ತವರ ಆತ್ಮಗಳು ಗಣಂಗಳ ವಶದಲ್ಲಿ ಬೀಳುತ್ತವಂತೆ. ಈ ಭಯಕ್ಕಾಗಿ ಮಾರಿಗೆ ಬೇಕಾದಷ್ಟು ಪೂಜೆ ಮಾಡುತ್ತಾರಲ್ಲವೋ?

ಎಲ್ಲರು: ಹೌದು ಹೌದು.

ಪಾದ್ರಿ: ವಿಶೇಷವಾಗಿ ಉಪದ್ರ ಕೊಡುವವರು ಭೂತಗಣಂಗಳೆಂದು ಎಲ್ಲರೂ ನೆನಸುತ್ತಾರೆ. ಅವುಗಳಲ್ಲಿ ನಾರಾಯಣನು ಇಲ್ಲವೇ ಶಿವನು ಒಂದು ಪಾಲು ಆದಿಯಲ್ಲಿ ಮತ್ತೊಂದು ಪಾಲು ಲೋಕದ ಉತ್ಪತ್ತಿಯಿಂದ ಈ ವರೆಗೆ, ಈಗಲು ಸಹ ಉಂಟು ಮಾಡುವದೂ, ಬೇರೊಂದು ಪಾಲು ಕೆಟ್ಟ ಮನುಷ್ಯರ ಪ್ರಾಣಗಳು ಶಿಕ್ಷೆಗಾಗಿ ಭೂತ ಆಗುವದೂ ಉಂಟಂತೆ.

ರಾಮಶೆಟ್ಟಿಯು: ಅವರು ಮುಂದೆ ಪಾಂಡ್ಯ ದೇಶದಲ್ಲಿ ಮಾತ್ರ ಇದ್ದು, ವಿಕ್ರಮಾದಿತ್ಯನೆಂಬ ಅರಸನು ಆಳುವ ಸಮಯದಲ್ಲಿ ಅವನ ಮುಖಾಂತ್ರವಾಗಿ ಈ ತುಳು ಕನ್ನಡ ಶೀಮೆಗಳಿಗೆ ಬಂದು, ನೀಲೇಶ್ವರದಿಂದ ಅಂಕೋಲೆ ವರೆಗೂ ವಿಶೇಷ ಬಲಗೊಂಡರು.

ಪಾದ್ರಿ: ಅಹ! ಈ ಪ್ರಕಾರ ಯಾವಾಗಲೂ ಹೊಸ ಭೂತವು ಬರುವಂಥಾದಿರುವದು !

ಪಾಟಾಳಿ ಪೂಜಾರಿಯು: ಅವರು ಗಂಡು ಹೆಣ್ಣಾಗಿದ್ದು, ಸಾಧಾರಣವಾಗಿ ನೋಡಲಿಕ್ಕೆ ಶಿಕ್ಕಲೇ ಇಲ್ಲ. ಆದರೆ ಒಂದೊಂದು ಸಾರಿ ಬೆಂಕಿಯ ನಾಲಿಗೆಯಾಗಿ ತಮ್ಮನ್ನು ತೋರಿಸಿ, ವಿಶೇಷವಾಗಿ ಭೂತ ಸ್ವೈನ್ಯಗಳಾಗಿ ನೋಡಲಿಕ್ಕೂ ಕೇಳಲಿಕ್ಕೂ ಶಿಕ್ಕಿಯವೆ.

ಕೃಷ್ಣರಾಯರು: ಅವುಗಳು ಕ್ರೂರ ತಂತ್ರ ಮುಂತಾದ ಬೇರೆ ಬೇರೆ ಕೆಟ್ಟ ಗುಣಗಳುಳ್ಳವುಗಳಾಗಿ ಲೆಖ್ಖವಿಲ್ಲದೆ ಮನುಷ್ಯರ ಸಮೀಪದಲ್ಲಿಯೂ ದನಗಳ ಸಮೀಪದಲ್ಲಿಯೂ ಮರ ಗಿಡಗಳಲ್ಲಿಯೂ ಕೂತು ಕೊಳ್ಳುತ್ತವೆ.

ಪಾದ್ರಿ: ಇವುಗಳ ಲೆಖ್ಖವನ್ನು ನೀವು ಅಸಂಖ್ಯವಾಗಿ ತೋರಿಸಿದ್ದಾಗ್ಯೂ ಒಂದೊಂದರ ಹೆಸರುಗಳು ಸ್ವಲ್ಪ ಮಾತ್ರ ಗೊತ್ತವೆ, ಹ್ಯಾಗಂದರೆ ನೀವು ಹೇಳುವ ಪ್ರಕಾರ ಆದಿಯಲ್ಲಿ ಶಿವನಿಂದ ಉಂಟು ಮಾಡಲ್ಪಟ್ಟಂಥವರಲ್ಲಿ ರಾವಣನೂ, ಖಡ್ಗರಾವಣನೂ, ಬಿರಿರಾವಣನೂ, ದೇವತೆಯೂ, ರಕ್ತೇಶ್ವರಿಯೂ ಮುಂತಾದವುಗಳು ಆಗಿರುವವು; ಮತ್ತು ಲೋಕ ಉತ್ಪತ್ತಿಯ ಮೇಲೆ ಉಂಟು ಮಾಡಲ್ಪಟ್ಟವುಗಳು ಯಾವವಂದರೆ ಪಂಜುರ್ಳಿಯು.

ಕೃಷ್ಣರಾಯರು: ವಿಷ್ಣುವಿನ ಬೆವರಿನಿಂದ ಒಂದು ಮುಳ್ಳು ಹಂದಿಯಾಯಿತು. ಮತ್ತು ಪ್ರಾರ್ಥಿಸುವಾಗ ಮನುಷ್ಯರೂಪವಾಯಿತಂತೆ.

ಪಾದ್ರಿ: ಇದು ಎಂಥಾ ಕಥೆ! ಅದು ದೇವರಿಗೆ ತಕ್ಕದ್ದೋ?

ರಾಮಶೆಟ್ಟಿಯು: ಅದಿರಲಿ! ನಿಮಗೆ ನಮ್ಮ ಸಂಗತಿಗಳು ಅಷ್ಟು ಸೂಕ್ಷ್ಮವಾಗಿ ಗೊತ್ತಾದದ್ದು ಎಂಥಾ ಆಶ್ಚರ್ಯ!

ಪಾಟಾಳಿ ಪೂಜಾರಿಯು: ಹೌದು ಬಹಳ ಆಶ್ಚರ್ಯವು! ಆದರೆ ಇವರಿಗೆ ಗೊತ್ತು ಇಲ್ಲದ್ದು ಉಂಟೋ? ಅವರು ದೇವರ ಹಾಗಲ್ಲವೋ?

ಪಾದ್ರಿ: ನಾವು ದೇವರಲ್ಲ; ನಿಮ್ಮಂತೆ ನಾವು ಸಹ ಪಾಪಿಷ್ಟರಾದ ಮನುಷ್ಯರಾಗಿದ್ದೇವೆ; ಆದರೆ ದೇವರು ನಮ್ಮನ್ನು ತನ್ನ ರಾಜ್ಯಕ್ಕೆ ಕರೆದನು. ಇದಕ್ಕೆ ನಿಮ್ಮನ್ನು ಸಹ ಕರಿಯುತ್ತೇವೆ; ಇದಕ್ಕೋಸ್ಕರ ದೇವರಿಗೆ ಕೇವಲ ವಿರೋಧವಾಗಿರುವ ಈ ಭೂತಗಳನ್ನು ಕುರಿತು ನಿಮ್ಮ ಸಂಗಡ ಮಾತಾಡಿ ನಿಮ್ಮನ್ನು ಸತ್ಯದಲ್ಲಿ ಶೇರಿಸ ಬೇಕೆಂಬ ಆಶೆ ನನಗೆ ಉಂಟು. ಹೀಗಿರುವದರಿಂದ ಇನ್ನು ಸ್ವಲ್ಪ ಕೇಳಿರಿ, ಭೂತಗಳಾದ ನರ ಪ್ರಾಣಿಗಳು ಯಾವವಂದರೆ, ಬಬ್ಬರ್ಯ ಎಂಬವನಿದ್ದಾನೆ. ಇವನ ಆಗದ ಕಾರ್ಯಗಳು ಎಲ್ಲರಿಗೆ ಗೊತ್ತವೆ. ಮತ್ತು ಮಯಿಸಂದಾಯನು, ಜಾರಂದಾಯನು, ಪಂಜುರ್ಲಿ ಇಲ್ಲವೆ ಹಂದಿರಾವುತನು; ಅಬ್ಬಗೆ, ದಾರಗೆ ಇವೆರಡರ ವಿಷಯ ರಾಮಶೆಟ್ಟಿಗೆ ಗೊತ್ತಿರುವದು; ಕೋಟಿ ಚೆನ್ನಯರೆಂಬ ಬೈದರುಗಳನ್ನು ಎಲ್ಲರೂ ಬಲ್ಲರು; ಮತ್ತು ನೀಚನು, ಕಂಬೆಲ್ರು ಮುಂತಾದವುಗಳು ಇರುತ್ತವೆಂದೆನ್ನುತ್ತಾರೆ. ಸೈತಾನನು ಈ ಭೂತಗಳೆಂಬ ಕೆಟ್ಟ ಆತ್ಮಗಳಿಗೆ ದೊಡ್ಡ ಮುಖ್ಯಸ್ಥನಾಗಿದ್ದು ಬೇರೆ ಬೇರೆ ದೊಡ್ಡ ಭೂತಗಳ ಮುಖಾಂತರ ಭೂತ ರಾಜ್ಯವನ್ನು ನಡಿಸುತ್ತಾನಂತೆ.

ಕೃಷ್ಣರಾಯರು: ಇದು ಜನರು ಹೇಳುವದರ ಸಾರಾಂಶ ನಿಶ್ಚಯವೇ! ಅದರ ವಿಷಯ ಬಹಳ ಕಥೆಗಳು ಹೇಳುವದುಂಟು.

ಪಾದ್ರಿ: ಹೌದು ನಾಚಿಕೆ ಇಲ್ಲದೆ ಬೇಕಾದಷ್ಟು ಹೇಳುತ್ತಾರೆ, ಆದರೆ ಇದನ್ನು ಈಗ ಬಿಟ್ಟು ಮುಂದೆ ಹೋಗುವಾ!

ಪ್ರೇತವು ಅಂದರೇನು?

ಕೃಷ್ಣರಾಯರು: ಅಪಮೃತ್ಯುವಿನಿಂದ ಸತ್ತ ಮನುಷ್ಯರ ಆತ್ಮಗಳಾಗಿರುತ್ತವೆ; ತಮಗೆ ನೇಮಿಸಿದ ಸಮಯಕ್ಕೆ ಮುಂಚೆ ಸತ್ತದರಿಂದ ಪ್ರೇತತ್ವ ನಿವೃತ್ತಿ ಆಗ ಬೇಕು. ಅವುಗಳು ಕಾಲ ಮೃತ್ಯುವಾಗಿ ಜೀವ ಬಿಟ್ಟವರ ಆತ್ಮಗಳ ಸಮೂಹಕ್ಕೆ ಹೋಗಿ ಶೇರುವ ತನಕ ಭೂತಗಳು ಅವುಗಳನ್ನು ಹಿಡಿದು ಭೂಲೋಕದಿಂದ ಹೊರಡಲಿಕ್ಕೆ ಬಿಡುವದಿಲ್ಲ.

ಪಾದ್ರಿ: ಪಿಶಾಚರು ಅಂದರೇನು?

ರಾಮಶೆಟ್ಟಿ: ಬಹು ಕೆಟ್ಟವರಾಗಿ ಬದುಕಿ ಸತ್ತ ಮನುಷ್ಯರ ಆತ್ಮಗಳು; ಇನ್ನು ಕಾಡ ಸ್ಥಳಗಳಲ್ಲಿಯೂ ಮಾರ್ಗಗಳಲ್ಲಿಯೂ ಇದ್ದು,

ಶರೀರ ಜೀವದಲ್ಲಿ ಮಾಡಿದ ಹಾಗೆ, ಮತ್ತು ಕೆಟ್ಟತನವನ್ನು ಮಾಡಿ ದಾಟಿ ಹೋಗುವವರಿಗೆ ನಾನಾ ತರದ ತಂತ್ರಗಳನ್ನು ನಡಿಸಿ ಉಪದ್ರ ಕೊಡುವದುಂಟು. ಹಾಗೆಯೇ ಒಬ್ಬ ಬ್ರಾಹ್ಮಣನು ಸತ್ತು ಪಿಶಾಚನಾದರೆ ಬ್ರಹ್ಮಪಿಶಾಚಿಯು, ತುರುಕನಾದರೆ ತುರ್ಕಪಿಶಾಚಿಯು, ಈ ಮೊದಲಾದ ಹೆಸರುಗಳನ್ನು ಹೇಳುತ್ತಾರೆ.

ಕೃಷ್ಣರಾಯರು: ಇದು ಸರಿ; ಕೆಲವು ಮಂದಿ ಅವರನ್ನು ಗಣಂಗಳಿಗೆ ಸಮಾನ ಮಾಡಿ ಬಹಳ ಹೆದರುತ್ತಾರೆ; ಅವರನ್ನು ನೋಡಲಿಚ್ಛೈಸುವವರಿಗೆ ಒಂದೊಂದು ಸಾರಿ ಬೆಂಕಿ ಷಾಳಿ ಮುಂತಾದ ಆಕಾರಗಳಲ್ಲಿ ತಮ್ಮನ್ನು ತೋರಿಸಿ ಕೊಳ್ಳುವದೂ ಮನುಷ್ಯನನ್ನು ಹೆದರಿಸುವದೂ ಉಂಟು.

ಪಾದ್ರಿ: ಅವರಲ್ಲಿ ಒಂದು ವಿಶೇಷ ತರ ಅಂತರ್ ಪಿಶಾಚಿಗಳು ಇರುತ್ತವೆ.

ಕೃಷ್ಣರಾಯರು: ಹೌದು ಉಂಟು! ಅವುಗಳಿಗೆ ಅಂಗಲ ಪ್ರಮಾಣ ಆಗುವದಿಲ್ಲ. ಅವುಗಳು ಜನರಿಗೆ ಕ್ಷಣದಲ್ಲಿ ಅಂಗಹೀನವೂ ಮರಳೂಬಾವೂ ಮುಂತಾದ ಕೆಟ್ಟ ರೋಗಗಳನ್ನು ಹುಟ್ಟಿಸಿ ಹೊಡೆಯುತ್ತವೆ.

ಪಾದ್ರಿ: ನೋಡಿರಿ, ಹೀಗೆ ಜನರು ಬಹಳ ಆಶ್ಚರ್ಯಕರವಾದದ್ದೂ ಭಯಂಕರವಾದದ್ದೂ ಆಗಿರುವ ಕೆಟ್ಟ ಆತ್ಮಗಳನ್ನು ಕುರಿತು ಅನೇಕ ಪ್ರಕಾರವಾಗಿ ಹೇಳುವ ಮುಖ್ಯ ಸಾಕ್ಷಿಯನ್ನು ನೋಡಿದೆವು; ಆದರೂ ಇದನ್ನು ನಂಬ ಬಹುದೋ? ನಂಬಲಿಕ್ಕೆ ತಕ್ಕದ್ದೋ?

ಪಾಟಾಳಿ ಪೂಜಾರಿಯು: ಇದಕ್ಕೆ ಸಂಶಯವೇನು? ಇನ್ನು ಬಹಳ ಹೇಳ ಬಹುದು; ಎಲ್ಲಾ ಸತ್ಯವಾಗಿದೆ!

ಅಷ್ಟರೊಳಗೆ ಇನ್ನೂ ಬೇರೆ ಇಬ್ಬರೂ ಅಂಗಡಿಗೆ ಬಂದರು. ಅವರಲ್ಲಿ ಒಬ್ಬನು ಆ ಊರಿನಲ್ಲಿ ಇರುವ ಚಂದ್ರಭಟ್ಟರೂ, ಮತ್ತೊಬ್ಬನು ನಾರಾಯಣಾಚಾರ್ಯರೂ ಇವರು ಸಹ ಕೂತು ಕೊಳ್ಳುವಾಗ,

ಪಾದ್ರಿ: ಈ ವರೆಗೂ ನಾವು ಭೂತಗಳನ್ನು ಕುರಿತು ಮಾತಾಡಿದ ಸಂಗತಿಗಳನ್ನು ನೆನಸಿ ಕೊಂಡು, ಅದರ ವಿಷಯ ಶಾಸ್ತ್ರದಲ್ಲಿ ಏನು ಬರದದೆಂದು ಪರೀಕ್ಷೆ ಮಾಡಿ, ಜನರು ಈ ಪ್ರಕಾರ ಹೇಳುವದು ವಿದ್ಯುಕ್ತವೋ?

ಚಂದ್ರಭಟ್ಟರು: ಭೂತಗಳ ವಿಷಯ ಮಾತಾಡುತ್ತೀರೋ? ಶಾಸ್ತ್ರಗಳು ಅವುಗಳ ವಿಷಯ ಬಹಳ ಉಂಟು.

ಪಾದ್ರಿ: ಶಾಸ್ತ್ರಪುಸ್ತಕಗಳು ಅಂದರೆ ಪೂರ್ವದಲ್ಲಿ ಉಂಟಾದವುಗಳಾಗಿವೆ. ಈಚೆಗೆ ಆದಂಥ ಅನೇಕ ಅಜ್ಜಿಕಥೆಗಳು ಆಗಿರುವ ಗಣಭೂತ ಮುಂತಾದವುಗಳ ಚರಿತ್ರೆ ಪುಸ್ತಕಗಳುಂಟು; ಆದರೆ ನಾವು ಇದಕ್ಕೆ ಶಾಸ್ತ್ರವೆಂದು ಹೇಳ ಕೂಡದು. ವೇದಶಾಸ್ತ್ರ ಅಂಥಾ ಪುಸ್ತಕಗಳು ಮಾತ್ರ ಶಾಸ್ತ್ರಗಳೆಂದು ನೆನಸುತ್ತೇವೆ.

ಕೃಷ್ಣರಾಯರು: ಅಥರ್ವಣ ವೇದದಲ್ಲಿಯೂ ಧರ್ಮಶಾಸ್ತ್ರದಲ್ಲಿಯೂ I. 9. 10. ನಾವು ಕೇಳುವದೇನಂದರೆ: ಬ್ರಹ್ಮ ಇಲ್ಲವೆ ನಾರಾಯಣ ದೇವರು ಲೋಕವನ್ನು ಸೃಷ್ಟಿಸುವಾಗ ೮೪೦೦೦೦ ಪ್ರಾಣಿಗಳನ್ನುಂಟು ಮಾಡಿ ಅವರ ಸಹಾಯಕ್ಕೂ ಭದ್ರತೆಗೂ ಅಷ್ಟದಿಕ್ಪಾಲಕರನ್ನು ಇಲ್ಲವೆ ಲೋಕಪಾಲಕರನ್ನು ಇಟ್ಟನು. ಮತ್ತು ಪುರಾಣಗಳಲ್ಲಿ ಹೆಚ್ಚಾಗಿ ವಿವರಿಸಿ ಹೇಳಿರುವಂಥಾದ್ದೇನಂದರೆ: ವೈಕುಂಠದಲ್ಲಿ ವಿಷ್ಣು ಪರಿಪಾಲನೆ ಎಂಬ ಸ್ಥಿತಿಯನ್ನು ನೋಡಿ, ಶಿವನು ವಿನಾಶವೆಂಬ ಲಯವನ್ನು ನಡಿಸುತ್ತಾನೆ. ಇದಕ್ಕೆ ಕೈಲಾಸದಲ್ಲಿ ೬೪೦೦೦ ಗಣಂಗಳಾಗಿರುವ ಸೇವಕರು ಗಣೇಶನೆಂಬ ಗಣಪತಿಯ ಕೈಕೆಳಗೆ ಇರುತ್ತಾರೆ. ಅದೇ ಪ್ರಕಾರ ಭೂತಗಣಂಗಳು ಭೂತೇಶನೆಂಬುವವನ ಮುಖದಿಂದ ಶಿವನ ವಶದಲ್ಲಿ ಇರುತ್ತವೆ.

ಚಂದ್ರಭಟ್ಟರು: ಕೂರ್ಮಪುರಾಣದಲ್ಲಿ ಶಿವನು ಬ್ರಹ್ಮನ ಅಪ್ಪಣೇ ಪ್ರಕಾರ ಭೂತಗಣಂಗಳನ್ನು ಉಂಟು ಮಾಡಿದನು; ಆದರೂ ಅವರು ಎಲ್ಲವನ್ನು ನಾಶನ ಮಾಡುತ್ತಾರೆಂದು ಬ್ರಹ್ಮನು ನೋಡಿ ಪಶ್ಚಾತ್ತಾಪ ಪಟ್ಟು, ಹ್ಯಾಗೂ ಅಂಥಾ ಕೆಟ್ಟ ಆತ್ಮಗಳನ್ನುಂಟು ಮಾಡಲಿಕ್ಕಾಗದು ಎಂಬ ಅಪ್ಪಣೆ ಕೊಟ್ಟನೆಂದು ಹೇಳಿಯದೆ.

ಪಾದ್ರಿ: ಯಜುರ್ವೇದದಲ್ಲಿ ಮೈತ್ರಿ ಉಪ I ಪ್ರ. 4 ಅನುಕ್ರಮಣಿಕೆಯ ವಿವರದಲ್ಲಿ ಭೂತಗಣಂಗಳು, ಗಂಧರ್ವ, ಅಸುರ, ಯಕ್ಷ, ರಾಕ್ಷಸ, ಪಿಶಾಚ, ಉರಗ, ಗ್ರಹಗಳ ಸಂಗಡ ಒಂದೇ ಲೆಖ್ಖದಲ್ಲಿ ತೋರಿಸುತ್ತದೆ; ಇದು ಹ್ಯಾಗೆ?

ಕೃಷ್ಣರಾ. ಚಂದ್ರಚ: ಇದು ಅಹುದಾಗಿರುವದು, ಯಾಕಂದರೆ ಇವರೆಲ್ಲರು ದೇವರ ಸನ್ನಿಧಾನದಲ್ಲಿದ್ದಾರೆ.

ಪಾದ್ರಿ: ಸತ್ತವರ ಆತ್ಮಗಳು ಭೂತಗಳಾಗುವದು ಹ್ಯಾಗೆ?

ನಾರಾಯಣಾಚಾರ್ಯರು: ನಾನು ಮೈಸೂರಿನಲ್ಲಿ ಕರ್ಮವಿಪಾಕಶಾಸ್ತ್ರ ಪುಸ್ತಕವನ್ನು ನೋಡಿ, ಅದರಲ್ಲಿ ಇದು ಆಗುವ ಸಂಗತಿ ಪೂರ್ಣವಾಗಿ ಓದಿದೆನು; ಇದಕ್ಕೆ ಪ್ರತಿಬಂಧನೆ ಎಂದು ಹೇಳುತ್ತಾರೆ.

ಚಂದ್ರಚ: ಅದು ವಿಶೇಷವಾಗಿ ಗರುಡಪುರಾಣದಲ್ಲಿ ವಿವರಿಸಿಯದೆ ಏನಂದರೆ: ಯಾರಿಗಾಗಿ ಶ್ರಾದ್ಧವು ಕ್ರಮ ಪ್ರಕಾರ ಮಾಡೋಣಾಗುವದಿಲ್ಲವೋ, ಅಂಥವನು ಮುಂಚೆ ಇದ್ದ ಸ್ಥಳದಲ್ಲಿ ಇದ್ದು ಪ್ರೇತತ್ವ ನಿವೃತ್ತಿ ಆಗುವ ತನಕ ಅದೇ ಸ್ಥಿತಿಯಲ್ಲಿರಬೇಕು; ಸರ್ಪವು ಕಚ್ಚಿ, ಶಿಡ್ಲು ಬಡಿದು, ಪ್ರಸೂತವಾಗಿ, ಈ ಪ್ರಕಾರ ಅಪಮೃತ್ಯುವಾಗಿ ಸಾಯುವವರೆಲ್ಲರೂ ಅದೇ ಶಿಕ್ಷೆಗೆ ಒಳಗಾಗಿರುತ್ತಾರೆ. ಇದಕ್ಕೆ ದೃಷ್ಟಾಂತವಾಗಿ ಕೆಲವು ಶ್ಲೋಕಗಳನ್ನು ಹೇಳುತ್ತೇನೆ ಕೇಳಿರಿ:

ಪಾಪ ಕರ್ಮದಲ್ಲಿರುವಂಥವರೂ, ಪೂರ್ವ ಕರ್ಮಕ್ಕೆ ವಶವಾದವರೂ, ಸತ್ತರೆ ಪ್ರೇತಗಳಾಗುತ್ತಾರೆಂಬದನ್ನು ಕುರಿತು ಕೇಳು ಗರುಡನೇ.

ಚಿಲಿಮೆ, ಬಾವಿ, ಮಡಗ, ತೋಟ, ದೇವಸ್ಥಾನ, ಎರವಟ್ಟಿಗೆ ಮನೆಗಳು ಮಠಗಳು ಧರ್ಮಶಾಲೆಗಳು ಪಿತೃ ಪಾರಂಪರ್ಯವಾದ ಧರ್ಮ ಇವುಗಳನ್ನು ಯಾವಾತ ನಾಶ ಮಾಡುತ್ತಾನೋ, ಅವನು ಸತ್ತು ಭೂಮ್ಯಾಕಾಶ ಇರುವ ಪರ್ಯಂತರಕ್ಕೂ ಪ್ರೇತತ್ವವನ್ನು ಪಡಿಯುತ್ತಾನೆ.

ಗೋಗ್ರಾಸವನ್ನೂ ಗ್ರಾಮದ ಮರ್ಯಾದೆಯನ್ನೂ ಕೆರೆ ಮನೆ ಮಠಗಳನ್ನೂ ಲೋಭದ ದೆಸೆಯಿಂದ ಯಾರು ಕೆಡಿಸುತ್ತಾರೋ, ಅವರು ಪ್ರೇತಗಳಾಗುತ್ತಾರೆ.

ಹೊಲೆಯನ ದೆಸೆಯಿಂದ, ನೀರಿನಿಂದ, ಪರ್ವತದ ದೆಸೆಯಿಂದ, ಬ್ರಾಹ್ಮಣನಿಂದ, ಬೆಂಕಿಯ ದೆಸೆಯಿಂದ, ಹುಲಿಗಳಿಂದ, ಪಶುಗಳಿಂದ ಮರಣ ಪಟ್ಟಂಥಾ ಪಾಪಿಗಳಿಗೆ ಪ್ರೇತತ್ವವು.

ನೇಣು ಹಾಕಿ ಸತ್ತವರೂ, ವಿಷದಿಂದಲೂ ಕತ್ತಿಯಿಂದಲೂ ಸತ್ತ

ವರೂ, ತಮ್ಮನ್ನು ತಾವೇ ಕೊಂದು ಕೊಂಡವರೂ, ವೈಲಿಗೇ ರೋಗದಿಂದಲೂ ಮಹಾ ರೋಗಗಳಿಂದಲೂ ಸತ್ತವರೂ, ಪಾಪ ರೋಗಗಳಿಂದಲೂ ಕಳ್ಳರಿಂದಲೂ ಮರಣ ಪಟ್ಟವರೂ, ಸಂಸ್ಕಾರ ಇಲ್ಲದೆ ಮೃತವಾದವರೂ, ಯೋಗ್ಯವಾದ ಆಚಾರವನ್ನು ಬಿಟ್ಟವರೂ, ಗುಡ್ಡದ ಮೇಲಿಂದ ಬಿದ್ದವರೂ, ಗೋಡೆ ಬಿದ್ದು ಸತ್ತವರೂ, ಕೆಟ್ಟ ದೋಷಗಳಲ್ಲಿ ಸತ್ತವರೂ, ನೀರಿನಲ್ಲಿ ಸತ್ತವರೂ, ಇನ್ನೂ ಅನೇಕ ಕೆಟ್ಟ ಮೃತ್ಯು ವಶವಾಗಿ ಸತ್ತವರೂ, ಅವರೆಲ್ಲರು ಪ್ರೇತಯೋನಿಯಲ್ಲಿ ಹುಟ್ಟಿ ಭೂಮಿಯಲ್ಲಿ ತಿರುಗುತ್ತಾರೆ.

ತಾಯಿ, ಮಗಳು, ಹೆಂಡತಿ, ಸೊಸೆ ಇವಂದಿರನ್ನು ತಪ್ಪಿಲ್ಲದೆ ಬಿಡುವಂಥವನು ಪ್ರೇತವಾಗುತ್ತಾನೆ. ಇಡಲಿಕ್ಕೆ ಕೊಟ್ಟ ದ್ರವ್ಯವನ್ನು ತಿನ್ನುವಂಥವನೂ, ಮಿತ್ರದ್ರೋಹಿಯೂ, ಪರಸ್ತ್ರೀರತನೂ, ವಿಶ್ವಾಸಘಾತಕಿಯೂ, ನಿಷ್ಠುರನೂ ಪ್ರೇತವಾಗುತ್ತಾರೆ.

ಸಹೋದರರ ಹಗೆ, ಬ್ರಹ್ಮಘಾತಕ, ಗೋವು ಕೊಲ್ಲುವವನು, ಮದ್ಯಪಾನಿ, ಹಿರಿಯರ ಹೆಂಡತಿಯ ಹತ್ತರ ಹೋಗುವವನು, ಬೆಳ್ಳಿ ಬಂಗಾರ ಕದ್ದವನು ಪ್ರೇತವಾಗುತ್ತಾನೆ.

ಕುಲಧರ್ಮವನ್ನು ಬಿಟ್ಟು ಮನಸ್ಸಿಗೆ ಬಂದ ಧರ್ಮವನ್ನು ಮಾಡುವವನು, ವಿದ್ಯಾವೃತ್ತಿಹೀನನು ಪ್ರೇತವಾಗುತ್ತಾನೆ, ಹೇ ಗರುಡನೇ!

ಹೀಗೆ ಅಪಮೃತ್ಯುವಾಗಿಯೂ ಕರ್ಮದಲ್ಲಿಯೂ ಸತ್ತವರ ವಿಷಯ ಹೇಳಿರುತ್ತದೆ. ಇನ್ನು ಕಾಲಮೃತ್ಯುವಾಗಿ ಸತ್ತವರನ್ನು ಕುರಿತು ವಿಚಾರಿಸುವಾ! ಅವರನ್ನು ಯಮದೂತರು ತಕ್ಕೊಂಡು ಹೋಗಿ ಧರ್ಮರಾಯರ ಮುಂದೆ ವಿಚಾರಣೆ ಮಾಡುವದುಂಟು. ಒಳ್ಳೇಯವರು ನೆಟ್ಟಗೆ ಸ್ವರ್ಗಕ್ಕೂ, ಕೆಟ್ಟವರು ನರಕಕ್ಕೂ ಹೋಗುತ್ತಾರೆ.

ಪಾದ್ರೆ: ಹಾಗೆಯೇ ಮನುವಿನ ಧರ್ಮಶಾಸ್ತ್ರದಲ್ಲಿ ಅನೇಕ ಶ್ಲೋಕಗಳಲ್ಲಿ ಹೇಳುತ್ತದೆ.

ಕೃಷ್ಣರಾ: ಇದು ಸಹ ನಿಮಗೆ ಗೊತ್ತುಂಟೋ?

ಚಂದ್ರಭ: ಇಪ್ಪತ್ತೊಂದು ತರದ ನರಕಗಳುಂಟು; ಒಂದೊಂದರಲ್ಲಿ ನಾಲ್ಕು ಲಕ್ಷ ಬೇರೆ ಬೇರೆ ಕೋಣೆಗಳುಳ್ಳ ಶೆರೆಗಳು ಇಲ್ಲವೆ ಗವಿಗಳುಂಟೆಂದು ಗರುಡ ಪುರಾಣದಲ್ಲಿ ಹೇಳಿರುತ್ತದೆ. ಅದರಲ್ಲಿ

ಒಬ್ಬೊಬ್ಬನು ತನ್ನತನ್ನ ಕ್ರಿಯಗಳಿಗೆ ತಕ್ಕ ಶಿಕ್ಷೆಯನ್ನನುಭವಿಸುತ್ತಾನೆ. ಇದರಲ್ಲಿ ಪ್ರೇತತ್ವ ನಿವೃತ್ತಿ ಆಗದ ಆತ್ಮಗಳು ಉಲ್ಕಾಮುಖ, ಕತಪೂತನ ಮುಂತಾದ ದೆವ್ವಗಳಾಗಿ ಮನುಷ್ಯರನ್ನು ಪೀಡಿಸುತ್ತವೆ.

ಪಾದ್ರಿ: ಇದು ಧರ್ಮಶಾಸ್ತ್ರದಲ್ಲಿಯೂ ಬರದದೆ.

ಕೃಷ್ಣರಾ: ಮಹಾಭಾರತದಲ್ಲಿಯೂ ಬ್ರಹ್ಮನು ಉಂಟು ಮಾಡಿ ದಂಥ ಇರುಳೂ ಹಗಲೂ ತಿರುಗಾಡುವಂಥ ಭೂತಗಳ ವಿಷಯ ಬ ರದದೆ.

ಪಾದ್ರಿ: ಅದರ ಅಭಿಪ್ರಾಯವನ್ನು ನೋಡಿದರೆ ಜನರು ಭೂತವೆಂ ದು ಈಗ ಹೇಳುವಂಥಾದ್ದಕ್ಕೂ ಇದಕ್ಕೂ ಬಹಳ ಹೆಚ್ಚು ಕಡಿಮೆಯುಂ ಟು; ಯಾಕಂದರೆ ಇದರಲ್ಲಿ ಹೇಳುವ ಪ್ರಕಾರ ಪಿಶಾಚರೂ ರಾಕ್ಷಸರೂ ಮನುಷ್ಯರೂ ಸಹ ಭೂತಗಳೆಂದು ಕಾಣುತ್ತದೆ. ಯಾಕಂದರೆ ಭೂತವಂ ದರೆ 'ಇರುವಂಥಾದ್ದು' ಎಂಬ ಅರ್ಥ ಉಂಟು. ಆದರೆ ಧರ್ಮಶಾಸ್ತ್ರ ದಲ್ಲಿ ಪಿಶಾಚರು ರಕ್ತದ ಆಶೆಯವರೆಂದೂ, ಭೂತಗಳು ಕತ್ತಲೆಯಲ್ಲಿ ರುವವುಗಳೆಂದೂ ಹೇಳುತ್ತದೆ. V, 50. III, 90.

ಇಂಥವರು ದೇವರ ಸನ್ನಿಧಾನದಲ್ಲಿರ ಬಹುದೋ?

ಚಂದ್ರಭ: ಏನು ಮಾಡುವಾ? ಹಾಗೆ ನಮ್ಮ ಪಿತೃಗಳು ಮಾಡು ತ್ತಾ ಇದ್ದರು; ಹಿಂಗೆಯೇ ನಾವು ಸಹ ನಂಬಿ ಮಾಡ ಬೇಕು.

ಪಾದ್ರಿ: ನೋಡಿರಿ! ಈಗ ವಿವರವಾಗಿ ತೋರಿಸಿದ ಭೂತಗಳಲ್ಲ ದೆ ಶಾಸ್ತ್ರದಲ್ಲಿ ಇನ್ನೂ ಬಹಳ ತರದ ಆತ್ಮಗಳನ್ನು ಗಂಧರ್ವ, ಯಕ್ಷ, ಪಿರಿತಿನಿ, ಕ್ರವ್ಯಾದ, ರಾತ್ರೀಚರ, ಶಾಕಿನಿ, ವೈತಾಳಿಕ ಮುಂತಾದ ಹೆ ಸರುಗಳುಳ್ಳವರನ್ನು ಕುರಿತು ಹೇಳುತ್ತದೆ; ಅದೇ ಪ್ರಕಾರ ಜೈನರ ಸಂ ಗ್ರಹಾಣಿ ಪ್ರಕರಣದಲ್ಲಿ ವ್ಯಂತರ, ಭಾವಂಪತಿ, ಮರ್ಕಿನಗಳ ವಿಷಯ ಬರದದೆ. ಖುರಾನಿನಲ್ಲಿ ಷಾಥಾನ್ ಇಲ್ಲವೆ ಸೈತಾನ್ ಆಗಿರುವ ಇ ಬ್ಲಿಷ್ ಎಂಬ ಮುಖ್ಯಸ್ಥನ ಕೆಳಗೆ ಲೆಖ್ಖವಿಲ್ಲದ ಕೆಟ್ಟ ಆತ್ಮಗಳಿದ್ದು, ಮ ನುಷ್ಯರನ್ನು ಶೋಧಿಸಿ ಕೆಡಿಸುತ್ತವೆ, ವಿಶೇಷವಾಗಿ ಜಿನ್ನುಗಳೆಂಬ ಆತ್ಮ ಗಳು ಮನುಷ್ಯರನ್ನು ಭಂಗಭವಣೆ ಮಾಡಿ, ಉಪದ್ರ ಕೊಟ್ಟು, ನಾಶನ ಮಾಡುವವು ಎಂದು ಬೋಧಿಸುತ್ತದೆ. ಹೀಗೆಯೇ ನಿಮ್ಮ ಹಿರಿಯರಿ

ಗೂ ಬೇರೆ ಪ್ರಜೆಗಳಿಗೂ ಭೂತಗಳು ಅಲ್ಲದೆ ಬೇರೆ ಬೇರೆ ಕೆಟ್ಟ ಆತ್ಮಗಳು ಸಹ ಇರುತಿದ್ದವೆಂದು ನೋಡುತ್ತೇವೆ. ಇವುಗಳಿಗೆ ಈಗ ಯಾಕೆ ಸೇವೆ ಮಾಡುವದಿಲ್ಲ? ಹಿರಿಯರು ಮಾಡಿದರೆಂದು ಹೇಳುತ್ತೀರಿ, ಆದರೆ ನೀವು ಭೂತಗಳಲ್ಲಿ ಇವುಗಳ ಸೇವೆಯನ್ನು ಬಿಡಲಿಕ್ಕೆ ಕಾರಣವೇನು? ಎಂಬ ಈ ಸಂಗತಿಯನ್ನು ಕುರಿತು ಸ್ವಲ್ಪ ತಿಳಿದವರಾದ ನೀವೂ, ಏನೂ ತಿಳಿಯದವರೂ, ಐಶ್ವರ್ಯವಂತರೂ, ಬಡವರೂ, ಹಿರಿಯರೂ, ಕಿರಿಯರೂ, ಎಲ್ಲರೂ ಭೂತಗಳ ವಿಷಯ ಸಾಧಾರಣವಾಗಿ ಹೇಳಿ ನಡಿಸುವದನ್ನೂ ನಿಮ್ಮ ಶಾಸ್ತ್ರದಲ್ಲಿ ಬರದದ್ದನ್ನೂ ಸ್ವಲ್ಪವಾದರೂ ಆಲೋಚನೆಗೆ ತೆಗದು ಕೊಂಡು ಪರೀಕ್ಷೆ ಮಾಡಿ ನೋಡಿದರೆ ಮತಿಯ ಪ್ರಕಾರ ಏನು ನೆನಸ ಬಹುದು?

ಪೂರ್ವ ಕಾಲದಿಂದ ಈಗಿನ ವರೆಗೆ ನಮಗೆ ಗೊತ್ತಾದ ಮನುಷ್ಯ ಚರಿತ್ರೆಯನ್ನು ನೋಡುವಾಗ ಕೆಟ್ಟ ಆತ್ಮಗಳುಂಟೆಂಬುವ ನಂಬಿಕೆ ಅವರೆಲ್ಲರಲ್ಲಿ ನಿಃಸಂಶಯವಾಗಿ ಇತ್ತೆಂತ ತಿಳುಕೊಳ್ಳ ಬಹುದು. ಪೂರ್ವದಲ್ಲಿ ಐಗುಪ್ತರಿಗೆ ಹೋತು ರೂಪ ದೈವವಾಗಿತ್ತು, ಅದಕ್ಕೆ ಇಸ್ರಯೇಲ್ಯರು ಸಹ ಮೆಚ್ಚಿದರು. ಅದೇ ಪ್ರಕಾರ ಬೇರೆ ಪ್ರಜೆಗಳ ಬಳಿಯಲ್ಲಿ ಪಿಶಾಚಿಗಳೂ ರಾತ್ರಿಭೂತಗಳೂ ಇದ್ದವು. ಏನೊಂದು ತರದ ಆತ್ಮವಾದರೂ ಇಲ್ಲವೆಂಬುವವರು ಕೆಲವು ಮಂದಿ ಇದ್ದರೂ, ಸಾಧಾರಣವಾಗಿ ಎಲ್ಲರು ಕೆಟ್ಟ ಆತ್ಮಗಳುಂಟೆಂದೂ, ಮನುಷ್ಯನು ಸತ್ತರೂ ಅವನ ಆತ್ಮವು ಸಾಯದೆ ಬದುಕುತ್ತದೆಂದೂ ಸತ್ಯವಾಗಿ ನಿಶ್ಚೈಸುತ್ತಾರೆ.

ರಾಮಶೆ: ಇದು ಹ್ಯಾಗೆ?

ಪಾದ್ರೆ: ಅದು ನಮಗೆ ಪೂರ್ಣವಾಗಿ ತಿಳಿಯುವದಿಲ್ಲವೆಂದು. ಅರಿಕೆ ಮಾಡುವದು ತಕ್ಕದ್ದಾಗಿರುತ್ತದೆ. ಆತ್ಮಭಾವದ ಸಂಗತಿಗಳು ನಮಗೆ ಬಹಳ ಮರೆಯಾದವುಗಳಾಗಿವೆ; ತಿಳಿಯದ ಜನರು ಬಹಳ ಸರ್ತಿ ಇಷ್ಟು ಚಿಕ್ಕ ಕಾರ್ಯವಾಗಿದ್ದರೂ ಅದು ತಮ್ಮ ಗ್ರಹಿಕೆಯನ್ನು ಮೀರುವಂಥಾದ್ದಾಗಿರುವದರಿಂದ ಭೂತ ಪಿಶಾಚರ ಮೋಸವೆಂದು ನೆನಸುತ್ತಾರೆ, ಮತ್ತು ಕುಯುಕ್ತಿಯುಳ್ಳವರ ಕೆಟ್ಟ ಕ್ರಿಯಗಳನ್ನು ಭೂತ ಮುಂತಾದ ಆತ್ಮಗಳೆಂದು ಪಾಮರರು ಲಘುವಾಗಿ ನಂಬುತ್ತಾರೆ. ಈ

ಪ್ರಕಾರ ಏನೊಂದು ಸುದ್ದಿ ಕೇಳಿ ಆಲೋಚನೆ ಮಾಡದೆ ನಂಬುವವರಾಗಿ ಮನಸ್ಸು ಬಂದ ಹಾಗೆ ಅದರ ವಿಷಯದಲ್ಲಿ ಮಾತಾಡಿ, ಅದು ವಿದ್ಯುಕ್ತವೋ? ಸ್ವಸ್ಥ ಮತಿಗೆ ಸಮ ಬೀಳುತ್ತದೋ? ಏನೋ ಎಂದು ವಿಚಾರಣೆ ಮಾಡದೆ ಇರುತ್ತಾರೆ. ಇದಕ್ಕೆ ಸ್ವಲ್ಪ ಮಾತ್ರ ಒಬ್ಬನು ಆಲೋಚನೆ ಮಾಡಿ ಒಂದು ಪ್ರಾಣಿ ಅಂದರೆ ಏನು? ಮತ್ತು ನನ್ನ ಪ್ರಾಣಿ ಎಂಬುವದು ಏನು? ಎಂದು ಸ್ವಸ್ಥ ಬುದ್ಧಿಯಿಂದ ಗ್ರಹಿಸಲಿಕ್ಕೆ ನೋಡಿದರೆ ಭೂತ ಪ್ರೇತಗಳ ಮೋಸವೆಂದು ಸುಮ್ಮನೆ ನೆನಸಲಿಕ್ಕೆ ಅನೇಕ ಸಾರಿ ಮಾರ್ಗ ಉಳಿಯದು. ಇದನ್ನು ಕುರಿತು ಆಲೋಚನೆ ಮಾಡದೆ ಇರುವವರಲ್ಲಿ ಎಷ್ಟು ಮೋಸ ಆಗ ಬಹುದೆಂಬುವದನ್ನು ಒಂದು ಕಥೆಯಲ್ಲಿ ತೋರಿಸುತ್ತೇನೆ:

ಮಹಾರಾಷ್ಟ್ರ ದೇಶದಲ್ಲಿ ಒಬ್ಬ ಬ್ರಾಹ್ಮಣನು ತನ್ನ ಹೆಂಡತಿಯ ಸಂಗಡ ಜಗಳದಲ್ಲಿ ಇದ್ದದರಿಂದ ಮನೆಯನ್ನು ಬಿಟ್ಟು ಕಾಶಿಗೆ ಯಾತ್ರೆಯಾಗಿ ಹೋಗುತ್ತೇನೆಂದು ಹೇಳಿ ಎದ್ದನು. ಆರು ತಿಂಗಳಿನ ಮೇಲೆ ಕಾಶಿಗೆ ಹೋಗುವ ದಾರಿಯಲ್ಲಿರುವಾಗ ಒಂದು ಊರಿನಿಂದ ಅವನ ಹೆಂಡತಿಗೆ ಒಂದು ಲಖೋಟೆ ಬಂತು. ಈ ಲಖೋಟೆಯ ಅಭಿಪ್ರಾಯ ಯಾವದೆಂದರೆ: ಕಾಶಿಗೆ ಹೋಗುವವನಾಗಿರುವ ಒಬ್ಬ ಬ್ರಾಹ್ಮಣನು ದಾರಿಯಲ್ಲಿ ರೋಗದವನಾಗಿ ಈ ಊರಿಗೆ ಬಂದಾಗ ಅವನ ಕೈಯಲ್ಲಿ ಸ್ವಲ್ಪ ಹಣವೂ ವಸ್ತ್ರವೂ ಇತ್ತು; ಕೆಲವು ದಿವಸ ಇಲ್ಲಿದ್ದ ಮೇಲೆ ರೋಗವು ಹೆಚ್ಚಾಗಿ ಪ್ರಾಣ ಸಂಕಟದಲ್ಲಿದ್ದು ಸತ್ತು ಹೋಗುವಾಗ ತನ್ನ ಶ್ರಾದ್ಧ ಮಾಡುವ ಖರ್ಚಿಗೆ ತನ್ನ ವಸ್ತ್ರಗಳನ್ನು ಮಾರುವದಕ್ಕೆ ಅಪ್ಪಣೆ ಕೊಟ್ಟು ಊರಿನಲ್ಲಿರುವ ತನ್ನ ಹೆಂಡತಿಗೆ ಸತ್ತ ವರ್ತಮಾನ ತಿಳಿಸ ಬೇಕೆಂದು ಹೇಳಿದನು. ಈ ವರ್ತಮಾನವನ್ನು ಅವನ ಸಂಸಾರದವರು ಸತ್ಯವೆಂದು ನಂಬಿ ಅವನ ಸಹೋದರರು ಅವನಿಗೆ ಶ್ರಾದ್ಧವನ್ನು ಮಾಡಿದರು, ಅವನ ಹೆಂಡತಿಯು ಬಳೆ ಮೂಗುತಿ ಇತ್ಯಾದಿ ತೆಗದು ಕ್ಷೌರ ಮಾಡಿಸಿ ವಿಧವೆಯಂತೆ ಇದ್ದಳು. ಈ ವರ್ತಮಾನ ಬಂದು ಮುಟ್ಟಿದ ಒಂದು ತಿಂಗಳಿನ ಮೇಲೆ ಆ ವಿಧವೆಗೆ ಸ್ವಪ್ನ ಬಿತ್ತು; ಆ ಸ್ವಪ್ನದಲ್ಲಿ ತನ್ನ ಗಂಡನನ್ನು ನೋಡಿ ಇಗೋ ನಾನು ಭೂತವಾಗಿ ನಿನ್ನ ಬಳಿಗೆ ಬಂದು, ನೀನು ಮುಂಚೆ ನನಗೆ ವಿಧೇಯವಾಗಿರದೆ ನಾನಾ ತರದ ಕಷ್ಟ ಕೊಟ್ಟದದರಿಂದ ನಾ

ನು ಈಗ ನಿನಗೆ ಕಷ್ಟ ಕೊಡುತ್ತೇನೆಂದು ತನಗೆ ಹೇಳುವ ತನ್ನ ಗಂಡನ ಶಬ್ದವನ್ನು ಕೇಳಿದಳು. ಅವಳು ನಿದ್ರೆಯಿಂದ ಎಚ್ಚತ್ತು ಕೂಗಿ ಅತ್ತಳು; ಬೆಳಗಾಗುವಾಗ ಅವಳು ಬಹಳ ಜ್ವರ ಹಿಡಿದವಳಾಗಿ ನಡುಗುತ್ತಾ ಇದ್ದಳು. ನಿನಗೇನಾಯಿತೆಂದು ಮನೆಯವರು ಕೇಳುವಾಗ ಆದ ಸಂಗತಿಯನ್ನು ತಿಳಿಸಿದಳು. ಅದರ ಮೇಲೆಯೂ ಕೆಲವು ಸಾರಿ ತನ್ನ ಗಂಡನನ್ನು ನೋಡಿದ್ದೇನೆಂದು ನಿಶ್ಚಯ ಮಾಡಿ ಹೇಳಿದಳು. ಈ ಪ್ರಕಾರ ಏಳು ತಿಂಗಳು ದಾಟಿ ಹೋದವು. ಒಂದು ದಿನದಲ್ಲಿ ಅವಳು ತನ್ನ ಮನೆಯಲ್ಲಿ ಕೂತು ಕೊಂಡು ಅಳುತ್ತಾ ಇರುವಾಗ ಸತ್ತು ಹೋದನೆಂದು ತಿಳು ಕೊಂಡ ತನ್ನ ಗಂಡನು ಅವಳ ಮುಂದೆ ಬಂದು ಬಾಗಲಿನ ಹತ್ತರ ನಿಂತಿರುವದನ್ನು ನೋಡಿ, ಅವಳು ಬಹಳ ಭಯ ಪಟ್ಟಳು. ಅವನ ಸಹೋದರನ ಹೆಂಡತಿಯು ಉಪ್ಪರಿಗೆಯ ಕೋಣೆಯಿಂದ ಬಾಗಲಿನ ಹತ್ತರ ನಿಲ್ಲುವವನನ್ನು ಕಂಡು ತನ್ನ ಗಂಡನನ್ನು ಕರಿಯಲಿಕ್ಕೆ ಹೋಗಿ, ಇಗೋ ನಿಮ್ಮ ಸತ್ತ ಸಹೋದರನು ಕೆಳಗೆ ಇದ್ದಾನೆಂದು ಹೇಳಿ, ಅವಳೂ ಅವಳ ಗಂಡನೂ ಕೂಡ ಬಂದು ಬಾಗಲಲ್ಲಿ ನಿಂತವನನ್ನು ನೋಡಿ, ಉಪ್ಪರಿಗೆಯ ಕೋಣೆಯಿಂದ ಇಳಿದು ಕೆಳಗೆ ಬರುವಷ್ಟರೊಳಗೆ ಕೆಳಗೆ ನಿಂತಿದ್ದವನು ಕಾಣದೆ ಹೋದನು. ಮನೆಯೊಳಗಿದ್ದ ಆ ಸಹೋದರನು ಇದನ್ನು ಕಂಡು ಬಹಳ ಆಶ್ಚರ್ಯ ಪಟ್ಟು, ಕೆಲವು ಮಂದಿ ನೆರೆಯವರ ಬಳಿಗೆ ಹೋಗಿ, ಇದನ್ನು ಕುರಿತು ವಿಚಾರಣೆ ಮಾಡಿದನು. ಕೆಲವು ಮಂದಿ ಯಾರೋ ಒಬ್ಬನು ಬಾಗಲಿನ ಮುಂದೆ ನಿಂತದ್ದನ್ನು ನೋಡಿದೆವು; ಅವನು ಯಾರು? ಎಲ್ಲಿಂದ ಬಂದನು? ಎಲ್ಲಿಗೆ ಹೋದನೆಂದು ನಾವರಿಯೆವು ಎಂದು ಹೇಳಿದ್ದು ಹೊರ್ತಾಗಿ ಏನೂ ನಿಜವಾದ ಸಂಗತಿಯನ್ನು ತಿಳಿದು ಕೊಳ್ಳಲಿಕ್ಕೆ ಆಗಲಿಲ್ಲ. ಅಂದಿನಿಂದ ಆ ಸಹೋದರನ ಮಕ್ಕಳು ಮುಂಚಿನ ಹಾಗೆ ಸ್ವಸ್ಥದಲ್ಲಿ ಇರಲಿಲ್ಲ; ಆಗಲವನ ಹೆಂಡತಿ: ನಿಮ್ಮ ಸಹೋದರನು ಅವರನ್ನು ಹಿಡಿದು ಕೊಲ್ಲಲಿಕ್ಕೆ ನೋಡುತ್ತಾನೆ. ಇದಲ್ಲದೆ, ನಾನು ಒಂದು ಸಮಯದಲ್ಲಿ ಆ ಸತ್ತು ಹೋದವನನ್ನು ಬೆಕ್ಕಿನ ರೂಪ ಉಳ್ಳವನಾಗಿ ನೋಡಿದೆನೆಂದು ಹೇಳಿದಳು. ಅದೇ ಪ್ರಕಾರ ಒಬ್ಬ ನೆರೆಯವನು, ಆ ಸತ್ತ ಬ್ರಾಹ್ಮಣನನ್ನು ಮೇಕೆಯ ರೂಪದಲ್ಲಿ ನೋಡಿದೆನೆಂದು ಹೇ

ಳಿದನು. ಈ ತರದ ಬೇರೆ ಸುದ್ದಿಗಳು ಸಹ ಆದವು; ಮತ್ತು ಊರಿನ
ವರು ರಾತ್ರಿಯಲ್ಲಿ ಬೀದಿಗೆ ಹೋಗಲಿಕ್ಕೆ ಬಹಳ ಭಯ ಪಟ್ಟರು; ಸ
ಹೋದರರು ಸತ್ತವನನ್ನು ಈ ಪ್ರೇತತ್ವದಿಂದ ಬಿಡಿಸಲಿಕ್ಕೆ ಬೇಕಾದ ಬೇ
ರೆ ಬೇರೆ ಕಾರ್ಯಗಳನ್ನು ಮಾಡಿದರು. ತಮ್ಮ ಸ್ವಂತ ಮನೆಯಲ್ಲಿ ಸಹ
ಒಂದು ಸ್ಥಳವನ್ನು ವಿಂಗಡಿಸಿ ಶುದ್ಧ ಮಾಡಿ ಪೂಜೆ ನಡಿಸಿದರು. ಕೆಲ
ವು ತಿಂಗಳು ಈ ಪ್ರಕಾರ ನಡಿಯಿತು; ಆ ಬ್ರಾಹ್ಮಣನು ಮನೆಯನ್ನು
ಬಿಟ್ಟು ಹೊರಟು ಎರಡು ವರ್ಷ ಕಳದನಂತರ ಒಂದು ದಿನದಲ್ಲಿ ಊ
ರಿನ ಹೊರಗೆ ಒಂದು ತೋಟದಲ್ಲಿ ಒಬ್ಬ ಮನುಷ್ಯನು ಕೂತು ತನ್ನ ಸಂ
ಸಾರದವರಲ್ಲಿ ಯಾರಾದರೂ ಒಬ್ಬನು ಬರ ಬೇಕೆಂದು ಜನರನ್ನು ಹೇ
ಳಿ ಕಳುಹಿಸಿದನು. ಅವರು ಬಂದು ಸತ್ತು ಹೋದನೆಂದು ತಾವು ನೆನ
ಸಿದ ತಮ್ಮ ಸಹೋದರನು ಜೀವದಲ್ಲಿದ್ಧಾನೆಂದು ಬಹು ಆಶ್ಚರ್ಯ ಪ
ಟ್ಟು, ಇದು ಹ್ಯಾಗೆ ಆಯಿತೆಂದು ಕೇಳುವಾಗ, ಅವನು ಆದ ವೃತ್ತಾಂ
ತವನ್ನೆಲ್ಲಾ ಹೇಳಿ — ಆ ಕಾಗದವನ್ನು ಬರದು ಸತ್ತು ಹೋದೆನೆಂಬ
ಸುದ್ದಿಯನ್ನು ಎಬ್ಬಿಸಿದವನು ನಾನೇ. ನನ್ನ ಹೆಂಡತಿಯನ್ನು, ಅವಳು
ಬಹಳವಾಗಿ ಹೆದರುವ ಹಾಗೆ ಮಾಡಿದರೆ ಆದೀತೆಂದು ಯೋಚಿಸಿ
ಹೀಗೆ ಮಾಡಿದ ಮೇಲೆ ಕಾಶಿಗೆ ಯಾತ್ರೆಯಾಗಿ ಹೋಗಿ ಕೆಲವು ತಿಂಗಳ
ನ ಮೇಲೆ ತಿರಿಗಿ ಬಂದರೆ ಒಳ್ಳೇದಾದೀತು ಎಂದು ನೆನಸಿ ಕೊಂಡು, ಒಂದು
ದಿನ ಸಾಯಂಕಾಲದ ಹೊತ್ತಿನಲ್ಲಿ ಮನೆಗೆ ಬಂದು ನನ್ನನ್ನು ಅವಳಿಗೆ
ತೋರಿಸಿ ಕೊಂಡು, ಅಲ್ಲಿಂದ ರಾಮೇಶ್ವರಕ್ಕೆ ಹೋಗಿ ಈಗ ತಿರಿಗಿ ಬಂ
ದೆನು ಅಂದನು. ಈ ಪ್ರಕಾರ ಎಲ್ಲರೂ ನಾಚಿಗೆ ಪಟ್ಟು ಮನಸ್ಸು
ಬಂದ ಹಾಗೆ ಯಾವದನ್ನಾದರೂ ನಂಬಿದದರಿಂದ ದೊಡ್ಡ ಮೋಸವಾ
ಯಿತೆಂದು ತಿಳುಕೊಂಡು, ಆ ಭೂತದ ಮಂಚವನ್ನು ತೆಗದು ಮುರಿದು
ಹಾಕಿದರು. ಇದು ಶುಮಾರು ಮೂವತ್ತು ವರುಷಗಳ ಮುಂಚೆ ನಡೆ
ದ ನಿಜವಾದ ಸಂಗತಿಯಾಗಿದೆ. ಆ ಬ್ರಾಹ್ಮಣನ ಮಕ್ಕಳಲ್ಲಿ ಇಬ್ಬರು
ಇನ್ನೂ ಜೀವದಲ್ಲಿರುತ್ತಾರೆ. ನೋಡಿರಿ, ಈ ಪ್ರಕಾರ ಸುಮ್ಮನೆ ಭೂತಗ
ಳೆಂದು ಹೆದರಿ ಮೋಸ ಹೋಗುತ್ತೀರಿ.

ಅದಕ್ಕೆ ಎಲ್ಲರೂ ಬಹಳ ಆಶ್ಚರ್ಯ ಪಟ್ಟು ಕೊಂಡಿರುವಾಗ

ಪಾಟಾಳಿ ಪೂ: ಹೌದು ನಿಜ ಜೂತಗಳ ವಿಷಯ ಅರಿತು ಕೊಳ್ಳುವದು ಮನುಷ್ಯನ ಬುದ್ಧಿಗೆ ಹ್ಯಾಗೂ ಪೂರ್ಣವಾಗಿ ಅಸಖ್ಯ.

ಕೃಷ್ಣರಾ: ಜೂತದ ಸಂಗತಿಯು ಸತ್ಯವೋ ಸುಳ್ಳೋ ಮೋಸವೋ ಎಂದು ತಿಳಿದು ಕೊಳ್ಳಲಿಕ್ಕೆ ಬಹಳ ಬುದ್ಧಿಯೂ ಶಕ್ತಿಯೂ ಇದ್ದ ವರಿಗೆ ಸಹ ಅನೇಕ ಸಾರಿ ಕಷ್ಟವಾಗುತ್ತದೆ.

ಪಾದ್ರೆ: ಹಾಗಾದರೆ ಅದರ ವಿಷಯದಲ್ಲಿ ಸತ್ಯವನ್ನು ತಿಳಿದು ಕೊಳ್ಳುವದಕ್ಕಾಗಿ ನಮ್ಮ ಸತ್ಯವೇದವಾಗಿರುವ ದೇವರ ಮಾತನ್ನು ಕೇಳ ಬೇಕು; ಇದರ ಬೋಧನೆಯನ್ನು ಹೊಂದುವದು ಹೆಚ್ಚು ಅವಶ್ಯವೂ ತಕ್ಕದ್ದೂ ಆಗಿದೆ. ಇದರಲ್ಲಿ ನಮಗೆ ತೋರಿಸುವದೇನಂದರೆ: ಆದಿಯಲ್ಲಿ ಯೆಹೋವನಾದ ದೇವರು ಪರಲೋಕವನ್ನೂ ಜೂಲೋಕವನ್ನೂ ತನ್ನ ವಾಕ್ಯದಿಂದಲೇ ಉಂಟು ಮಾಡಿ, ಆರು ದಿವಸಗಳಲ್ಲಿ ಎಲ್ಲಾ ಜೀವರಾಶಿಗಳ ಸೃಷ್ಟಿಯನ್ನು ತೀರಿಸಿದನು. ಪರಲೋಕದಲ್ಲಿ ಸೈನ್ಯಗಳ ರಾಶಿಯಾಗಿರುವ ದೂತರನ್ನು ಪರಲೋಕ ಜಾವಕ್ಕೆ ತಕ್ಕದ್ದಾಗಿರುವ ಶುದ್ಧ ಆತ್ಮಗಳಾಗಿ ನಿತ್ಯಕ್ಕೆ ಬದುಕಿ, ತನ್ನ ಸೇವೆ ಮಾಡ ಬೇಕೆಂಬುವದಕ್ಕಾಗಿ ಉಂಟು ಮಾಡಿದನು. ಈ ಜೂಮಿಯಲ್ಲಿ ಯೆಹೋವನಾದ ದೇವರು ಮನುಷ್ಯನನ್ನು ಎಲ್ಲಾ ಸೃಷ್ಟಿಯ ಯಜಮಾನನಾಗಿ ತನ್ನ ಪ್ರತಿರೂಪದಲ್ಲಿ ಉಂಟು ಮಾಡಿದನು. ಆದಿಯಲ್ಲಿ ದೂತರೂ ಮನುಷ್ಯರೂ ಶುದ್ಧ ಜಾಗ್ಯವಾಗಿರುವ ದೇವರ ಐಕ್ಯದಲ್ಲಿ ಇದ್ದದರಿಂದ ಎಲ್ಲಾ ಪೂರ್ಣ ಪ್ರೀತಿಯಲ್ಲಿ ನಡಿಯಿತು; ಆದರೆ ದೂತರ ಮುಖ್ಯಸ್ಥರಲ್ಲಿ ಲುಸಿಫೆರೆಂಬ ಒಬ್ಬನು, ದೇವರ ಹೊರ್ತಾಗಿ ನಡಿಯ ಬೇಕೆಂದು ದೇವರಿಗೆ ವಿರೋಧವಾಗಿ ಎದ್ದು, ತನಗೆ ಸ್ವತಂತ್ರವಾಗಿರುವ ಸಾಮರ್ಥ್ಯದಿಂದ ದೇವರ ಚಿತ್ತವನ್ನೂ ಆಲೋಚನೆಯನ್ನೂ ಮೀರಿದನು. ತನ್ನ ಜೀವದ ಮೂಲವಾಗಿರುವ ದೇವರಿಗೆ ದುಷ್ಟ ಮನಸ್ಸಿನಿಂದ ಬೇರೆಂದು ದೂರವಾಗಿ, ತನಗೆ ಇದ್ದ ಬೆಳಕಿನ ಮಹಿಮೆಯ ಜಾವಕ್ಕೆ ತಪ್ಪಿ ಹೋಗಿ, ಬೇರೆ ದೂತರನ್ನು ಸಹ ತನ್ನ ಸಂಗಡ ನಾಶನಕ್ಕೆ ವೈದು, ಸತ್ಯವನ್ನು ಪೂರ್ಣವಾಗಿ ಬಿಟ್ಟು, ಸುಳ್ಳನ್ನೂ ಕತ್ತಲೆಯನ್ನೂ ಪ್ರೀತಿ ಮಾಡಿ, ಅಂಧಕಾರದ ರಾಜ್ಯವನ್ನು ಸ್ಥಾಪಿಸಿದನು. ಇವರಲ್ಲಿ ಅವನು ಸೈತಾ

ನನೆಂಬ ಮುಖ್ಯಸ್ಥನಾಗಿ ಆಳಿ, ಬಹಳ ತ್ರಾಣವೂ ಕತ್ತಲೆಯ ಆಯುಧಗಳುಳ್ಳ ಯುಕ್ತಿಯ ತಂತ್ರದ ಆತ್ಮವೂ ಆಗಿದ್ದು, ಆಕಾಶದಲ್ಲಿಯೂ ಭೂಮಿಯಲ್ಲಿಯೂ ತಾನು ತನ್ನ ಕೈಕೆಳಗಿರುವ ಅಶುದ್ಧ ಆತ್ಮಗಳ ಮುಖಾಂತ್ರವಾಗಿಯೂ ತನ್ನ ಕೆಲಸವನ್ನು ಅದೃಶ್ಯವಾಗಿ ನಡಿಸುತ್ತಾನೆ. ಈ ಆತ್ಮಗಳು ದೇವರ ಸಮುಖದಿಂದ ಹೊರಗೆ ಬಿಸಾಡಲ್ಪಟ್ಟು ಕತ್ತಲೆಯ ಸಂಕೋಲೆಗಳಲ್ಲಿ ಕಟ್ಟಲ್ಪಟ್ಟವರಾಗಿ ದೇವರ ಭಯಂಕರವಾದ ನ್ಯಾಯತೀರ್ವಿಕೆಗೂ ಶಾಪಕ್ಕೂ ನರಕದ ದಂಡಣೆಗೂ ಕಾದು ಕೊಳ್ಳುತ್ತಾರೆ. ಇದು ಸತ್ಯವಾಗಿರುವ ದೇವರ ವಾಕ್ಯವು. ಇದರಲ್ಲಿ ಮನುಷ್ಯನ ವಿಷಯದಲ್ಲಿರುವದನ್ನು ಸಹ ಕೇಳುವಾ! ದೇವರ ಪ್ರತಿರೂಪದಲ್ಲಿ ಉಂಟಾದ ಮನುಷ್ಯನು ಏದೆನ್ ಇಲ್ಲವೆ ಪರದೈಸೆಂಬ ತೋಟದಲ್ಲಿ ಇದ್ದು ವ್ಯವಸಾಯ ಮಾಡಿದನು. ಅವನು ಮಣ್ಣಿನ ಶರೀರದವನಾಗಿ ದೂತರಿಗಿಂತ ಸ್ವಲ್ಪ ಕಡಿಮೆಯವನಾಗಿದ್ದಾನೆ; ಆದರೆ ದೇವರ ಪ್ರತಿರೂಪದವನು, ಅಂದರೆ ದಿವ್ಯ ಬುದ್ಧಿ ಶುದ್ಧತ್ವ ತ್ರಾಣ ಭಾಗ್ಯವುಳ್ಳವನಾಗಿ ದೇವರ ಹೆಸರಿನಲ್ಲಿ ದೇವರಿಗೆಂದು ಎಲ್ಲವನ್ನು ಮಾಡಿ, ಭೂಮಿಯನ್ನು ತುಂಬಿಸ ಬೇಕಾಗಿತ್ತು. ಅವನ ಶರೀರ ಮಣ್ಣಿನ ಭಾವವುಳ್ಳದ್ದು ಆಗಿರುವ ಒಂದು ಪಾತ್ರೆಯಾಗಿಯೂ ಮಾಡ ಬೇಕಾದ ಎಲ್ಲಾ ಕೆಲಸಗಳಿಗೆ ತಕ್ಕದ್ದೂ, ಪ್ರಾಣಕ್ಕೂ ಆತ್ಮಕ್ಕೂ ಪೂರ್ಣವಾಗಿ ಸಮವೂ, ಆಗಿರುವ ಬಿಡಾರದ ಹಾಗೆ ಈ ಲೋಕದಲ್ಲಿ ಇರುವ ತನಕ ಪ್ರಾಣದ ಸಂಗಡ ಒಂದೇ ಜೀವವಾಗಿದೆ. ಮನುಷ್ಯನ ಆತ್ಮವು ದಿವ್ಯ ಆತ್ಮಭಾವವುಳ್ಳದ್ದಾಗಿ ಸ್ವತಂತ್ರವೂ ಅಮರತ್ವವೂ ವ್ಯಕ್ತವೂ ಜೀವವಾಗಿ, ಆಲೋಚನೆಯೂ ಮನಸ್ಸೂ ಇಚ್ಛೆಯೂ ಉಳ್ಳದ್ದಾಗಿ, ಶರೀರದ ಸಂಗಡ ಜೀವದ ಐಕ್ಯದಲ್ಲಿ ಇರುತ್ತದೆ. ಆತ್ಮದ ಮುಖಾಂತ್ರದಿಂದ ಮಣ್ಣಿನ ಭಾವದ ಶರೀರವು ಸಹ ಹೆಚ್ಚು ಹೆಚ್ಚಾಗಿ ಆತ್ಮಭಾವದ್ದು ಆಗುತ್ತಾ, ಈ ಪ್ರಕಾರ ಮನುಷ್ಯನು ಪೂರ್ಣ ಅಮರತ್ವ ಉಳ್ಳವನಾಗಿ, ದೇವರ ಸಮೀಪಕ್ಕೂ ಮಹಿಮೆಗೂ ಸೇರಲಿಕ್ಕೆ ಯೋಗ್ಯನಾಗಿ, ದೂತರಿಗಿಂತ ದೊಡ್ಡವನಾಗ ಬೇಕಾಗಿತ್ತು.

ಪಾಟಾಳಿ ಪೂ: ಇದು ನಿಶ್ಚಯವಾಗಿ ರಮ್ಯವಾಗಿತ್ತು, ಆದರೆ ಈಗ ನೋಡುವಾಗ ಎಲ್ಲಾ ಕೆಟ್ಟಿತು.

ಪಾದ್ರೆ: ಹೌದು, ಈಗ ಪಾಪವೂ ಅದರ ಮುಖಾಂತ್ರ ದುಃಖವೂ ಮರಣವೂ ಎಲ್ಲಾ ಮನುಷ್ಯರೊಳಗೆ ಬಂದದರಿಂದ ದೇವರು ಚಿತ್ತದ ಪ್ರಕಾರವಾಗಿದ್ದ ನಿರ್ಣಯವು ವ್ಯತ್ಯಯವಾಯಿತು. ಹೀಗೆ ಮನುಷ್ಯನು ತನಗೆ ಅನುಗ್ರಹಿಸೋಣಾದ ದಿವ್ಯ ಮಹಿಮೆಗೆ ತಪ್ಪಿ ಹೋದನು.

ರಾಮು ಶೆ: ಹಾಗಾದರೆ ಇನ್ನು ಮುಂದೆ ಹ್ಯಾಗಾಗುವದು?

ಪಾದ್ರೆ: ದೇವರು ದಯೆಯೂ, ದೀರ್ಘಶಾಂತಿಯೂ ಉಳ್ಳವನಾಗಿದ್ದು ತಿರಿಗಿ ರಕ್ಷಣೆಯ ಮಾರ್ಗವನ್ನು ಮಾಡಿ, ಮನುಷ್ಯನಿಗೆ ಈ ಲೋಕದಲ್ಲಿ ದಯೆಯ ಗಡುವನ್ನಿಟ್ಟು, ನಾನಾ ತರದಲ್ಲಿ ಅವನನ್ನು ತನ್ನ ರಾಜ್ಯಕ್ಕೆ ಕರದು ವೈಯಲಿಕ್ಕೆ ನೋಡುತ್ತಾನೆ.

ರಾಮು ಶೆ: ಹಾಗಾದರೆ ಮನುಷ್ಯರೆಲ್ಲರೂ ಸಾಯುವದೇನು?

ಪಾದ್ರೆ: ಮನುಷ್ಯನು ಸಾಯುವಾಗ, ಆತ್ಮವು ಶರೀರವನ್ನು ಬಿಟ್ಟು ತನ್ನ ಸ್ಥಿತಿಗೆ ತಕ್ಕದ್ದಾಗಿರುವ ಒಂದು ಸ್ಥಳಕ್ಕೆ ಶೇರುತ್ತದೆ; ಹ್ಯಾಗಂದರೆ ದೇವಭಕ್ತಿ ಇಲ್ಲದವರು ಪಾತಾಳ ನರಕ ಎಂಬ ಸ್ಥಳಕ್ಕೆ ಹೋಗ ಬೇಕು; ದೇವಭಕ್ತರು ಪರಲೋಕಕ್ಕೂ ಪರದೈಸಕ್ಕೂ ದೇವರ ಪಟ್ಟಕ್ಕೂ ಶೇರಿ, ಅಲ್ಲಿ ತಮ್ಮ ಕರ್ತನಾದ ದೇವರ ಮುಂದೆ ಇರುವರು. ಇದು ನಿಶ್ಚಯವಾಗಿಯೂ ಸ್ಪಷ್ಟವಾಗಿಯೂ ತೋರುತ್ತದೆ; ಆದರೆ ಮನುಷ್ಯನು ಸತ್ತ ಮೇಲೆ ಅವನ ಆತ್ಮವು ಇನ್ನೂ ಭೂಲೋಕದಲ್ಲಿಯೇ ಇದ್ದು ವಿಶೇಷವಾಗಿ ಮನುಷ್ಯರಿಗೆ ಭಂಗ ಉಪದ್ರಮುಂತಾದ ಕೇಡು ಕೊಡ ಬಹುದೆಂಬದನ್ನು ಕುರಿತು ಸತ್ಯ ವೇದವೆಂಬ ದೇವರ ವಾಕ್ಯವು ಇಷ್ಟಾದರೂ ನಮಗೆ ಹೇಳಿರುವದಿಲ್ಲ. ಲೂಕ. ೧೬, ೨೬. ಯೋಬ್. ೭, ೯—೧೦. ಈ ವಚನಗಳಲ್ಲಿ ಬರದದ್ದನ್ನು ನೋಡುವಾಗ ಪ್ರೇತವು ಈ ಲೋಕದಲ್ಲಿರಲಿಕ್ಕೂ ಆ ಲೋಕದಿಂದ ತಿರಿಗಿ ಬರಲಿಕ್ಕೂ ಕೂಡದೆಂದು ಕಾಣುತ್ತದೆ. ಕೆಟ್ಟವರಾಗಿ ಸತ್ತು ಪಾತಾಳಕ್ಕೆ ಶೇರಿದವರು ತಿರಿಗಿ ಬರಲಿಕ್ಕೆ ಅಪ್ಪಣೆ ಇರುತ್ತಿದ್ದರೆ ಅನೇಕರು ಸಂಶಯವಿಲ್ಲದೆ ಬರುತ್ತಿದ್ದರು; ಆದರೆ ಇದು ದಾಟಲಿಕ್ಕೆ ಆಗದ ಹಾಗೆ ಒಂದು ಡೊಂಗರ ಇಟ್ಟದೆ; ಯಾಕಂದರೆ ಅವರು ಶೆರೆ ಹಿಡಿದವರಾಗಿದ್ದಾರೆ. ಈ ಪ್ರಕಾರ ದೇವರ ವಾಕ್ಯವು ನಮಗೆ ಬೋಧಿಸುತ್ತದೆ.

ಚಂದ್ರಚ: ನೀವು ಹೇಳುವದು ಎಲ್ಲಾ ಪ್ರೇತಗಳ ವಿಷಯವಾಗಿದೆ. ಭೂತಗಳ ವಿಷಯವಾಗಿ ನಿಮ್ಮ ಶಾಸ್ತ್ರ ಏನಾದರೂ ಹೇಳುವದುಂಟೋ?

ಪಾದ್ರಿ: ಹೌದು, ಪರಿಶುದ್ಧ ದೇವರ ದೂತರೂ ಪರಲೋಕದಲ್ಲಿರುವ ಭಾಗ್ಯವಂತರೂ ಅಲ್ಲದೆ ಬಹಳ ಕೆಟ್ಟ ಆತ್ಮಗಳುಂಟೆಂದೂ,ಈ ಕತ್ತಲೆಯ ಆತ್ಮಗಳು ಸೈತಾನನ ಅಧಿಕಾರದೊಳಗೆ ಇರುತ್ತವೆಂದೂ, ತೋರಿಸುತ್ತದೆ. ಈ ದೇಶದ ಜನರು ಸತ್ಯವನ್ನು ಸುಳ್ಳಿಗೆ ಮಾರ್ಪಡಿಸಿ ಇಲ್ಲವೆ ಬೆರಿಕೆ ಮಾಡಿ, ರೂಢಿಯಾದ ನಾನಾ ತರದ ಭೂತಗಳ ಮೋಸದ ಸಂಗತಿ ಹುಟ್ಟಿಸುತ್ತಾರೆಂದು ನೆನಸುತ್ತೇನೆ. ಈ ಆತ್ಮಗಳು ಲೋಕದಲ್ಲಿ ವಿಶೇಷವಾಗಿ ಮನುಷ್ಯರಲ್ಲಿ ಏನಾದರೂ ಮಾಡಲಿಕ್ಕೆ ಶಕ್ತರೋ ಏನೋ ಎಂದು ಈ ಹೊತ್ತು ನೋಡಲಿಕ್ಕೆ ಸಮಯವಿಲ್ಲ. ಈಗ ಬಹಳ ತಡವಾಯಿತು; ಬರುವ ವಾರದಲ್ಲಿ ತಿರಿಗಿ ಬರುವದಕ್ಕೆ ಮನಸ್ಸುಂಟು; ಆಗ ನೀವು ಸಹ ದಯ ಮಾಡಿ ಇನ್ನೊಮ್ಮೆ ಬಂದು ಒಂದೆರಡು ತಾಸು ಕೂತು ಕೊಳ್ಳ ಬಹುದಾದರೆ ಮಾತಾಡುವಾ.

ಹೀಗೆ ಹೇಳಿ ಸಲಾಮ್ ಮಾಡಿ ಹೊರಟರು.

ಯೆರಡನೇ ಸಂಭಾಷಣೆಯು

೨. ಭೂತಗಳ ಉಪದ್ರಗಳ ವಿಷಯ

ಪಾದ್ರಿ ಧೊರೆಯು ಮೇಲಿನ ಬುಧವಾರ ದಿನ ಬೆಳಿಗ್ಗೆ ಹೊತ್ತಾರೆ ಎದ್ದು ತಿರಿಗಿ ಹೊರಟು ಆ ಊರಿಗೆ ರಾಮಶೆಟ್ಟಿಯ ಅಂಗಡಿಯ ಹತ್ತರ ಬಂದಾಗ, ಅವನಾಗಲೀ ಬೇರೆ ಯಾರಾಗಲೀ ಅಲ್ಲಿರಲಿಲ್ಲ. ಸ್ವಲ್ಪ ಹೊತ್ತು ಕೂತು ಕೊಂಡ ಮೇಲೆ ಅವರು ಬಂದ ಸುದ್ದಿ ಬೇಗ ಆಯಿತು; ಮತ್ತು ಜನರು ಕುದುರೆಯನ್ನು ನೋಡಲಿಕ್ಕಾಗಿಯೂ, ಸೊಪ್ಪು ಕೊಯ್ಯಲಿಕ್ಕೆ ಕಾಡಿಗೆ ಹೋಗುವವರಾಗಿಯೂ ಬಂದರು. ಸ್ವಲ್ಪ ಹೊ

ತ್ರಿನ ಮೇಲೆ ರಾಮುಶೆಟ್ಟಿಯು ಬಂದು ಅಂಗಡಿಯ ಬಾಗಲನ್ನು ತೆರೆಯುವದಕ್ಕಿಂತ ಮುಂಚೆ ಕೃಷ್ಣರಾಯರೂ, ಅವರ ಸಂಗಡ ಸ್ವಲ್ಪ ಸಂಸ್ಕೃತ ಬಲ್ಲವರಾಗಿಯೂ ದೇವಸ್ಥಾನದಲ್ಲಿ ಪೂಜೆ ಮಾಡುವವರಾಗಿಯೂ ಇರುವ ಪುಟ್ಟಣ್ಣಾಚಾರ್ಯರೂ ಚಂದ್ರಭಟ್ಟರೂ ಬೇರೆ ಕೆಲವರೂ ಕೂಡಾ ಬಂದು ಸಲಾಮ್ ಮಾಡಿ ಕೂತರು.

ಪಾದ್ರೆ: ನೀವು ಬಂದದ್ದು ಸಂತೋಷವಾಯಿತು.

ಆಗಲವರು: ನಮಗೂ ಸಂತೋಷವಾಯಿತು, ಈ ಹೊತ್ತು ಬಹಳ ಬೆಳಿಗ್ಗೆ ಎದ್ದಿರಿ. ಈ ಪ್ರಕಾರ ಕೂಡ ಕೂತು ಕೊಂಡು ಮೊನ್ನೆ ಮಾತಾಡಿದ ಭೂತ ಮುಂತಾದವುಗಳ ಸಂಗತಿಯನ್ನು ತಿರಿಗಿ ಮನಸ್ಸಿಗೆ ತೆಗದು ಕೊಂಡು ಈ ಹೊತ್ತು ವಿಶೇಷವಾಗಿ ಭೂತಗಳ ಉಪದ್ರವೇನೆಂದು ವಿಚಾರಿಸಿ ನೋಡುವಾ! ಜನರು ಇದರ ವಿಷಯದಲ್ಲಿ ಬೇರೆ ಬೇರೆ ತರವಾಗಿ ಹೇಳುವ ಎಲ್ಲವನ್ನು ತೋರಿಸಲಿಕ್ಕೆ ಕೂಡುವದಿಲ್ಲ; ಅದರಲ್ಲಿ ಬುದ್ಧಿ ಇಲ್ಲದ ಅನೇಕ ಮಾತುಗಳು ಉಂಟು, ಎಲ್ಲರು ಸತ್ಯವಾದದ್ದೂ ಮುಖ್ಯವಾದದ್ದೂ ಎಂದು ಹೇಳುವ ಮಾತುಗಳ ಸಾರಾಂಶವನ್ನು ಸ್ವಲ್ಪ ಮಾತ್ರ ನೋಡುವಾ! ಚಂದ್ರಭಟ್ಟರು ಒಂದು ವೇಳೆ ಇದರ ವಿಷಯ ನಮಗೆ ಏನಾದರು ತಿಳಿಸುವರು.

ಚಂದ್ರಭ: ಲೋಕದಲ್ಲಿರುವ ಮನುಷ್ಯರು ಹೆಚ್ಚು ಹೆಚ್ಚಾಗಿ ಕೆಟ್ಟು ಹೋಗಿ ಒಬ್ಬರಿಗೊಬ್ಬರು ನಾನಾ ತರದ ಮೋಸವೂ ದೇವರಿಗೆ ವಿರೋಧವಾದ ಪಾಪವೂ ಮಾಡಿದದರಿಂದ ಶಿವನು ಅವರ ಶಿಕ್ಷೆಗಾಗಿ ೧೦೦೧, ಕೆಲವು ಮಂದಿ ಹೇಳುವ ಪ್ರಕಾರ ೧೫೦೦ ರೋಗ ಸಂಕಟಗಳನ್ನು ಕಳುಹಿಸಿದನು.

ಪಾದ್ರೆ: ಎರ್ಮಾಲಿನ ಬೀಡಿನಲ್ಲಿ ೧೦೦೧ ಭೂತಗಳುಂಟೋ?

ಚಂದ್ರಭ: ಅವರು ಹೌದು ಹೀಗಾಗಿರುತ್ತವೆ, ಆ ಸಮಯದಲ್ಲಿ ಉಂಟಾದ ಭೂತಗಳ ಒಟ್ಟು ರಾಶಿಯು ಶಿವನ ಮುಂದೆ ನಿರಾಕಾರವಾಗಿ ಬಂದು ನಮಸ್ಕಾರ ಮಾಡಿ ಹೇಳಿದ್ದೇನಂದರೆ: ಓ ಮಹಾ ದೇವಾ! ನೀನು ನಮ್ಮನ್ನು ಉಂಟು ಮಾಡಿದಿ, ಆದರೆ ನಮಗೆ ಈಗ ಬಹಳ ಹಶಿವೆ ದಾಹ ಉಂಟು; ನಮಗೆ ತಕ್ಕ ಆಹಾರ ಕೊಡು. ಯಾಕಂದರೆ

ನಮ್ಮ ಹಶಿವೆಯನ್ನೂ ದಾಹವನ್ನೂ ಇನ್ನು ಮುಂದೆ ನಮ್ಮಿಂದ ತಪಿಯ ಕೂಡದು. ಆಗ ಶಿವನೆಂಬ ಈಶ್ವರನು: ಇಗೋ! ನೀವು ಭೂಲೋಕಕ್ಕೆ ಹೋಗಿ ಪಾಪಿಷ್ಠರಾದ ಮನುಷ್ಯರಿಗೆ ಉಪದ್ರವ ಕೊಟ್ಟು, ಅವರಿಂದ ಆಹಾರ ತೆಗದು ಕೊಳ್ಳಿರೆಂದು ಅಪ್ಪಣೆ ಕೊಟ್ಟಾಗ, ಈ ಭೂತಗಳು ಉತ್ತರವಾಗಿ: ಓ ಶಿವನೇ! ಈ ಅಪ್ಪಣೆಯಿಂದ ನಮಗೆ ಸಂತೋಷವಾಯಿತು, ಆದರೆ ಲೋಕದಲ್ಲಿ ಪಾಪಿಷ್ಠರು ಯಾರೆಂದು ನಮಗೆ ತಿಳಿಯುವದಿಲ್ಲವೆಂದು ಹೇಳಿದರು. ಆಗ ಶಿವನು ಅಪ್ಪಣೆ ಕೊಟ್ಟು ಹೇಳಿದ್ದು: ಪಾಪಿಷ್ಠರಿಗೆ ನಾನು ಮುಂಚಿತವಾಗಿ ರೋಗವನ್ನು ಕಳುಹಿಸುತ್ತೇನೆ, ಆ ಮೇಲೆ ಬಹಳ ರೋಗಗಳಿಂದಲೂ ನಾನಾ ಉಪದ್ರಗಳಿಂದಲೂ ಬಾಧಿಸುತ್ತೇನೆ; ಇಂಥವರನ್ನು ನೋಡಿ ಹಿಡಿಯಿರಿ! ಹಾಗೆಯೇ ನಿಮಗೆ ಆಹಾರ ಸಿಕ್ಕುವ ಮಾರ್ಗವಾಗುವದು. ಯಾಕಂದರೆ ಅವರು ಯಕ್ಷಣಿಗಾರರನ್ನೂ ಜ್ಯೋತಿಷ್ಕರನ್ನೂ ಮಂತ್ರಜ್ಞರನ್ನೂ ಕೇಳಿ, ನಿಮಗೆ ಬೇಕಾದ ಆಹಾರವನ್ನು ಕೊಡುವರು; ಇದು ಭೂತಗಳ ವಿಷಯದಲ್ಲಿ ಹೇಳುವ ಒಂದು ತರದ ಕಥೆ.

ಪಾಟಾಳಿ ಪೂಜಾರಿಯು ಬಂದು ಒಂದು ಮಣೆಯ ಮೇಲೆ ಕೂತನು.

ಚಂದ್ರಭ: ಮತ್ತೊಂದು ರೀತಿಯ ಕಥೆಯನ್ನು ಕೇಳುವಾ!

ಪೂರ್ವದಲ್ಲಿ ಈಶ್ವರನು ಬಾಣಾಸುರನಿಗೋಸ್ಕರ ತನ್ನ ಬಲವನ್ನು ಕರ ಕೊಂಡು ಬಂದನು. ಯುದ್ಧ ಮಾಡಿದರೆ ಲೋಕವು ನಾಶವಾಗುವದೆಂದು ತಿಳಿದ ಕಾರಣ ಬ್ರಹ್ಮಾದಿ ದೇವತೆಗಳನ್ನು ವಿವೇಕ ಮಾಡಿ ಯುದ್ಧವನ್ನು ನಿಲ್ಲಿಸಿ ಈಶ್ವರನು ತಿರಿಗಿ ತನ್ನ ಬಲವನ್ನು ತೆಗದು ಕೊಂಡು ಕೈಲಾಸಕ್ಕೆ ಹೋಗುವಾಗ್ಯೆ, ಅವುಗಳಲ್ಲಿ ಕೆಲವು ಭೂತಗಣಂಗಳು ಅವರ ಸಂಗಡ ಹೋಗದೆ ಇದ್ದು, ಕಡೆಗೆ ಸೋತು ಕೈಲಾಸಕ್ಕೆ ಛಿನ್ನಾಭಿನ್ನರಾಗಿ ಬಂದದರಿಂದ ಈಶ್ವರನು ನೀವು ಮನುಷ್ಯ ಲೋಕಕ್ಕೆ ಹೋಗಿ ಬೀಳಿರೆಂದು ಅಪ್ಪಣೆ ಕೊಟ್ಟದ್ದಕ್ಕೆ, ಭೂತಗಳು — ಅಲ್ಲಿ ನಮಗೇನು ಗತಿ? ಎಂದು ಕೇಳಲು, ಮನುಷ್ಯರನ್ನು ಉಪದ್ರ ಪಡಿಸಿ ಅವರಿಂದ ಪಡ ಕೊಳ್ಳುವ ಬಲಿ ಪೂಜೆಗಳಿಂದ ಸಂತೃಪ್ತರಾಗಿರಿ ಎಂದು ಅಪ್ಪಣೆ ಕೊಟ್ಟ ಪ್ರಕಾರ ಈ ಭೂತಗಳು ಮನುಷ್ಯ ಲೋಕದೊಳಗಿದ್ದು ತಮ್ಮ ಭೋಗಕ್ಕೋಸ್ಕರ

ಕೋಲ, ಬಲಿ, ತಂಬಿಲ, ಅಗೆಲು ಮುಂತಾದ ಕಾರ್ಯಗಳನ್ನು ಪಡ ಕೊಳ್ಳುತ್ತವೆ.

ರಾಮಶೆ: ಮತ್ತು ಪಾಟಾಳಿ ಪೂ: ಈ ತರದ ಕಥೆಗಳು ಬಹಳ ಉಂಟು.

ಅಲ್ಲಿ ಕೂತವರೆಲ್ಲರು: ಹೌದು ಇದು ಸತ್ಯವಾದದ್ದಾಗಿದೆ. ದೇವರು ನಮಗೆ ಭೂತಗಳನ್ನು ಕಳುಹಿಸಿದನೆಂದು ಎಲ್ಲಾ ಜನರು ನಂಬುತ್ತಾರೆ.

ಪಾಟಾಳಿ ಪೂ: ಅದಕ್ಕಾಗಿ ನಮ್ಮ ಹಿರಿಯರು ಮಾಡಿದ ಪ್ರಕಾರ ನಾವು ಸಹ ಅವುಗಳಿಗೆ ಪೂಜೆ ಮುಂತಾದ್ದನ್ನು ಮಾಡ ಬೇಕು, ಇಲ್ಲ ದಿದ್ದರೆ ನಾವು ಅವುಗಳ ಉಪದ್ರದಿಂದ ಸಾಯುವೆವು.

ರಾಮಶೆ: ಭೂತಗಳು ದೇವರ ಚಾಕ್ರಿಯವರೇ. ಸರ್ಕಾರಿನ ಕೈಕೆ ಳಗೆ ಪ್ಯಾದೆರ ತನಕ ಇರುವ ಚಾಕ್ರಿಯವರನ್ನು ಹ್ಯಾಗೆ ಮೆಚ್ಚಿಸಲಿ ಕ್ಕೆ ನೋಡುತ್ತೇವೋ, ಹಾಗೆಯೇ ಭೂತಗಳನ್ನು ಮೆಚ್ಚಿಸ ನೋಡು ತ್ತೇವೆ; ಅವರಿಗೆ ಬಹಳ ಆಶ್ಚರ್ಯವಾದ ಕ್ರಿಯೆಗಳನ್ನು ನಡಿಸಲಿಕ್ಕೂ ಕ್ಷಣದಲ್ಲಿ ಕೊಲ್ಲಲಿಕ್ಕೂ ಕ್ಷಣದಲ್ಲಿ ವಾಸಿ ಮಾಡಲಿಕ್ಕೂ ಬೇಕಾದ ಸಾ ಮರ್ಥ್ಯ ಉಂಟು.

ಪಾದ್ರೆ: ಭೂತಗಳು ಈ ದೇಶಕ್ಕೆ ಎಲ್ಲಿಂದ ಬಂದವು?

ಕೃಷ್ಣರಾ: ಕೆಲವು ಭೂತಗಳು ಕಲಿಯುಗದ ಆರಂಭದಲ್ಲಿ ತೆಂಕಣ ಪಾಂಡ್ಯ ದೇಶದಿಂದಲೂ, ಮತ್ತು ಕೆಲವರು ಪೂರ್ವಘಟ್ಟಗಳ ಮೇಲಿ ನಿಂದಲೂ, ಬೇರೊಬ್ಬರು ಉತ್ತರದಿಂದ ಕಾಶಿಯ ಹತ್ತರ ಇರುವ ಒಂ ದು ದೇಶದಿಂದಲೂ ವಿಕ್ರಮಾದಿತ್ಯನೆಂಬ ಅರಸನು ಆಳುವ ಸಮಯ ದಲ್ಲಿ ಇಲ್ಲಿಗೆ ಬಂದವೆಂದು ಹೇಳುತ್ತಾರೆ.

ಪಾದ್ರೆ: ಈಗ ಸುತ್ತಲೂ ನೋಡಿದರೆ ಭೂತಗಳ ಸಂಗತಿಯು ವಿಶೇಷವಾಗಿ ಈ ತುಳು ದೇಶದಲ್ಲಿ ಬಲವಾಗಿರುವಂಥಾದ್ದು ಹ್ಯಾಗೆ?

ಚಂದ್ರಭ: ಭೂತಗಳು ಈ ದೇಶದಲ್ಲಿರುವ ಮುಖ್ಯ ಸ್ಥಳಗಳನ್ನು ಅಂದರೆ, ಸುಬ್ರಮಣ್ಯ, ಧರ್ಮಸ್ಥಳ, ಮೂಡಬಿದ್ರಿ ಎಂಬವುಗಳನ್ನು ಮೊದಲಾಗಿ ತಮಗೆ ವಶ ಮಾಡಿ ಕೊಂಡು, ತರುವಾಯ ಎಲ್ಲಾ ದೇಶ ವನ್ನು ಆಕ್ರಮಿಸುತ್ತಾ ಬಂದವಂತೆ.

ಪಾದ್ರೆ: ಹಾಗಾದರೆ ಈ ಪ್ರಕಾರ ಕೆಲವು ಭೂತಗಳು ಮುಂಚೆ ಬಂದ ಸ್ಥಳದಲ್ಲಿ ವಿಶೇಷವಾದದ್ದೇನಾದರು ಉಂಟೋ?

ಪಾಟಾಳಿ ಪೂ: ಉಂಟು ನಿಶ್ಚಯ! ಯಾವವಂದರೆ, ಧರ್ಮಸ್ಥಳದಲ್ಲಿ ಅಣ್ಣಪ್ಪನೆಂಬ ಭೂತವೂ, ಶಿಬಾರು ಇಲ್ಲವೆ ಶಿವಪುರದಲ್ಲಿ ಕುಡುಮಂದಾಯನೂ, ಹಾಗೆಯೇ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಭೂತಗಳು ಬಲವಾದವು.

ಪಾದ್ರೆ: ಒಂದು ಸ್ಥಳದಲ್ಲಿ ಇರುವ ಭೂತಗಳು ಬೇರೆ ಸ್ಥಳಗಳಲ್ಲಿರುವದು ಹ್ಯಾಗೆ?

ಚಂದ್ರಭ: ಭೂತಗಳು ತಮಗೆ ವಶ ಮಾಡಿ ಕೊಂಡ ಪ್ರೇತಗಳ ಮುಖಾಂತ್ರದಿಂದ ನಾನಾ ಸ್ಥಳಗಳಲ್ಲಿ ಒಂದೇ ಸಾರಿ ಇರ ಬಹುದು. ಹೀಗಿರುವದರಿಂದ ಕೆಲವು ಭೂತಗಳು ಕಾಶಿಯಿಂದ ಲಂಕಾ ದ್ವೀಪದ ತನಕ ನಡೆದು, ಅವುಗಳಿಗೆ ಪೂಜೆ ಮುಂತಾದ ಸೇವೆಯಾಗುತ್ತದೆ; ಜನರು ಇಂಥವುಗಳಿಗೆ ಬಹಳ ಭಯ ಪಡುವದುಂಟು.

ಪಾದ್ರೆ: ಇಂಥಾ ಭೂತಗಳು ಯಾವವು?

ನಡಿಯುತ್ತಿರುವ ಈ ಸಂಭಾಷಣೆಯಲ್ಲಿ ಪುಟ್ಟಣ್ಣಾಚಾರ್ಯರೂ ಶೇರಿ: ಇಂಥಾ ಭೂತಗಳು ಯಾರೆಂದು ಹೇಳುತ್ತೇನೆ; ಈ ತುಳುದೇಶದಲ್ಲಿ ಕುಡುಮಂದಾಯನೆಂಬುವವನಿಗೆ ಕಾಶಿಯಲ್ಲಿ ಖಡ್ಗಭೈರವನೂ, ಗಂಗಕುಮಾರನೂ, ಎಂಬ ಹೆಸರುಗಳುಂಟು; ಇಲ್ಲಿ ಜಾರಂದಾಯನೆಂಬುವವನಿಗೆ ಕಾಶಿಯಲ್ಲಿ ನೀಲಕಂತನೂ, ಕಾಲಭೈರವನೂ ಎಂಬ ಹೆಸರುಗಳಲ್ಲದೆ, ತಿರುಪತಿಯಲ್ಲಿಯೂ ವೆಂಕಟರಮಣನ ಬಾಗಲಿನ ಕಾವಲಿಯವನಾಗಿದ್ದು ಬೇರೆ ಏಳು ಹೆಸರುಗಳುಳ್ಳವನಾಗಿದ್ದಾನೆ. ಜುಮಾದಿ ಎಂಬವನಿಗೆ ತಿರುಪತಿಯಲ್ಲಿ ಕೆಂಜುರಾಯನೆಂದು ಹೇಳುತ್ತಾರೆ; ಲಂಕಾ ದ್ವೀಪದಲ್ಲಿಯೂ ಅದೇ ಹೆಸರು ಉಂಟಂತೆ.

ಪಾಟಾಳಿ ಪೂಜಾರಿಯು ಕೆಲವು ಭೂತಕಥೆಗಳನ್ನು ಹೇಳಿ, ಪಂಜುರ್ಲಿ, ಪಂಚಜನ, ಮೈಸಂದಾಯನು ಮುಂತಾದವುಗಳ ವಿಷಯ ಮಾತಾಡಿ ವಿವರಿಸಿದ್ದು: ಈಚೆಗೆ ಹೊಸತಾಗಿ ಬಂದ ಒರ್ತೆಕಲ್ಕುಟಿ

ಎಂಬ ಭೂತಕ್ಕೆ ಸಹಾ ಅದೇ ಪ್ರಕಾರ ಎಲ್ಲರೂ ಭಯ ಪಡುತ್ತಾರೆ; ಯಾಕಂದರೆ ಇವುಗಳು ಮನುಷ್ಯರಿಗೆ ಕೆಟ್ಟ ಸ್ವಪ್ನ ನೋಡುವ ಹಾಗೆ ಮಾಡಿ, ಕ್ಷಣದಲ್ಲಿ ಸಂಕಟ, ಅಂಗಹೀನತ್ವ, ಕ್ಷಯ ಮುಂತಾದ ರೋಗಗಳನ್ನು ಹುಟ್ಟಿಸುತ್ತವೆ. ವಿಶೇಷವಾಗಿ ಭೂತದ ಕಟ್ಟಳೆಗಳಿಗೆ ವಿರೋಧವಾಗಿ ನಡೆದು, ಅವುಗಳನ್ನು ಅಶುದ್ಧ ಮಾಡಿದವರಿಗೆ ಉಪದ್ರವನ್ನೂ ದನಗಳಿಗೆ ಅನೇಕ ನೋವುಗಳನ್ನೂ ಕೊಟ್ಟು, ಈ ಪ್ರಕಾರ ಎಲ್ಲರನ್ನು ದಣಿಸಿ ಕಷ್ಟ ಕೊಡುವದುಂಟಂತೆ.

ಪಾದ್ರೆ: ಹಾಗಾದರೆ ಕೃಷ್ಣರಾಯರೆ, ನಿಮ್ಮಲ್ಲಿ ಒಬ್ಬನು ಹುಟ್ಟಿದ ಆರನೇ ದಿವಸದಲ್ಲಿ ಅವನ ಗ್ರಹಚಾರವನ್ನು ಹಣೆಯಲ್ಲಿ ಬರಿಯುವದುಂಟಂತೆ; ಅದರ ವಿಷಯ ಏನು ಹೇಳುತ್ತೀರಿ? ಭೂತಗಳು ಅದನ್ನು ಮೀರ ಬಹುದೋ?

ಕೃಷ್ಣರಾ: ಈ ಭೂಮಿಯ ಮೇಲೆ ಉಂಟಾಗುವಂಥಾದೆಲ್ಲಾ ದೇವರಿಗೆ ಗೊತ್ತಿಲ್ಲವೋ? ಭೂತಗಳ ಸಂಗತಿಯು ಸಹಾ ಅದಕ್ಕೆ ಶೇರಿತು.

ಪಾದ್ರೆ: ಇದು ಹ್ಯಾಗೆ? ನೀತಿಯುಳ್ಳ ದೇವರು ಅನ್ಯಾಯಕ್ಕೆ ಮೆಚ್ಚುತ್ತಾನೋ? ಮೆಚ್ಚುವದಿಲ್ಲವೆಂದು ನಾನು ಬಲ್ಲೆನು. ಹಾಗೆಯೇ ನೀವು ನಿಮ್ಮ ಸ್ವಂತ ಮನಸ್ಸುಗಳಲ್ಲಿ ಅದು ದೇವರಿಗೆ ಆಗದ ಕಾರ್ಯವೆಂದು ತಿಳಿದು ಕೊಳ್ಳ ಬಹುದು. ಇದರಲ್ಲಿರುವ ಮೋಸವನ್ನು ತೋರಿಸಲಿಕ್ಕಾಗಿ ಒಂದು ದೃಷ್ಟಾಂತವನ್ನು ಕೊಡುತ್ತೇನೆ:

ಹತ್ತಿಪ್ಪತ್ತು ವರುಷಗಳ ಮುಂಚೆ ಅತ್ತೂರಿನ ಒಬ್ಬ ಒಕ್ಕಲಿಗನ ಮನೆಯಲ್ಲಿ ನಮಗೊಂದು ಶಾಲೆಯಿತ್ತು; ಆ ಶಾಲೆಯ ಉಪಾಧ್ಯಾಯನು ಒಬ್ಬ ಬ್ರಾಹ್ಮಣನಾಗಿದ್ದನು. ಅದು ಯಾವ ಪ್ರಕಾರ ನಡಿಯುತ್ತದೆಂದು ನೋಡಲಿಕ್ಕೆ ಅಂಮನ್ ಧೊರೆ ಕೆಲವು ಸಾರಿ ಅಲ್ಲಿಗೆ ಹೋದರು. ಸ್ವಲ್ಪ ಕಾಲದನಂತರ ಆ ಒಕ್ಕಲಿಗನ ಎತ್ತು ರೋಗದಲ್ಲಿ ಬಿದ್ದದರಿಂದ ಅವನು ಪ್ರಶ್ನೆ ನೋಡಲಿಕ್ಕೆ ಹೋದಾಗ, ನಿನ್ನ ಭೂತಗಳಿಗೆ ಅಶುದ್ಧವಾಯಿತೆಂದು ಉತ್ತರವಾಯಿತು. ಅವನು ಅದು ಹ್ಯಾಗೆ ಅಂತ ಕೇಳಿದ್ದಕ್ಕೆ — ನೀನು ಆಲೋಚನೆ ಮಾಡಿ ನೋಡು! ನಿನ್ನ ಮನೆಗೆ ಯಾರಾದರೂ ಬಂದು ಭೂ

ತಕ್ಕೆ ಉಪದ್ರ ಕೊಟ್ಟಿರುವರೆಂದು ಚಟ್ಟನು ಹೇಳಿದನು. ಆಗ ಆ ಒಕ್ಕಲಿಗನು: ಹೌದು, ಪಾದ್ರಿ ಧೊರೆಗಳು ಬಂದು ನನ್ನ ಅಂಗಳದಲ್ಲಿ ನಿಂತರು ಎಂದು ಹೇಳಲು, ಚಟ್ಟನು: ಇದರಿಂದಲೇ ನಿನ್ನ ಚೂತಗಳು ಶಿಟ್ಟು ಮಾಡಿ, ನಿನಗೆ ಉಪದ್ರ ಕೊಡಲಿಕ್ಕೆ ಕಾರಣವಾಯಿತೆಂದನು. ಆದನ್ನು ಒಕ್ಕಲಿಗನು ನಂಬಿ ತನ್ನ ಮನೆಯಲ್ಲಿದ್ದ ಶಾಲೆಯನ್ನು ತೆಗದು ಹಾಕಿದನು.

ರಾಮಶೆ: ಇದರಿಂದಲೇ ದನಗಳಿಗೆ ಉಪದ್ರ ಉಂಟಾಗುತ್ತದೆಂದು ಸ್ಪಷ್ಟವಾಗಿ ಕಾಣುತ್ತದೆ. ಈಗ ಕೇಳಿದ ಹಾಗೆಯೇ ಯಾರಾದರೂ ಒಂದು ಮನೆಯಲ್ಲಿ ಸಂಕಟದಲ್ಲಿದ್ದರೆ, ಅದಕ್ಕೆ ಏನಾದರೂ ಇಂಥಾ ಒಂದು ಕಾರಣ ಇರುವದು.

ಪಾದ್ರೆ: ಯಾವನೊಬ್ಬನು ಬುದ್ಧಿಯಲ್ಲಿಯೂ ತ್ರಾಣದಲ್ಲಿಯೂ ಕಡಿಮೆಯವನಾಗಿದ್ದು ಚಯ ಪಟ್ಟು ಹೋದರೆ, ಮುಂಚೆ ಕೇಳಿದಂಥ ಚೂತಗಳ ಉಪದ್ರದ ಸುದ್ದಿಯನ್ನು ನೆನಪು ಮಾಡಿ ಕೊಂಡು ಘಾಬರಿಯಾಗಿ ಸ್ವಯವಿಲ್ಲದವನ ಹಾಗೆಯೇ ಸುಮ್ಮನೆ ಕೂತು ಕೊಳ್ಳುವನು. ಸಂಸಾರದವರೂ ಗುರುತಿನ ನೆರೆಯವರೂ ಕೂಡಿ ಕೊಂಡು ಪರೀಕ್ಷೆ ಮಾಡಿ, ಒಬ್ಬನು ಹಾಗೆ, ಒಬ್ಬನು ಹೀಗೆ ಉಂಟೆಂದು ಹೇಳುವರು. ನಿಮಿತ್ತಗಾರರು ತಮ್ಮ ಮನಸ್ಸಿಗೆ ಬಂದ ಹಾಗೆ ಏನಾದರೂ ಹೇಳುವರು. ಆದರು ಎಲ್ಲರು ಚೂತಗಳ ಉಪಹತಿ ಎಂದು ತೋರಿಸುವದರಿಂದ, ಸಂಕಟದಲ್ಲಿ ಬಿದ್ದವನು ಹೆಚ್ಚಾಗಿ ಚಯ ಪಡುತ್ತಾನೆ; ಅವನನ್ನು ವಿಚಾರಿಸಿ — ನಿನಗೇನಾಗುತ್ತದೆ? ಎಂದು ಕೇಳುವಾಗ, ನನಗೇನೂ ಗೊತ್ತಿಲ್ಲ, ಎದೆಯಲ್ಲಿ ಒತ್ತುವ ಹಾಗೆಯೂ ಕೂಗ ಬೇಕೆಂಬ ಹಾಗೆಯೂ ಉಂಟು; ಈ ತರದ್ದೇನಾದರೂ ಹೇಳುತ್ತಾನೆ. ಆಗಲವರು ನಿನಗೆ ಹೀಗೆ ಆಗುವದಕ್ಕಿಂತ ಮುಂಚೆ ನೀನು ಎಲ್ಲಿದ್ದೀ? ಎಲ್ಲ್ಯಾದರು ಚಯ ಪಟ್ಟು ಹೋದಿಯೋ? ಇಲ್ಲವೆ ಏನಾದರೂ ಆಗದ್ದನ್ನು ತಿಂದಿಯೋ? ಎಂದು ಕೇಳಿ, ತಾವು ಊಹಿಸುವಂಥಾದ್ದೇನಾದರು ಅವನಲ್ಲಿ ಸಿಕ್ಕುವದೋ ಏನೋ ಎಂದು ಹುಡುಕುತ್ತಾ, ಸಂಕಟದವನನ್ನು ಹೆಚ್ಚಾಗಿ ಕೇಳಿ ಒತ್ತಾಯ ಮಾಡುತ್ತಾರೆ. ಆಗಲವನು ಈ ತರದ ಮಾತುಗಳನ್ನು ಕೇಳಿ ಆ ಕುರಿತು ಆಲೋಚನೆ ಮಾಡುತ್ತಾ, ದಣಿದು ಹೋದವನಾಗಿಯೂ,

ಏನಾದರೂ ಒಂದು ವಿಚಾರಣೆ ಮಾಡಿ ಸ್ವಯವಿಲ್ಲದವನಾಗಿಯೂ ಇದ್ದು, ಏನಾದರೂ ಊರಿಸಿ, ಒಂದು ವೇಳೆ ಕೂಗುವನು. ಆಗ ಹತ್ತರ ಇರುವವರು ಅವನ ಕೂಗನ್ನು ಕೇಳಿ ಸಂಕಟದವನ ಸ್ವರವು ಸ್ವಲ್ಪ ಬೇರೆ ತರವಾಗಿರುವದರಿಂದ ಒಂದು ಭೂತ ಅವನನ್ನು ಹಿಡಿದು ಮಾತಾಡಿಸುತ್ತದೆಂದು ನೆನಸಿ ಕೊಂಡು ನಿಶ್ಚಯಿಸಿ ಹೇಳುತ್ತಾರೆ. ಸಂಕಟದವನು ಇದನ್ನು ನಂಬಿ, ನಡುಗಿ, ಬೇರೆ ತರದ ಮನಸೋ ಇಚ್ಛೆ ಮಾತಾಡಿ, ಇಲ್ಲದ ಅನರ್ಥಗಳನ್ನು ಮಾಡಿ, ದೆವ್ವ ಹಿಡಿದವನಂತೆಯೇ ತೋರಿಸಿ ಕೊಳ್ಳುವನು. ಭೂತವು ವಿಶೇಷವಾಗಿ ಹೆಂಗಸರಿಗೂ ಮಕ್ಕಳಿಗೂ ಈ ಪ್ರಕಾರ ಉಪಹುತಿ ಕೊಟ್ಟು, ನಾನಾ ತರದ ಸಂಕಟಗಳನ್ನು ಹುಟ್ಟಿಸುತ್ತದೆಂದು ಜನರು ಸುಮ್ಮನೆ ನೆನಸುತ್ತಾರೆ. ಮೂಢರಾದ ಎಲ್ಲರೊಳಗೆ ಇಂಥಾ ವಿಷಮಾಲೋಚನೆ ಇರುವದರಿಂದ ಏನೊಂದು ಅಪರೂಪವಾದಂಥ ಕಾರ್ಯವನ್ನು ಅವರು ನೋಡಲು ಅದು ದೆವ್ವ ಭೂತಪ್ರೇತ ಪಿಶಾಚಿಗಳಿಂದ ಉಂಟಾದದ್ದೆಂದು ಬೇಗ ನಂಬುತ್ತಾರೆ. ಹೌದು, "ಸತ್ಯವಿದ್ದರೆ ಎತ್ತಲೂ ಭಯವಿಲ್ಲ"; ಆದರೆ "ಮಳೆಗೆ ಹೆದರಿ ಹೊಳೇಲಿ ಬಿದ್ದ ಹಾಗೆ" ಎಂಬುವದು ಈ ವಿಷಯದಲ್ಲಿಯೂ ಹೋಲುತ್ತದೆ.

ಚಂದ್ರಭ: ಹಾಗಾದರೆ ಸಂಕಟವಾಗುವದು ಭೂತಗಳಿಂದಲ್ಲವೆಂದು ನೆನಸುತ್ತೀರೋ? ಮತ್ತು ನಿಮಿತ್ಯದ ಪ್ರಚಾರವೆಲ್ಲಾ ಪೂರ್ಣ ಮೋಸವೆಂದು ನೆನಸುತ್ತೀರೋ?

ಪಾದ್ರಿ: ನಿಮಿತ್ಯದಲ್ಲಿ ಸತ್ಯವಿದ್ದರೆ ನನಗೆ ತೋರಿಸಿರಿ.

ಚಂದ್ರಭ: ನಾವು ಕ್ರಮದ ಪ್ರಕಾರ ಗಣಿತ ಮಾಡಿ ಅದನ್ನು ನೋಡಿ ಹೇಳುತ್ತೇವೆ. ಆದರೆ ಅದರಲ್ಲಿ ಸುಳ್ಳು ಸಹಾ ಇರುವದು; ಮತ್ತು ತಿಳಿಯದ ಜನರನ್ನು ಮೆಚ್ಚಿಸಲಿಕ್ಕಾಗಿ ಒಂದೊಂದು ಸಾರಿ ಏನಾದರು ಹೆಚ್ಚು ಹೇಳ ಬೇಕಾಗುತ್ತದೆ. ಏನು ಮಾಡುವದು? ಕಲಿಯುಗವಲ್ಲವೋ? ಪೂರ್ಣ ಸತ್ಯವೆಲ್ಲಿ ನಡಿಯುತ್ತದೆ?

ಪಾದ್ರಿ: ರೋಗಗಳು ಪಾಪದಿಂದ ಹುಟ್ಟುತ್ತವೆ; ಇದನ್ನು ನೀವು ಸಹ ಸ್ವಲ್ಪ ಮುಂಚೆ ಒಂದು ಕಥೆಯನ್ನು ಹೇಳಿ ತೋರಿಸಿದಿರಿ. ಪಾಪಗಳನ್ನು ಪರಿಹರಿಸುವದು ದೇವರ ಕೆಲಸವಾಗಿದೆ. ಅದೇ ಪ್ರಕಾರ

ಪಾಪಶಿಕ್ಷೆಯನ್ನು ಭೂತಗಳಲ್ಲ, ದೇವರೇ ಪರಿಹರಿಸ ಬೇಕು. ಜನರು ತಾವು ಭಯ ಪಡುವದರಿಂದ ಮಾತ್ರ ಇಂಥಾ ಬುದ್ಧಿಹೀನ ಕೆಲಸವಾಗುತ್ತದೆ; ಹೌದು ಬುದ್ಧಿಹೀನತೆಯೆ ಎಂದು ಅನೇಕರು ಹೇಳುತ್ತಾರೆ. ಇದನ್ನು ಗ್ರಹಿಸುವವರಾದ ನೀವು ಸತ್ಯವಂತರಾಗಿ, ತಿಳಿಯದವರಿಗೆ ಸ್ಪಷ್ಟವಾಗಿ ತೋರಿಸುವದು ನ್ಯಾಯವಾಗಿದೆ.

ಚಂದ್ರಭ: ಏನು ಮಾಡುವಾ?

ಪಾದ್ರಿ: ಹೌದು ಏನು ಮಾಡ ಬೇಕೆಂಬುವದು ಗೊತ್ತಿದ್ದರೂ ಅದಕ್ಕೆ ಒಪ್ಪಲಿಕ್ಕೆ ಮನಸ್ಸು ಇಲ್ಲದವರಾಗಿರುವದರಿಂದ ತಪ್ಪಿಸಲಿಕ್ಕೆ ನೋಡುತ್ತೀರಿ; ಆದರೆ ದೇವರ ಕೈಯಿಂದ ತಪ್ಪಿಸಿ ಕೊಳ್ಳಲಿಕ್ಕೆ ಯಾರಿಂದಲೂ ಕೂಡದು. ಭೂತಗಳ ಸಂಗತಿಯು ಒಂದು ಭ್ರಮೆ ಮಾತ್ರವಾಗಿರುತ್ತದೆಂಬದಕ್ಕೆ ದೃಷ್ಟಾಂತವಾಗಿ ಒಂದು ಕಥೆ ಹೇಳುತ್ತೇನೆ ಕೇಳಿರಿ!

ಒಂದಾನೊಂದು ದಿವಸದಲ್ಲಿ ಒಬ್ಬನು ಎಂಟು ಮಂದಿ ಬಡಿಗೆಯವರನ್ನು ಕರಕೊಂಡು ಕಾಡಿಗೆ ಹೋಗಿ ಒಂದು ದೊಡ್ಡ ಮರವನ್ನು ಕಡಿಸಿದನು. ಮರ ಬೀಳುವಾಗ ಬಡಿಗೆಯವರಲ್ಲಿ ಒಬ್ಬನಿಗೆ ನೋವಾಯಿತು; ಇನ್ನು ಹೆಚ್ಚೇನಾದರು ಆಗುವದೆಂದು ನೆನಸಿ ಎಲ್ಲರೂ ಬಹಳ ಭಯ ಪಟ್ಟದರಿಂದ, ಅವನು ಸಹ ಹೆಚ್ಚು ಭಯಸ್ಥನಾಗಿ ಬಹಳ ಕೂಗಿದನು; ಮತ್ತು ಮೂರ್ಛೆಯಾಗಿ ಬಿದ್ದನು. ಕೆಲವು ಘಳಿಗೆ ಪರ್ಯಂತರ ತನ್ನನ್ನು ಭೂತ ಹಿಡಿಯಿತೆಂದು ತಾನೇ ಮಾತಾಡಿ ಹೇಳಿದ್ದೇನಂದರೆ: ಈ ಮರವು ನನಗೆ ಕೂತುಕೊಳ್ಳಲಿಕ್ಕೆ ಕೊಟ್ಟದ್ದಾಗಿತ್ತು, ಆದರೆ ನೀವು ಕಡಿಯಲಿಕ್ಕೆ ಬಂದು ಕಡಿಯುವವರಲ್ಲಿ ನೀನೇ ಮೊದಲನೆಯವನಾಗಿ ಕೊಡ್ಲಿಯಿಂದ ಕಡಿದ ನಿನ್ನನ್ನು ಹಿಡಿದು ಕೊಂಡೆನು. ನೀನು ನೂರೆಂಟು ಬ್ರಾಹ್ಮಣರಿಗೆ ಊಟ ಕೊಟ್ಟರೆ, ನಿನ್ನನ್ನು ಬಿಡುತ್ತೇನೆಂದು ಹೇಳಿತು. ನೋಡಿರಿ, ಇಂಥಾ ಸಂಗತಿಗಳಲ್ಲಿ ಅನೇಕ ಸಾರಿ ಭ್ರಮೆ ಮಾತ್ರವಲ್ಲ, ಒಂದೊಂದು ಸಾರಿ ದುರ್ಬುದ್ಧಿಯೂ ಮೋಸ ಮಾಡುವ ಮನಸ್ಸೂ ಕೂಡಿರುವದುಂಟು. ಇದು ವಿಶೇಷವಾಗಿ ಹೆಂಗಸರ ವಿಷಯ ನೋಡ ಬಹುದು; ಹ್ಯಾಗಂದರೆ: ಕೆಲಸ ಮಾಡಲಿಕ್ಕೂ ತಮ್ಮ ಗಂಡರೊಡನೆ ಒಪ್ಪಿನದಿಂದ ನಡಿಯಲಿಕ್ಕೂ ಮನಸ್ಸಿಲ್ಲದವರು ತಮಗೆ ಭೂತಗಳಿಂದ ಉಪದ್ರ

ವಾಯಿತೆಂದೂ, ಭೂತ ತಮ್ಮನ್ನು ಹಿಡಿದು ಮನೆಯಲ್ಲಿ ಕೂತು ಕೊಳ್ಳಲಿಕ್ಕೆ ಬಿಡುವದಿಲ್ಲವೆಂದೂ, ತೋರಿಸಲಿಕ್ಕೆ ಈ ತರದ ನೆವನಗಳಿಂದ ಬೇರೊಂದು ಊರಿಗೆ ಹೋಗಿ ಕೂತು ಕೊಳ್ಳಲಿಕ್ಕಾಗುವ ಹಾಗೆ ಮಾಡುತ್ತಾರೆ.

ಇದನ್ನು ಕೇಳುವಾಗ ಎಲ್ಲರೂ ನೆಗಾಡಿ ಇದು ವಾಜಬೀ ಮಾತೆಂದು ಹೇಳಿದರು.

ಪಾದ್ರೆ: ಏನಾದರು ಒಂದು ಅಪರೂಪವಾದ ಸ್ವರವನ್ನು ಇಲ್ಲವೆ ರಾತ್ರಿಯಲ್ಲಿ ಎಲ್ಲಾದರು ಒಂದು ಶಬ್ದವನ್ನು ಕೇಳಿ ಅಥವಾ ದೂರದಲ್ಲಿ ಉರಿದು ಮಿಂಚುವ ಬೆಳಕನ್ನು ಕಂಡರೆ, ಅನೇಕರು ಇದು ಒಂದು ಪಿಶಾಚಿ ಎಂದು ಹೇಳುತ್ತಾರೆ. ಈ ಪ್ರಕಾರ ಬೇಗ ಭಯ ಪಡುವ ಜನರು ಲಘುವಾಗಿ ಮೋಸ ಹೋಗುತ್ತಾರೆ. ಅದಕ್ಕೂ ದೃಷ್ಟಾಂತ ಕೊಡುತ್ತೇನೆ:

ಕೆಲವು ವರುಷಗಳ ಮುಂಚೆ ಇಪ್ಪತ್ತೆರಡು ಜನರು ಯಾತ್ರೆಗೆ ಹೋಗುವಾಗ ರಾತ್ರಿಯಲ್ಲಿ ಒಂದು ಊರನ್ನು ದಾಟಿ ಹೋಗ ಬೇಕಾಯಿತು. ಅವರಲ್ಲಿಬ್ಬರು ಮಿಕ್ಕಾದವರಿಗೆ ತಿಳಿಯದೆ ಮುಂದೆ ನಡೆದು ಒಂದು ಬಾವಿಯ ಹತ್ತರ ಹೋಗಿ ನೀರು ಕುಡಿದರು; ಹಿಂದುಳಿದ ಇಪ್ಪತ್ತು ಜನರು ಆ ಬಾವಿಯ ಹತ್ತರ ಬರುವಾಗ, ಅವರಲ್ಲಿ ಒಬ್ಬನು — ಇಗೋ ಇಲ್ಲಿ ಒಂದು ಬಾವಿಯಲ್ಲಿ ಬಹಳ ಭೂತಗಳು ಇರುತ್ತವೆ, ಅವುಗಳ ದೆಶೆಯಿಂದ ಯಾವ ಮನುಷ್ಯನಾದರೂ ಹಗಲಲ್ಲಿ ಒಂಟಿಗನಾಗಿ ಈ ಬಾವಿಯನ್ನು ದಾಟಿ ಹೋಗಲಿಕ್ಕೆ ಕೂಡುವದಿಲ್ಲವೆಂದು ಹೇಳಿದನು. ಅವರು ಇದರ ವಿಷಯ ಮಾತಾಡುತ್ತಾ ಬಾವಿಗೆ ಬಂದು ಮುಟ್ಟಿದರು; ಆಗ ಮುಂದಾಗಿ ಬಂದ ಆ ಇಬ್ಬರು ನೀರು ಕುಡಿದು ಬಾವಿಯಿಂದ ಏರಿ ಮೇಲಕ್ಕೆ ಬರುವದನ್ನು ನೋಡಿ, ಎಲ್ಲರು ಓಡಿ ಹೋಗುವಾಗ, ಒಬ್ಬನ ಮೇಲೊಬ್ಬನು ಬಿದ್ದು, ಒಬ್ಬನ ಮೆಟ್ಟುಗಳು ಕಳಚಿ ಬಿದ್ದವು, ಮತ್ತೊಬ್ಬನ ಮುಂಡಾಸು ಬಿಚ್ಚಿ ಹೋಯಿತು, ಕೆಲವು ಮಂದಿಗೆ ಘಾಯವಾಯಿತು, ಈ ಪ್ರಕಾರ ಸುಮಾರು ಒಂದು ಹರದಾರಿ ದೂರ ಓಡಿ ಹೋಗಿ, ಕಡೇಲಿ ಆ ಇಪ್ಪತ್ತು ಜನರು ಎಲ್ಲ ಮೆಲ್ಲನೆ ಒಟ್ಟಿಗೆ ಕೂಡಿ ಬಂದರು. ಆ ಬೇರೆ ಇಬ್ಬರಿಗೆ ಏನಾಯಿತೆಂದು ಒಂದೆರಡು ಘಳಿಗೆ ಹಾದಿಯಲ್ಲಿ ಕೂತು ಆಲೋಚನೆ

ಮಾಡಿದರು; ಅಷ್ಟರೊಳಗೆ ಇವರು ಸಹಾ ಬಂದರು. ಮತ್ತು ಎಲ್ಲರೂ ಆದ ಸಂಗತಿಯನ್ನು ತಮ್ಮೊಳಗೆ ಮಾತಾಡಿ, ಈ ಪ್ರಕಾರ ತಮ್ಮ ಬುದ್ಧಿ ಹೀನತ್ವವನ್ನು ತಿಳುಕೊಂಡು, ಒಬ್ಬರನ್ನೊಬ್ಬರು ನೋಡಿ ನೆಗಾಡಿದರು.

ರಾಮಶೆ: ಒಂದೊಂದು ಸಾರಿ ಹೀಗೆ ಮೋಸವಾಗುವದುಂಟು, ಆದರೆ ಇದಕ್ಕಾಗಿ ಭೂತಗಳು ಇಲ್ಲವೆಂದು ನಾನು ಸರ್ವಥಾ ನಂಬೆನು.

ಪಾದ್ರೆ: ಭೂತವಿಲ್ಲವೆಂದು ಹೇಳುವದಿಲ್ಲ; ನೀವು ನೆನಸುವ ಪ್ರಕಾರ, ಭೂತವು ನಿಮಗೆ ಉಪದ್ರ ಕೊಡಲಾರವು ಎಂದು ಮಾತ್ರ ಹೇಳುತ್ತೇನೆ.

ಕೃಷ್ಣರಾ: ಈಗ ಅದು ಹಾಗಿರಲಿ! ಮತ್ತೆ ನೋಡುವಾ! ಇನ್ನೊಂದು ಸಂಗತಿ ಉಂಟು, ಅದನ್ನು ಈಗ ಹಿಡಿಯುವಾ! ಈ ಜೀವದಲ್ಲಿರುವ ಪರ್ಯಂತರ ಮಾತ್ರವಲ್ಲ, ಸಾಯುವ ಸಮಯದಲ್ಲಿಯೂ ಸತ್ತ ಮೇಲೆಯೂ ಭೂತಗಳ ಕೈವಶ ಶಿಕ್ಕಲಿಕ್ಕಾಗದು ಎಂಬ ದೊಡ್ಡ ಭಯ ಎಲ್ಲರಲ್ಲಿ ಉಂಟಲ್ಲ?

ಚಂದ್ರಭ: ಒಬ್ಬನು ಅಪಮೃತ್ಯುವಾಗಿ ಸತ್ತನೋ? ಕಾಲ ಮೃತ್ಯುವಾಗಿ ಸತ್ತನೋ? ಏನೋ? ಎಂದು ಮನುಷ್ಯರಿಗೆ ಅನೇಕ ಸಾರಿ ತಿಳಿಯುವದಿಲ್ಲ, ಅದಕ್ಕಾಗಿ ಸಾಯುವವರೆಲ್ಲರಿಗೋಸ್ಕರ ಪ್ರೇತತ್ವ ನಿವೃತ್ತಿ ಮಾಡುವದು ತಕ್ಕದ್ದಾಗಿದೆ; ಮಾಡದಿದ್ದರೆ ಭೂತಗಳು ಪ್ರೇತವನ್ನು ಹಿಡಿದು, ಬೇಕಾದಷ್ಟು ಭಂಗ ಉಪದ್ರಗಳನ್ನು ಕೊಡುತ್ತವೆ.

ರಾಮಶೆ: ಜನರು ವಿಶೇಷವಾಗಿ ಇಹದಲ್ಲಿ ಕೆಟ್ಟವರಾಗಿಯೂ ಗರ್ವಿಷ್ಠರಾಗಿಯೂ ದುಷ್ಟರಾಗಿಯೂ ಇದ್ದು ಸತ್ತು ಹೋದವರಿಗೆ ಭಯ ಪಡುತ್ತಾರೆ. ಇಂಥವರು ಯಾರಂದರೆ: ಮುಂಚೆ ಬಹಳ ಪೋಕರಿತನದಲ್ಲಿ ನಡದ ಕೋಟಿ ಚೆನ್ನಯರೆಂಬ ಇಬ್ಬರು ಬಿಲ್ಲವರಾಗಿದ್ದ ಬೈದ್ಯರುಗಳೂ, ಬಬ್ಬರ್ಯನೆಂಬ ಅನೇಕ ದುಷ್ಟ ಕೃತ್ಯಗಳನ್ನು ಮಾಡಿದ ತುರ್ಕನೂ, ತಮ್ಮೊಳಗೆ ಝಗಳಾಡಿ ಒಬ್ಬಳನ್ನೊಬ್ಬಳು ಕೊಂದು ಕೊಂಡ ಇಬ್ಬರು ಸಹೋದರಿಗಳಾಗಿರುವ ಅಬ್ಬಗೆ ದಾರಗೆ ಎಂಬ ಬಂಟರ ಸ್ತ್ರೀಯರೂ ಆಗಿರುತ್ತಾರೆ. ಇವರ ಕಥೆ ಇದನ್ನು ತೋರಿಸುತ್ತದೆ.

ಚಂದ್ರಪ್ರಭ: ಕುಟುಂಬದವರಲ್ಲಿ ಯಾರಾದರೂ ಸರಿ! ತಾಯಿಯಾಗಲಿ, ತಂದೆಯಾಗಲಿ ಸತ್ತು ಹೋದರೆ, ಉಳಿದವರು ಸಾಧಾರಣವಾಗಿ ಕೆಲವು ಸಮಯದ ವರೆಗೆ ಭಯ ಪಡುತ್ತಾರೆ.

ಪುಟ್ಟಣ್ಣಾಚಾ: ವಿಶೇಷವಾಗಿ ಒಬ್ಬನ ಹೆಂಡತಿ ಸತ್ತು ಹೋಗಿ, ಅವನು ಮತ್ತೊಬ್ಬಳನ್ನು ಮದಿವೆ ಮಾಡಿ ಕೊಂಡರೆ, ಈ ಎರಡನೇ ಹೆಂಡತಿಯು ಮುಂಚಿನವಳಿಗೆ ಬಹಳ ಭಯ ಪಡುವದುಂಟು.

ಕೃಷ್ಣರಾ: ಹೌದು, ನನ್ನ ಮತ್ತು ನನ್ನ ಅಣ್ಣನ ಚರಿತ್ರೆ ಅದಕ್ಕೆ ದೃಷ್ಟಾಂತವಾಗಿದೆ; ಏನಂದರೆ, ೨೩ ವರ್ಷಗಳಿಗಿಂತ ಮುಂಚೆ ನನ್ನ ಅಣ್ಣನ ಹೆಂಡತಿ ೧೮ ವರುಷ ಪ್ರಾಯದವಳಾಗಿ ಪ್ರಸೂತವಾಗಿ ಆಗಲೇ ಅಪಮೃತ್ಯುವಾಗಿ ಸತ್ತು ಹೋದಳು. ಅವನು ಬೇಗ ಎರಡನೇ ಸಾರಿ ಒಬ್ಬಳನ್ನು ಮದುವೆ ಮಾಡಿ ಕೊಂಡನು. ಅವಳು ಆರು ಏಳು ವರುಷಗಳಿದ್ದು, ಚೊಚ್ಚಿಲ ಮಗನನ್ನು ಹೆತ್ತು, ಹತ್ತು ದಿವಸ ತನಕ ಎಲ್ಲಾ ಕ್ಷೇಮವಾಗಿತ್ತು. ಹತ್ತನೇ ದಿವಸದಲ್ಲಿ ಒಂದು ಕ್ಷಣದಲ್ಲಿ ತನಗೆ ತಲೆನೋವು ಉಂಟೆಂದು ಹೇಳಿ, ಸ್ಥಿರವಿಲ್ಲದವಳ ಹಾಗೆಯೇ ಮಾತಾಡಿ, ತನ್ನ ಸ್ವರ ಪಲ್ಲಟ ಮಾಡಿ, ಹುಚ್ಚಳ ಹಾಗೆ ಕೂಗಿ ಹೇಳಿದ್ದೇನಂದರೆ:

ನಾನು ಮುಂಚಿನ ಹೆಂಡತಿ; ನಾನು ಇನ್ನೂ ಇದ್ದೇನೆ; ನನ್ನ ಚಿನ್ನವನ್ನೆಲ್ಲಾ ನೀನು ಇಟ್ಟು ಕೊಂಡಿ; ನಿನ್ನನ್ನು ನಾನು ಬಿಡುವೆನೆಂದು ನೆನಸುತ್ತಿಯೋ? ನಿನ್ನನ್ನು ಬಿಡೆನು, ನೀನು ಹೋಗ ಬೇಕು! ಈ ಮೊದಲಾದ ಮಾತುಗಳನ್ನು ಹೇಳಿದಳು; ಅದೇ ಸ್ಥಿತಿಯಲ್ಲಿ ಮೂರು ದಿವಸವೂ ಇದ್ದು, ತರುವಾಯ ಸತ್ತು ಹೋದಳು. ಆ ಮೇಲೆ ಅವನು ಮೂರನೇ ಸಾರಿ ಮದುವೆ ಮಾಡಿ ಕೊಂಡನು; ಈ ಮೂರನೆಯವಳು ಸ್ವಲ್ಪ ಪುಷ್ಟಳಾಗಿದ್ದಳು. ಕೆಲವು ವರುಷಗಳನಂತರ ಅವಳು ಸಹ ಒಂದು ಗಂಡು ಮಗುವನ್ನು ಹೆತ್ತು ಆರು ದಿವಸ ಪರಿಯಂತರ ಸ್ವಸ್ಥದಲ್ಲಿ ಇದ್ದಳು; ಏಳನೇ ದಿನದಲ್ಲಿ ಅವಳು ನಡುಗಲಿಕ್ಕೆ ತೊಡಗಿ, ನನಗೆ ಭಯ ಉಂಟು, ನನ್ನ ಹತ್ತರ ಕೂತು ಕೊಳ್ಳಿರಿ! ನನ್ನನ್ನು ಬಿಡ ಬೇಡಿರಿ! ಇಗೋ ಅಲ್ಲಿ ಆ ಕೋಣೆಯಲ್ಲಿ ಅವರು ಕೂತು ಯಾವಾಗಲೂ ಬಾ! ಎಂದು ನನಗೆ ಹೇಳುತ್ತಾರೆ; ದಮ್ಮಯ್ಯ! ನನ್ನನ್ನು ಬಿಡ ಬೇಡಿರಿ! ಮುಂತಾದ ಮಾತುಗಳನ್ನು ಬಹಳ

ಜಯ ಪಟ್ಟು ಹೇಳಿದಳು. ಆದರೆ ಕೆಲವು ಸಮಯದ ಮೇಲೆ ಇವಳು ತಿರಿಗಿ ಸ್ವಸ್ಥವಾದಳು. ಎರಡನೇ ಸಾರಿ ಹೆರುವಾಗ ಸ್ವಲ್ಪ ಕಡಿಮೆ ಅದೇ ತರದ ಸಂಕಟವಾಗಿ, ಅದರ ಮೇಲೆ ತಿರಿಗಿ ಪೂರ್ಣ ಗುಣವಾಗಿ ಇನ್ನೂ ಬದುಕುತ್ತಿದ್ದಾಳೆ. ಅವನ ಎರಡನೇ ಹೆಂಡತಿ ಸತ್ತ ಮೇಲೆ ತಮ್ಮನಾದ ನನ್ನ ಹೆಂಡತಿಯೂ ಪ್ರಸೂತಳಾಗಿ ಏಳನೇ ದಿನದಲ್ಲಿ ಗಲಿಬಿಲಿಯಾಗಿ ಮಾತಾಡಿ — ಈ ಕೂಸು ನನ್ನದಲ್ಲ; ನನ್ನದು ಊರಿನಲ್ಲಿ ಚನ್ನಾಗಿರುತ್ತದೆಂದು ಹೇಳಿ, ತನ್ನ ಕೂಸನ್ನು ಏನೂ ಲಕ್ಷ್ಯ ಮಾಡದೆ ಇದ್ದಳು. ಮೂರು ದಿವಸ ಹಾಗೆಯೇ ಇದ್ದ ಬಳಿಕ ಮೃತವಾದಳು. ನಾನು ಸಹ ತಿರಿಗಿ ಮದುವೆ ಮಾಡಿ ಕೊಳ್ಳಲಿಕ್ಕೆ ನೋಡಿದೆನು, ಆದರೆ ಅಣ್ಣನ ಇಬ್ಬರು ಹೆಂಡರೂ ನನ್ನ ಹೆಂಡತಿಯೂ ಈ ಪ್ರಕಾರ ಸತ್ತು ಹೋದದರಿಂದ ನನಗೆ ಒಂದು ಹೆಣ್ಣು ಕೊಡಲಿಕ್ಕೆ ಯಾರೂ ಒಪ್ಪಲಿಲ್ಲ. ಕಡೆಗೆ ಐದು ವರುಷದ ಮೇಲೆ ನನಗೆ ಎರಡನೇ ಸಾರಿ ಮದುವೆಯಾಯಿತು. ಇವಳಿಗೆ ಬಹಳ ಸಾರಿ ಅಸ್ವಸ್ಥವಿತ್ತು, ಎಲ್ಲರೂ — ಇದು ಮುಂಚೆ ಸತ್ತು ಹೋದ ಮೂವರಿಂದ ಆಗುವ ಉಪದ್ರವೆಂದು ಹೇಳಿ, ಇವಳು ಹೆರುವಾಗ ಸಾಯುವಳೆಂದು ನಿಶ್ಚಯ ಮಾಡಿ ಕೊಂಡಿದ್ದರು; ಆದರೆ ಅವಳು ಮತ್ತು ಸ್ವಸ್ಥವಾದಳು.

ಪುಟ್ಟಣ್ಣಾಚಾ: ನನ್ನ ಸಂಸಾರದಲ್ಲಿ ಒಬ್ಬನು ಸತ್ತು ಹೋದ ಏಳನೇ ತಿಂಗಳಿನಲ್ಲಿ ಅವನ ಹೆಂಡತಿಯು ತನ್ನ ಗಂಡನ ಆತ್ಮವು ತನ್ನನ್ನು ಹಿಡಿಯಿತೆಂದು ನಡುಗಿ, ಸ್ಥಿರವಿಲ್ಲದೆ ಮಾತಾಡಲಿಕ್ಕೆ ತೊಡಗಿದಳು. ಅವಳು ಚಿಕ್ಕವಳೂ ಕೃಶಳೂ ಬಲಹೀನಳೂ ಆಗಿದ್ದಳು; ಆದರೆ ಈ ಸಂಕಟದಲ್ಲಿರುವ ಸಮಯದಲ್ಲಿ, ಬಹಳ ಆಶ್ಚರ್ಯ ಉಳ್ಳ ಶಕ್ತಿಯನ್ನು ತೋರಿಸಿದಳು. ಒಂದು ದಿವಸ ಸತ್ತವನ ಗುರುತಿನವನೊಬ್ಬನು ಮನೆಗೆ ಬಂದಾಗ, ಅವಳು ಸತ್ತು ಹೋದ ತನ್ನ ಗಂಡನ ಸ್ವರದಲ್ಲಿ ಇವನಿಗೆ — ನಾನು ನಿನಗೆ ಹೇಳಿದ್ದು ಇನ್ನೂ ನೆನಪುಂಟೋ? ಎಂದು ಕೇಳುವಾಗ, ಇವನು — ಹೌದು, ನೆನಪುಂಟು ಎಂದು ಹೇಳಿದನು. ಇದನ್ನು ಮಾತಾಡುವಷ್ಟರೊಳಗೆ ಒಬ್ಬ ನೆರೆಯವನು ಸಹ ಬಂದನು. ಇವನಿಗೆ — ನಾನು ನಿನಗೆ ಕೊಟ್ಟ ಹಣದ ವಿಷಯ ನನ್ನ ಹೆಂಡತಿಗೆ ಏನಾದರೂ ಯಾಕೆ ಹೇಳಲಿಲ್ಲವೆಂದು ಕೇಳುವಾಗ, ಇವನು ಜಯ ಪಟ್ಟು, ಹೌದು ಎಪ್ಪತ್ತುವರೆ

ರೂಪಾಯಿ ನಾನು ನಿನ್ನ ಕೈಯಿಂದ ತೆಗದು ಕೊಂಡದ್ದುಂಟು; ನಿನ್ನ ಹೆಂಡತಿಗೆ ಅದನ್ನು ಸಂದಾಯ ಮಾಡುವೆನು ಎಂದು ಹೇಳಿದನು. ಈ ಪ್ರಕಾರ ಮುಂಚೆ ತಿಳಿಯದೆ ಇದ್ದ ಬೇರೆ ಕೆಲವು ಸಂಗತಿಗಳು ಗೊತ್ತಾದಾಗ, ಜನರು ಭ್ರಮಿಸಿ ಆ ಬ್ರಾಹ್ಮಣನು ಮಗನಿಲ್ಲದವನಾಗಿ ಸತ್ತು ಹೋಗಿ; ತನ್ನ ಋಣವನ್ನು ಸಂದಾಯ ಮಾಡದೆ ಹೋದದರಿಂದ ಅವನು ಪ್ರೇತವಾಗಿ ಭೂತಗಳ ವಶದಲ್ಲಿ ಶಿಕ್ಕಿದನು, ಮತ್ತು ಅವನ ಪ್ರೇತತ್ವದಿಂದ ನಿವೃತ್ತಿ ಆಗ ಕೂಡದೆಂದು ನೆನಸಿದರು; ಆದ ಕಾರಣ ಇದರ ಪ್ರಯತ್ನವನ್ನು ಮಾಡಲೇ ಇಲ್ಲ. ಈ ಪ್ರಕಾರವಾಗಿರುವಾಗ ಬೇರೆ ಊರಿನಲ್ಲಿ ವಾಸವಾಗಿರುವ ಸಂಸಾರದವನೊಬ್ಬನು ಸ್ವಲ್ಪ ಬುದ್ಧಿ ಉಳ್ಳವನಾಗಿದ್ದು, ಅದರ ಸುದ್ದಿಯನ್ನು ಕೇಳಿ, ಆ ಹೆಣ್ಣು ಇದ್ದಲ್ಲಿಗೆ ಹೋದನು. ಅಲ್ಲಿ ಇರುವವರು ಹಿಂದೆ ನಡದ ಕಥೆಗಳನ್ನು ಅವನಿಗೆ ಬಹಳ ಹೇಳಿದರು; ಅವನು ಸಹ ಯಾವದಾದರೂ ಒಂದು ಸಂಗತಿಯನ್ನು ಕೇಳ ಬೇಕೆಂದು ಬಹಳ ಒತ್ತಾಯ ಮಾಡಿದನು. ಆಗ ಅವನು ಅವಳ ಬಳಿಗೆ ಹೋದನು; ಅವಳು ಅವನನ್ನು ನೋಡುವಾಗ, ಮುಂಚೆ ತನ್ನ ಗಂಡನು ಮಾಡಿದ ತರದಲ್ಲಿ ಸಲಾಂ ಮಾಡಿ ಸ್ನೇಹಿತನೆಂದು ಅವನ ಸಂಗಡ ಮಾತಾಡಿ, ನಿನ್ನ ಸಂಗಡ ಇನ್ನೊಂದು ಸಾರಿ ಮಾತಾಡಲಿಕ್ಕೆ ಮಾರ್ಗವಾದದ್ದು ನನಗೆ ಬಹಳ ಸಂತೋಷವಾಯಿತು; ನಮ್ಮೊಳಗೆ ಇದ್ದ ಲೆಖ್ಖಾಚಾರ ಮುಂಚೆ ಪೂರ್ಣ ಫಡಿಚಾ ಆಗದರಿಂದ ನನಗೆ ಯಾವಾಗಲೂ ಕರಕರೆ ಇತ್ತೆಂದು ಹೇಳಿ, ಬಹಳ ನಡುಗಿ, ಲೆಖ್ಖದ ವಿವರ ಹೇಳಲಿಕ್ಕೆ ತೊಡಗಿದಳು. ಆಗ ಇವನು ಹಾಗಲ್ಲ! ಇಗೋ ಇಲ್ಲಿ ನಮ್ಮ ಲೆಖ್ಖದ ಪುಸ್ತಕವು, ಇದರಲ್ಲಿ ನಿನ್ನ ಸ್ವಂತ ಕೈ ಬರಹವು ಉಂಟು; ನೀನು ಬರೆದಿದ್ಧೀ! ನನಗೆ ಓದಿರಿ! ಎಂದು ಹೇಳುವಾಗ, ಆ ಸ್ತ್ರೀ: ನನಗೆ ಬರಹ ಬರುವದಿಲ್ಲವೆಂದು ಹೇಳಿದಳು. ಈ ಪ್ರಕಾರ ಅವನು, ಇದು ಭೂತವಲ್ಲ. ಇದು ಇವಳ ಮೋಸದ ಸಂಗತಿ ಎಂದು ತೋರಿಸಿ ಕೊಟ್ಟನು; ಯಾಕಂದರೆ ಅವಳ ಗಂಡನಿಗೆ ಬರಹ ಚನ್ನಾಗಿ ಗೊತ್ತಿತ್ತು. ಕಡೆಗೆ ಎಲ್ಲರೂ ನೆಗಾಡುವ ಹಾಗೆ ಆಯಿತು; ಮತ್ತು ಅವನು ಅವಳಿಗೆ ಒಂದು ಪ್ರಶ್ನೆ ಮಾಡಿದ್ದೇನಂದರೆ: ಕೆಲವು ವರುಷಗಳ ಮುಂಚೆ ನಾನು ನಿನ್ನ ಸಂಗಡ (ಅಂದರೆ ಸತ್ತವನ ಸಂಗಡ)

ಯಾವ ಪುಸ್ತಕವನ್ನು ಓದಿದ್ದೇನೆ? ಇದಕ್ಕೆ ಅವಳು ಉತ್ತರ ಕೊಡ ಕೂಡದದರಿಂದ ಅವಳ ಮೋಸದ ಸಂಗತಿಯನ್ನು ಇನ್ನೂ ಹೆಚ್ಚಾಗಿ ತೋರಿಸಿದನು. ಹೀಗೆ ಈ ಸ್ತ್ರೀಯಿಂದ ತನ್ನ ಗಂಡನ ಪ್ರೇತವು ಮಾತಾಡುತ್ತದೆಂದು ಇನ್ನು ಮುಂದೆ ಯಾರೂ ನಂಬದೆ ಇರುವ ಹಾಗಾಯಿತು.

ಪಾದ್ರಿ: ಹೌದು ಈ ತರದ ಕಥೆಗಳು ಇನ್ನು ಬಹಳ ಕೂಡಿಸಿ, ಭೂತ ಪ್ರೇತಗಳ ಮುಖಾಂತರವಾಗಿ ಸತ್ತವರು, ಗಂಡನನ್ನಾಗಲೀ ಹೆಂಡತಿಯನ್ನಾಗಲೀ ಮಕ್ಕಳನ್ನಾಗಲೀ ದನ ಮುಂತಾದವುಗಳನ್ನಾಗಲೀ ಹಿಡಿದು ಉಪದ್ರ ಕೊಡುತ್ತವೆಂದು ಜನರು ನೆನಸುವಂಥಾ ಬುದ್ಧಿ ಇಲ್ಲದಂಥ ಮೋಸದಲ್ಲಿ ನಡೆದ ಸಂಗತಿಗಳನ್ನು ತೋರಿಸಿ ಕೊಡ ಬಹುದು; ಆದರೆ ಇಷ್ಟು ಹೇಳಿದ ದೃಷ್ಟಾಂತ ಸಾಕೆಂದು ನಾನು ನೆನಸುತ್ತೇನೆ.

ಅದಕ್ಕಾಗಿ ಶಾಸ್ತ್ರಗಳಲ್ಲಿ ಭೂತಗಳ ಉಪದ್ರದ ವಿಷಯ ಏನು ಬರದದೆಂದು ಈಗ ವಿಚಾರಿಸೋಣ! ಆದರೆ ಮುಂಚೆ ಹೇಳಿದ ಪ್ರಕಾರ ಗಣಂಗಳ ಮತ್ತು ಭೂತಗಣಂಗಳ ಚರಿತ್ರೆಯ ಪುಸ್ತಕಗಳು ಶಾಸ್ತ್ರವೆಂದು ಎಣಿಸುವದಿಲ್ಲ.

ಪುಟ್ಟಣ್ಣಾಚಾ: ಋಕ್ಕು, ಯಜೂರ್, ಸಾಮ ಎಂಬ ಮೂರು ವೇದಗಳಲ್ಲಿ ಈಗ ವಾಡಿಕೆಯಾಗಿರುವ ಅರ್ಥದ ಪ್ರಕಾರ ಭೂತವೆಂಬ ಹೆಸರು ಸಹ ಶಿಕ್ಕುವದಿಲ್ಲ. ಆದರೆ ಇಂದ್ರ, ಮಿತ್ರ, ಅಗ್ನಿ ಮುಂತಾದ ದೇವರುಗಳಿಗೆ ವಿರೋಧವಾಗಿರುವ ವೃತ್ರ, ಮರುತು, ಅಹಿ, ಘಣಿ, ಬಲ ನಿರುತಿಗಳು ಎಂಬವರ ವಿಷಯದಲ್ಲಿ ಬರದದೆ. ಸಂಹಿತದಲ್ಲಿ ಮರುತುಗಳ ತಂದೆಯಾಗಿರುವ ರುದ್ರನು ಸಾವಿರಾರುಗಳ ಸಂಗಡ ಅಡ್ಡ ಮಾರ್ಗಗಳಲ್ಲಿಯೂ ಕೆರೆಗಳಲ್ಲಿಯೂ ಮೇಘಗಳಲ್ಲಿಯೂ ಮಳೆಯಲ್ಲಿಯೂ ಘಾಳಿಯಲ್ಲಿಯೂ ಮನೆಗಳಲ್ಲಿಯೂ ದನಗಳ ಹಿಂಡುಗಳಲ್ಲಿಯೂ ಗವಿಗಳಲ್ಲಿಯೂ ಸಮಾಧಿಗಳಲ್ಲಿಯೂ ಮನುಷ್ಯರ ಹೃದಯಗಳಲ್ಲಿಯೂ ಆಕಾಶದಲ್ಲಿಯೂ ಇದ್ದು, ಮನುಷ್ಯರಿಗೂ ದನಗಳಿಗೂ ಭಂಗ ಉಪದ್ರಗಳನ್ನು ಕೊಟ್ಟು, ಭಯ ಪಡಿಸಿ, ಕೊಂದು ಹಾಕುತ್ತಾನೆಂದೂ, ಋಗ್ವೇದ ಸಂಹಿತದಲ್ಲಿಯೂ ಅಥರ್ವಣ ವೇದ ಸಂಹಿತದಲ್ಲಿಯೂ ಪಿಶಾಚ ರಾಕ್ಷಸರಿಗೆ ಅಶ್ವಹೋಮಗಳ ರಕ್ತವನ್ನು ಅರ್ಪಿಸಿತೆಂದೂ ಹೇಳಿ

ಯದೆ. ಮತ್ತು ಮಹಾವಂಶ ಎಂಬ ಭೂತಶಾಸ್ತ್ರದಲ್ಲಿಯೂ ಭೂತಗಳ ವಿಷಯದಲ್ಲಿ ಬರದ್ದುಂಟು.

ಪಾದ್ರೆ: ಇದೆಲ್ಲಾ ಜನರು ಈಗ ಭೂತಗಳ ವಿಷಯವಾಗಿ ಹೇಳುವಂಥಾದಕ್ಕೆ ಪೂರ್ಣ ಬೇರೆಯಾಗಿದೆ.

ಪುಟ್ಟಣ್ಣಾಚಾ: ಪರಕಾಯದ ಬೋಧನೆಯು ವೇದದಲ್ಲಿಯೂ ಧರ್ಮಶಾಸ್ತ್ರದ ಹನ್ನೆರಡನೇ ಅಧ್ಯಾಯದಲ್ಲಿಯೂ ಪೂರ್ಣವಾಗಿ ವಿವರಿಸಿಯದೆ.

ಚಂದ್ರಭ: ಗರುಡ ಪುರಾಣದಲ್ಲಿ ಭೂತ ಪ್ರೇತಗಳನ್ನು ಕುರಿತು ಹೆಚ್ಚಾಗಿ ವಿವರಿಸಿಯದೆ, ಏನಂದರೆ:

ಗ. ಅ. 11. ಶ್ಲೋ. 15ನೆ ಮುಂತಾದ ಶ್ಲೋಕಗಳು.

ಒಬ್ಬನು ಜೀವಂತನಾಗಿರುವಾಗ್ಯೆ ಕೆಟ್ಟ ಬುದ್ಧಿಯುಳ್ಳವನಾಗಿ ಎಂದಿಗೂ ಸತ್ತವನಾಗಿ ಕೆಟ್ಟ ಭಾವವುಳ್ಳವನಾಗಿ ದುಷ್ಟ ಬುದ್ಧಿಯಿಂದ ತನ್ನ ಕುಲವನ್ನು ಪೀಡಿಸುತ್ತಾನೆ.

ಒಬ್ಬನು ಕೆಟ್ಟ ಕರ್ಮ ಮಾಡುತ್ತಾನೆ; ಒಬ್ಬನು ಸಂತತಿ ಹೀನನಾಗುತ್ತಾನೆ; ಒಬ್ಬನು ಪ್ರೇತದಿಂದಲೇ ಸ್ವಂತ ಪೀಡೆ ಪಡುತ್ತಾನೆ; ಮಕ್ಕಳಿಂದ ಸಹ.

ಒಬ್ಬನ ಮಗನು ಸಾಯುತ್ತಾನೆ; ಒಬ್ಬಳ ಮಗಳು ಸಾಯುತ್ತಾಳೆ; ಬಂಧುಗಳಿಂದ ಹಗೆ ಪಡುತ್ತಾನೆ; ಪ್ರೇತದೋಷದಿಂದಲೇ ಹೊರ್ತು ಅನ್ಯಥಾ ಅಲ್ಲ.

ಸಂತತಿಯು ಕಾಣುವದೇ ಇಲ್ಲ; ಅಥವಾ ಹುಟ್ಟಿದರೂ ಸಾಯುತ್ತದೆ; ಪಶುದ್ರವ್ಯ ನಾಶವಾಗುತ್ತದೆ; ಆ ಪೀಡೆಯು ಪ್ರೇತದಿಂದ ಹುಟ್ಟುವಂಥಾದ್ದು.

ನಾಸ್ತಿಕನು ಆಗುತ್ತಾನೆ; ವ್ರತಗಳು ಭಂಗವಾಗುತ್ತವೆ; ಮಹಾಲೋಭ ಪ್ರಾಪ್ತವಾಗುತ್ತದೆ; ನಿತ್ಯದಲ್ಲಿಯೂ ಜಗಳ ಎಲ್ಲಿಯೋ ಅಲ್ಲಿ ಆಗುವ ಕಲಹವು ಪ್ರೇತದಿಂದಾಗುವಂಥಾದ್ದು.

ತನ್ನ ಸ್ವಭಾವಕ್ಕೆ ಮೀರಿ ನಡೆಯುವದು; ಬಂಧುಗಳ ಸಂಗಡ ಹಗೆ; ಥಕ್ಕನೆ ವ್ಯಸನ ಪ್ರಾಪ್ತವಾಗುವದು; ಈ ಪೀಡೆಯು ಪ್ರೇತದ್ದು.

ತಂದೆ ತಾಯಿಗಳಿಗೆ ಕೊಲೆ ಮಾಡುವವನು; ದೇವ ಬ್ರಾಹ್ಮಣರಿಗೆ ದೂಷಣೆ ಮಾಡುವವನು; ಈ ಪಾತಕದಲ್ಲಿ ಬೀಳುವಂಥವನು ಪ್ರೇತಪೀಡೆಯುಳ್ಳವನು.

ನಿತ್ಯಕರ್ಮ ಅನುಷ್ಠಾನ ಕಳಕೊಳ್ಳುವದು, ಜಪಹೋಮ ಬಿಡುವದು, ನೀಚರ ಸಹವಾಸ ಮಾಡುವದು, ಇವು ಪ್ರೇತಪೀಡೆಗಳು.

ಒಳ್ಳೇ ಗದ್ದೆ ಹೊಲ ನಾಶವಾಗುವದು, ವ್ಯಾಪಾರದಲ್ಲಿ ನಷ್ಟ ಬೀಳುವದು, ಜನರಲ್ಲಿ ಜಗಳ ಮಾಡುವದು, ಇಂಥವನು ಪ್ರೇತಪೀಡೆಯುಳ್ಳವನು.

ಮಾರ್ಗದಲ್ಲಿ ಹೋಗುವಾಗ ಜಗಳವಾಗುವದು, ಅಲ್ಲಿ ದುಖ್ಖ ಪಡುವದು ಪ್ರೇತಗಳಿಂದಲೇ, — ನನ್ನ ಈ ವಾಕ್ಯ ಸತ್ಯವೇ.

ಹೀನ ಜಾತಿಗಳಲ್ಲಿ ಸಂಬಂಧವಾಗುವದು, ಹೀನ ಕೆಲಸ ಮಾಡುವದು, ಅಧರ್ಮದಲ್ಲಿಯೇ ಪ್ರೀತಿ ಇಡುವದು, ಪ್ರೇತಪೀಡೆಯು.

ವ್ಯಸನಗಳಿಂದ ದ್ರವ್ಯ ನಾಶ ಮಾಡಿ ಕೊಂಬೋದು, ಕೆಲಸ ಇಲ್ಲದೆ ತಿರುಗಾಡುವದು, ಕಳ್ಳರ ಬೆಂಕಿಯಿಂದಲೂ ಅರಸರಿಂದಲೂ ಬಾಧೆಯುಂಟಾಗುವದು, ಪ್ರೇತಬಂಧನೆಯಿಂದಲೇ.

ಮಹಾರೋಗ ಪ್ರಾಪ್ತಿಯಾಗುವದು, ಮಕ್ಕಳಿಗೂ ಸಹಾ ಪೀಡೆ ಆಗುವದು, ಹೆಂಡತಿಗೆ ಯಾವಾಗ್ಯೂ ಪೀಡೆಯಾಗುವದು ಪ್ರೇತಪೀಡೆಯು.

ವೇದ, ಸ್ಮೃತಿ, ಪುರಾಣ, ಧರ್ಮಶಾಸ್ತ್ರ, ಇನ್ನು ಬೇರೆ ಶಾಸ್ತ್ರಗಳಲ್ಲಿ ಸಹ ವಿಶ್ವಾಸವಿಲ್ಲದೆ ಇರುವದು ಪ್ರೇತಪೀಡೆಯು.

ದೇವರಿಗೆ, ಅತಿಥಿಗೆ, ಬ್ರಾಹ್ಮಣನಿಗೆ ಶುದ್ಧ ಭಾವದಿಂದ ನೋಡುವದಿಲ್ಲ; ಎದುರಿಗಾಗಲಿ ಹಿಂದ ಕಡೆಯಾಗಲೀ ದೂಷಣೆ ಮಾಡುವಂಥವನು ಪ್ರೇತಭಾವವುಳ್ಳವನು.

ಒಬ್ಬನ ವೃತ್ತಿಯನ್ನು ಅಪಹಾರ ಮಾಡುವದು. ಬ್ರಾಹ್ಮಣನಿಗೆ ಪೀಡಿಸುವದು, ವಂಶ ನಾಶವಾಗುವದು, ಪ್ರೇತಪೀಡೆಯು.

ಸ್ತ್ರೀಯರುಗಳ ಗರ್ಭನಾಶವಾಗುವದು, ಮುಟ್ಟಾಗದೆ ಇರುವದು, ಬಾಲಕರು ಸಾಯುವದು ಎಲ್ಲಿಯೋ ಅಲ್ಲಿ ಪ್ರೇತಪೀಡೆಯು.

ಮುಟ್ಟಾಗುತ್ತಾಳೆ, ಆದರೆ ಫಲ ಕಾಣುವದಿಲ್ಲ; ಯಾವಾಗ್ಯೂ ಹೆಂಡತಿಯಿಂದ ದೂರವಿರುವದು, — ಪ್ರೇತಬಾಧೆಯು.

ಎಂದಿಗೂ ಹೆಂಡತಿಯ ಸಂಗಡ ಶತ್ರುಗಳ ಹಾಗೆ ದ್ವೇಷವು, ಪ್ರೀತಿಯೂ ಇಲ್ಲ, ಸೌಖ್ಯವೂ ಇಲ್ಲ, ಇದೂ ಪ್ರೇತಪೀಡೆಯು.

ಹೆಂಡತಿಯನ್ನು ಕೊಂದು ಹಾಕುವದು, ಊಟ ಮಾಡುವಾಗ್ಯೆ ಕೋಪ ಮಾಡುವದು, ಪರರ ದ್ರೋಹದಲ್ಲಿಯೇ ಮನಸ್ಸು ಕೊಡುವದು, — ಪ್ರೇತಪೀಡೆಯು.

ಈ ಪ್ರಕಾರ ತಿಳುಕೊಂಡು ಗರುಡನೇ ತಂದೆ ಭಕ್ತಿ ಮಾಡ ಬೇಕು; ತಾಯಿ ತಂದೆಗಳನ್ನು ಯಾವಾತ ಅಪಮಾನ ಮಾಡುತ್ತಾನೋ, ಅವನು ಸತ್ತರೆ ಪ್ರೇತವಾಗುತ್ತಾನೆ.

ಯಾವಾತನು ತಂದೆಯ ಮಾತು ನಡಿಸುವದಿಲ್ಲವೋ, ತನ್ನ ಹೆಂಡತಿಯನ್ನು ಇಟ್ಟು ಕೊಂಬೋದಿಲ್ಲವೊ, ಪರರ ಹೆಂಗಸರಲ್ಲಿ ಪ್ರೀತಿ ಇಡುತ್ತಾನೋ, ಅಂಥ ಮಗನು ಪ್ರೇತಪೀಡೆಯುಳ್ಳವನು.

ಪ್ರೇತದೋಷ ಯಾವ ಕುಲದಲ್ಲಿ ಉಂಟೋ, ಅದಕ್ಕೆ ಸುಖವಿಲ್ಲ; ಬುದ್ಧಿ, ಪ್ರೀತಿ, ಸಂತೋಷ, ಜ್ಞಾನ, ಐಶ್ವರ್ಯ ಇವೈದು ನಾಶವಾಗುತ್ತವೆ.

ಪಾದ್ರಿ: ಧರ್ಮಶಾಸ್ತ್ರವು ಭೂತಪ್ರೇತಗಳಿಗೆ ಶಿಕ್ಷೆಯಾಗಿರುವ ಕಷ್ಟ, ಶೀತೋಷ್ಣ, ದಾಹ, ಹಶಿವೆ ಮುಂತಾದವುಗಳಾಗುವದನ್ನು ತೋರಿಸುತ್ತದೆ; ಎಂಟು ದಿವಸಗಳ ಮುಂಚೆ ನಾರಾಯಣಾಚಾರ್ಯರು ಹೇಳಿದ ಪ್ರತಿಬಂಧನೆಯ ಪುಸ್ತಕದಲ್ಲಿ ಪ್ರೇತಗಳು ಉಪಹತಿ ಕೊಡುತ್ತವೆಂದು ಸ್ವಲ್ಪ ಕಾಣಿಸಿಯದೆ. ಈಗ ಕೇಳಿಧ ಗರುಡ ಪುರಾಣದ ಮಾತುಗಳಲ್ಲಿ ಇನ್ನು ಹೆಚ್ಚು ಹೇಳಿ, ಪ್ರೇತಗಳು ಲೆಖ್ಖವಿಲ್ಲದ ಉಪದ್ರ ಕಷ್ಟಗಳನ್ನು ಕೊಡುತ್ತವಂತೆ. ಅದರಲ್ಲಿ ಬಹಳ ಹೆಚ್ಚು ಕಡಿಮೆ ಉಂಟೆಂಬುವದನ್ನೂ ಅವರು ಓದಿದ ಮಾತುಗಳ ಆರಂಭವನ್ನೂ ಆಲೋಚಿಸುವಾ! ಹ್ಯಾಗಾದರೂ ಒಳ್ಳೇಯವರಿಗಲ್ಲ, ಕೆಟ್ಟವರಿಗೆ ಮಾತ್ರ ಪ್ರೇತಪೀಡೆಯುಂಟೆಂದು ಹೇಳಿಯದೆ; ಇದು ಸರಿ. ಅಂಥವರಿಗೆ ಕಾಣಿಸಿದ ಕಷ್ಟಗಳು ಬರುತ್ತವೆ, ಆದರೆ ಕಷ್ಟಗಳು ನಿಶ್ಚಯವಾಗಿ ಪ್ರೇತಗಳಿಂದ ಅಲ್ಲ, ಅವರ ಪಾಪಗಳಿಂದಲೇ ಬರುತ್ತದೆ.

ಇದಲ್ಲದೆ ಗರುಡ ಪುರಾಣದಲ್ಲಿ ಪ್ರೇತಗಳು ಅಂಥಾ ಕೆಲಸ ಮಾಡುವದುಂಟೆಂದು ಹೇಳಿದರೂ ಅದನ್ನು ನಂಬ ತಕ್ಕ ದೃಷ್ಟಾಂತ ಒಂದಾದರೂ ಕಾಣುವದಿಲ್ಲ. ನೀವು ಈಗ ನಿಮ್ಮ ಶಾಸ್ತ್ರಗಳಿಂದ ತೋರಿಸಿದ ಪ್ರಕಾರ ಬೇರೆ ಮತಗಳಲ್ಲಿಯೂ ಉಂಟು; ಹೀಗೆ ಅವೆಸ್ತ ಎಂಬ ಪರ್ಶಿಯರ ಶಾಸ್ತ್ರದಲ್ಲಿಯೂ ಮಹಮ್ಮದಿಯವರ ಖುರಾನಿನಲ್ಲಿಯೂ ವಿಶೇಷವಾಗಿ ಎರಡನೇ, ಹದಿನೆಂಟನೇ, ಐವತ್ತೈದನೇ ಅಧ್ಯಾಯಗಳಲ್ಲಿಯೂ ಸೈತಾನನೂ ಮತ್ತು ಇಬ್ಲಿಷ್ ಎಂಬವನೂ, ಕೆಟ್ಟ ಆತ್ಮಗಳಾಗಿರುವ ತಿರ್ಯುಚ, ಪೆರಿದೆವ್ವ, ಚಿನ್ನುಗಳು ಎಂಬವುಗಳ ಸಂಗಡ ಕೂಡಿ, ಕೆಟ್ಟವುಗಳೆಲ್ಲಾ ದೇವರಿಗೆ ವಿರೋಧವಾಗಿದ್ದು, ಮನುಷ್ಯರನ್ನು ಅನ್ಯಾಯಕ್ಕೂ ಅಶುದ್ಧತ್ವಕ್ಕೂ ಬೀಳ ಮಾಡುವ ಹಾಗೆ, ಅವರನ್ನು ಸುತ್ತಲೂ ಶೋಧಿಸಿ, ಅವರ ಹೃದಯಗಳಲ್ಲಿ ಪ್ರವೇಶಿಸ ಎತ್ನೈಸಿ, ಅವರ ಶರೀರವನ್ನೂ ಆತ್ಮವನ್ನೂ ನಾಶ ಮಾಡಲಿಕ್ಕೆ ನೋಡುತ್ತವೆಂದು ಹೇಳಿಯದೆ. ಇದರಲ್ಲಿ ಉಪದ್ರ ಕೊಡುತ್ತಾರೆಂಬ ಹಾಗೆ ಸ್ವಲ್ಪ ಕಾಣುತ್ತದೆ, ಆದರೆ ನೀವು ಹೇಳಿದ ಶಾಸ್ತ್ರದ ಮಾತಿನಲ್ಲಿ ಭೂತಗಳ ಉಪದ್ರ ಉಂಟೆಂದು ನೆಟ್ಟಗೆ ಕಾಣುವದಿಲ್ಲ.

ಕೃಷ್ಣರಾ: ಇದು ಸತ್ಯವೇ! ಜನರು ಭೂತಗಳ ಉಪದ್ರವೆಂದು ಈ ಸಮಯದಲ್ಲಿ ಹೇಳುವಂಥಾದ್ದು ಪೂರ್ಣ ಬೇರೆಯಾಗಿದೆ.

ಪಾದ್ರೆ: ಶಾಸ್ತ್ರದಲ್ಲಿ ಬರದದ್ದಕ್ಕೂ ಜನರು ಈಗ ಹೇಳುವಂಥಾದ್ದಕ್ಕೂ ಬಹಳ ಹೆಚ್ಚು ಕಡಿಮೆ ಉಂಟೆಂಬುವದಕ್ಕೆ ಅಷ್ಟು ಆಶ್ಚರ್ಯವಲ್ಲ. ಬರಹ ತಿಳಿಯುವವರು ಬಹಳ ಕಡಿಮೆ, ಆದರೆ ತಿಳಿಯದವರು ಅನೇಕರು. ಇವರಲ್ಲಿ ಏನಾದರೂ ಒಂದು ಸುದ್ದಿ ಎದ್ದು, ಒಬ್ಬೊಬ್ಬನ ಬಾಯಿಯಿಂದ ಅದಕ್ಕೆ ಸ್ವಲ್ಪ ಕೂಡಿಸಲ್ಪಟ್ಟು, ಆ ಸುದ್ದಿಯು ಬೇರೆಯಾಗುತ್ತಾ ಬರುವವನ್ನು ದಿನಾಲು ನೋಡುವಂತೆ, ಭೂತಗಳ ಸಂಗತಿಗಳಲ್ಲಿಯೂ ಆಯಿತು. ಅದರ ಮೂಲ ಸುದ್ದಿಗೆ ಬೇರೆ ಬೇರೆ ಕಾಲಗಳಲ್ಲಿ ಸ್ವಲ್ಪ ಸುಳ್ಳು ಕೂಡಿಸಿ, ಈ ಪ್ರಕಾರ ಕಡೆಗೆ ಬಹಳ ವಿಸ್ತಾರವಾದಾಗ ಜನರು ಅದು ಎಲ್ಲಾ ಸತ್ಯವೆಂದು ನಂಬಿದರು.

ಪುಟ್ಟಣ್ಣಾಚಾ: ಇದು ಸರಿ! ವಿಶೇಷವಾಗಿ ತಿಳಿಯದ ಜನರು ಮನಸ್ಸು ಬಂದ ಹಾಗೆ ಮಾತಾಡಿ, ಬಹಳ ಸಾರಿ ಕಾರಣವಿಲ್ಲದೆ ಚಯ ಪಡುವದೂ, ಕೆಲವು ಮಂದಿ ತಮಗೇನಾದರೂ ಲಾಭ ಶಿಕ್ಕುವದೋ, ಏನೋ, ಎಂಬ ಆಶೆಯಿಂದಲೂ ಮೋಸದ ಮನಸ್ಸಿನಿಂದಲೂ ಸುಳ್ಳು ಕಥೆಗಳನ್ನು ಕಲ್ಪಿಸುವದೂ ಉಂಟು.

ಪಾದ್ರಿ: ಸರ್ವ ಲೋಕದಲ್ಲಿ ನಾಶನದ ಸಂಗತಿಯು ಒಂದು ರಸದಂತೆ ಮರೆಯಾಗಿದ್ದರೂ, ಎಲ್ಲಾದರಲ್ಲಿಯೂ ಮನುಷ್ಯರ ನಡತೆಯಲ್ಲಿಯೂ ಕಂಡು ಬರುತ್ತದೆ. ಅದೇ ಪ್ರಕಾರ ಪ್ರತಿ ಮನುಷ್ಯನೊಳಗೆ — ನಿನ್ನನ್ನು ಜೋಕೆ ಮಾಡಿಕೋ, ಎಂಬ ಒಂದು ಶಬ್ದವು ಇದ್ದು, ಸಣ್ಣ ಘಾಳಿ ಬೀಸುವ ಹಾಗೆಯೇ — ಪ್ರಾರಂಭದಿಂದ ಈ ವರೆಗೆ ನೋಡಿ ಕೋ! ಬಿಡುಗಡೆಯನ್ನು ಹುಡುಕು! ಎಂದು ಹೇಳುತ್ತದೆ; ಅದು ಅನೇಕ ಸಾರಿ ಮನುಷ್ಯರು ಲಕ್ಷಿಸದೆ ಇದ್ದರೂ, ಎಲ್ಲರಿಗೆ ಗೊತ್ತುಂಟು; ಆದರೂ ಅನೇಕರು ಬೇಡವೆಂದು, ಅದನ್ನು ತಮ್ಮ ಮನಸ್ಸಿಗೆ ತರುವದಿಲ್ಲ. ಸ್ವಲ್ಪ ಜನರು ಮಾತ್ರ ಅದನ್ನು ಕುರಿತು ಗ್ರಹಿಸುತ್ತಾರೆ. ಈ ಶಬ್ದವು ಜೀವವುಳ್ಳ ಒಬ್ಬನೇ ದೇವರದ್ದಾಗಿರುತ್ತದೆ. ಇದನ್ನು ಕೇಳಿ, ಅವನ ಹತ್ತರ ಬಾರದವರು ಮಿಥ್ಯಾಮತಿಯೂ ಸುಳ್ಳು ಭ್ರಾಂತಿಯೂ ವಿಗ್ರಹಾರಾಧನೆಯೂ ಇಂಥವುಗಳಿಂದ ವಂಚಿತರಾಗಿ ದೇವರ ಬೆಳಕಿಗೆ ದೂರವಾಗಿ ಹೆಚ್ಚಾದ ಕತ್ತಲೆಗೆ ಶೇರಿ, ಸೈತಾನನ ಕೈಗೆ ಶಿಕ್ಕಿಕೊಳ್ಳುತ್ತಾರೆ. ಹ್ಯಾಗಂದರೆ ಅಶುದ್ಧ ಆತ್ಮಗಳಾಗಿರುವ ಸೈತಾನನ ದೂತರು, ಅಂಥಾ ಮನುಷ್ಯನು ಕತ್ತಲೆಯ ಸ್ಥಿತಿಗೆ ಪ್ರಯಲ್ಪಟ್ಟ ಮೇಲೆ ಅವರು ಆ ಮನುಷ್ಯನನ್ನು ತಿಳಿಯದಂತೆ ಶೆರೆಗೆ ಹಾಕುತ್ತಾರೆ. ಅವನು ಆಗ ಇವರ ವಶದಲ್ಲಿ ಬೀಳುತ್ತಾನೆ. ಈ ಪೀಡೆ ಆರಂಭದಲ್ಲಿ ಶರೀರ ಭಾವದ್ದಾಗಿದ್ದು ಅವನ ನರಗಳಲ್ಲಿ ವಾತವನ್ನೂ ಬೇರೆ ಬೇರೆ ರೋಗಗಳನ್ನೂ ಹುಟ್ಟಿಸುತ್ತದೆ, ಈ ತರದ ಊನತ್ವಗಳಿಗೆ ಕಾರಣ ಏನೆಂದು ಅನೇಕ ಸಾರಿ ತಿಳಿದು ಕೊಳ್ಳಲಿಕ್ಕೆ ಕೂಡದೆ ಇರುವದರಿಂದ ಏನೇನು ಮದ್ದು ಮಾಡಿದರೂ ಗುಣವಾಗುವದಿಲ್ಲ; ಆದರೆ ಅದು ಮಾತ್ರವಲ್ಲ, ಮನುಷ್ಯನ ಪ್ರಾಣವನ್ನು ಹಿಡಿದು ತಲ್ಲಣೆಯನ್ನೂ ಅಸ್ಥಿರ ಬುದ್ಧಿಯನ್ನೂ ಜೋಲ್ಮುಖವನ್ನೂ ಹುಟ್ಟಿಸಿ, ಇಲ್ಲವೆ ಲಾಹರಿ, ಕಾಮ,

ಲೋಭ, ಹೊಟ್ಟೆಕಿಚ್ಚು ಮುಂತಾದ ಕೆಟ್ಟ ಗುಣಗಳನ್ನು ಪ್ರೇರೇಪಿಸಿ, ಮನುಷ್ಯನು, ಬೇಡ ಎಂಬ ಮನಸ್ಸುಳ್ಳವನಾಗಿ ಅದರ ವಿಷಯ ಕರಕರೆ ಮಾಡುವವನಾಗಿದ್ದರೂ ಅವನನ್ನು ಹಿಡಿದು, ಅವನು ತನ್ನ ಮೇಲೆ ಸ್ವತಂತ್ರವಿಲ್ಲದವನಾಗಿರುತ್ತಾನೆಂದು ಶುದ್ಧವಾಗಿ ತೋರಿಸುತ್ತವೆ.

ಇದರ ಮೇಲೆ ಆತ್ಮಭಾವದವುಗಳ ವಿಷಯ ಮಂದ ಮತಿಯುಳ್ಳವನಾಗಿಯೂ ಒಳ್ಳೇ ಆಲೋಚನೆಯನ್ನು ಮಾಡಲಿಕ್ಕೆ ಕೂಡದವನಾಗಿಯೂ ಸತ್ಯಕ್ಕೆ ಮನಸ್ಸು ಕೊಡದವನಾಗಿಯೂ ನಿತ್ಯತ್ವಕ್ಕಾಗಿ ಪೂರ್ಣ ಚಿಂತೆ ಪಡದವನಾಗಿಯೂ ಕಷ್ಟದ ಸಮಯದಲ್ಲಿ ಧೈರ್ಯ ವಿಲ್ಲದವನಾಗಿಯೂ ಇದ್ದು, ಹಾಗೆ ದಿಕ್ಕಿಲ್ಲದವನಾಗಿ ಕಾಣಿಸಿ ಕೊಂಡು, ಶರೀರ ಪ್ರಾಣ ಆತ್ಮಗಳು ಪೂರ್ಣವಾಗಿ ಕತ್ತಲೆಯೊಳಗೆ ಇರುತ್ತವೆ. ಇದನ್ನು ಕುರಿತು ಆಲೋಚನೆ ಮಾಡದೆ, ಇದರ ವಿಷಯ ತಿಳಿದು ಕೊಳ್ಳದೆ ಇರುವ ಯಾರಾದರೂ ಒಬ್ಬನು ಬಂದು ತಮಗೆ ಮೆಚ್ಚುವ ಮಾತನ್ನು ಹೇಳಿದರೆ, ಅದು ಎಷ್ಟು ಸುಳ್ಳಾಗಿದ್ದರೂ, ಮೋಸ ಉಳ್ಳದ್ದಾಗಿದ್ದರೂ ಸಾಧಾರಣವಾಗಿ ಏನೂ ವಿಚಾರಿಸದೆ ನಂಬುತ್ತಾರೆ. ಈ ಪ್ರಕಾರ ಮನುಷ್ಯರಲ್ಲಿ ಅನೇಕರು, ತಾವು ನೀಚ ಲಾಭಕ್ಕಾಗಿ ಆಗದ ಮೋಸದ ಕಾರ್ಯಗಳನ್ನು ಮಾಡುತ್ತೇವೆಂದು ತಿಳಿದು ಕೊಂಡರೂ, ಕಪಟಿಗಳಾಗಿದ್ದು ತಾವು ಭೂತಗಳ ಮಧ್ಯಸ್ಥಿಕೆಯನ್ನು ಮಾಡುವವರೆಂದೂ, ತಾವು ಮಾಡುವಂಥಾದೆಲ್ಲಾ ಸತ್ಯವಾಗಿದೆಂದೂ, ಮತ್ತೊಬ್ಬರು ನೋಡುವ ಹಾಗೆ ಮಾಡುತ್ತಾರಲ್ಲದೆ, ಇದು ತಮ್ಮ ಉದ್ಯೋಗವೆಂದೂ, ಇದರಿಂದಲೇ ತಮ್ಮ ಕಾಲಕ್ಷೇಪ ನಡಿಯ ಬೇಕೆಂದು ನೆನಸಿ, ನಾಚಿಕೆ ಇಲ್ಲದೆ ಈ ಪ್ರಕಾರ ಮಾಡುತ್ತಾರೆ; ವಿಶೇಷವಾಗಿ ಭಟ್ಟರೂ ಕುಣಿದಾಡುವ ಪೂಜಾರಿಗಳೂ ಪಂಬಿತರೆಂಬ ನಾಟ್ಯಗಾರರೂ ಇಂಥವರಾಗಿದ್ದಾರೆ. ಸತ್ಯದ ಮೇಲೆ ಯಾರು ಪೂರ್ಣವಾಗಿ ಮನಸ್ಸು ಇಡುವವನಾಗಿದ್ದಾನೋ, ಅವನು ಇಂಥವರ ಮಾತನ್ನು ಎಂದೂ ವಿಶ್ವಾಸಿಸನು. ದೇವರು ನಮ್ಮಲ್ಲಿ ಒಬ್ಬೊಬ್ಬನಿಗೆ ಕೊಟ್ಟ ಬುದ್ಧಿಯಿಂದ ಇಂಥವುಗಳನ್ನು ತಿಳಿದು, ದೇವರ ಮೇಲೆ ಭರವಸ ವಿಟ್ಟು, ವಿಶೇಷವಾಗಿ ಕಷ್ಟವಾದ ಅಪರೂಪವಾದ ಸಂಗತಿಗಳಲ್ಲಿ ಧೈರ್ಯವುಳ್ಳವರಾಗಿರುವದು ಬಹಳ ಒಳ್ಳೇದು.

ಚಂದ್ರಭಟ್ಟರು ಪಾಟಾಳಿ ಪೂಜಾರಿಗೆ: ಧೊರೆಯು ನಮ್ಮನ್ನು ಬಹಳ ಕೆಟ್ಟವರೆಂದು ಮಾಡುತ್ತಾರೆ; ಅವರು ಹೇಳುವದು ಸತ್ಯವಾಗೆದೆ, ಆದರೂ ಏನು ಮಾಡುವಾ? ನಮ್ಮ ಹೊಟ್ಟೆ ತುಂಬ ಬೇಡವೋ?

ಪಾಟಾಳಿ ಪೂ: ಅವರು ಹೇಳಿದ ಮಾತಿನ ಅರ್ಥ ನನಗೆ ಚನ್ನಾಗಿ ತಿಳಿಯಲಿಲ್ಲ.

ಪಾದ್ರೇ: ಮುಂಚೆ ಹೇಳಿದ್ದಕ್ಕೆ ದೃಷ್ಟಾಂತವಾಗಿ ಒಂದು ಕಥೆ ಹೇಳುತ್ತೇನೆ: — ಮರುವಾಡದ ಒಂದು ಪಟ್ಣದಲ್ಲಿ ಹಾಳಾಗಿ ಬಿದ್ದ ಮನೆಗಳ ಬಳಿಯಲ್ಲಿ ಒಂದು ಕೆರೆ ಉಂಟು. ಆ ಕೆರೆಯಲ್ಲಿ ಬಹಳ ಭೂತಗಳವೆ ಎಂಬ ಸುದ್ದಿಯು ಸುತ್ತಲೂ ಹಬ್ಬಿತ್ತು; ಎಂಟು ವರುಷಗಳ ಮುಂಚೆ ಆ ಭೂತಗಳೂ ಅವುಗಳಲ್ಲಿ ವಿಶೇಷವಾಗಿ ಒಂದು ಬಹು ಕಠಿಣವಾಗಿದ್ದು ಆ ಮಾರ್ಗವಾಗಿ ಹೋಗುವ ಬಹು ಜನರಿಗೆ ಕಾಣಿಸಿಕೊಂಡು, ಆ ಕೆರೆಯಲ್ಲಿ ಆಚೆಗೆ ಈಚೆಗೆ ಓಡ್ಯಾಡುತ್ತಾ ದುಮುಕುತ್ತಾ ಇದ್ದು, ರಾತ್ರಿಯಲ್ಲಿ ಮಾರ್ಗಸ್ಥರನ್ನು ಬಹಳ ಭಯ ಪಡಿಸಿದವು; ಅತ್ಯವಶ್ಯವಾಗಿರುವ ಕೆಲಸಕ್ಕೆ ಹೊರ್ತಾಗಿ, ರಾತ್ರಿಯ ಹೊತ್ತಿನಲ್ಲಿ ಯಾರೂ ಅಲ್ಲಿ ಹೋಗಲಿಕ್ಕೆ ಧೈರ್ಯ ಪಡುತ್ತಿದ್ದಿಲ್ಲ; ಯಾಕಂದರೆ ಆ ಭೂತದ ಬಾಯಿಯಿಂದ ಬೆಂಕಿ ಹೊರಡುತ್ತದೆಂದು ಎಲ್ಲರೂ ಸಾಕ್ಷಿ ಹೇಳಿ ಬಹಳ ಭಯ ಪಟ್ಟರು. ಆ ಭೂತ ಬಹಳ ಜನರನ್ನು ಹಿಡಿಯಿತು; ಐದು ಮಂದಿ ಇದರಿಂದಲೇ ಸತ್ತು ಹೋದರು. ಅನೇಕರು ಆ ಭೂತದ ಭಯದಿಂದಲೇ ಹರಿಕೆ ಹೇಳಿ ಆ ಕೆರೆಯ ಕಟ್ಟೆಯಲ್ಲಿ ಪೂಜೆ ಮಾಡಿದರು. ಕೆಲವು ಮಂದಿ ಸ್ವಲ್ಪ ಹೆಚ್ಚು ಧೈರ್ಯ ಪಟ್ಟು, ಜನರು ಹೇಳುವದನ್ನು ನಂಬದೆ ಆ ಕೆರೆಯ ಬಳಿಗೆ ಹೋಗಿ, ಆಗುವದನ್ನು ನೋಡಿ ನಂಬಿದರು. ಆಗ ಪಟ್ಣದಲ್ಲಿ ಜೋಸಿ ಚಂಬುದಾತನೆಂಬ ಒಬ್ಬ ಬ್ರಾಹ್ಮಣನು ಅಲ್ಲಿ ಭೂತ ಉಂಟೆಂಬುವದನ್ನು ನಂಬದೆ, ಅಲ್ಲಿಗೆ ಹೋಗಿ ಭೂತದ ಬಾಯಿಯಿಂದ ಬೆಂಕಿ ಹೊರಡುವದನ್ನು ನೋಡಿ, ಈ ಕಾರ್ಯವೇನೆಂದು ಆಶ್ಚರ್ಯ ಪಟ್ಟು ಸ್ವಲ್ಪ ಸಮಯ ನಿಂತನು. ಕಡೆಗೆ — ಅದು ಏನಾಗಿದ್ದರೂ ಚಿಂತಿಲ್ಲ! ನನ್ನನ್ನು ಕೊಲ್ಲದೆಂದು ತನ್ನಲ್ಲಿ ಹೇಳಿ ಕೊಂಡು, ಈ ಸಂಗತಿಯನ್ನು ಹ್ಯಾಗಾದರೂ ತಿಳಿದು ಕೊಳ್ಳ ಬೇಕೆಂತ, ಪೊಲಿಸ್ ಠಾಣ್ಯಕ್ಕೆ ಹೋ

ಗಿ, ತಾನು ನೋಡಿದ್ದನ್ನು ಅಲ್ಲಿ ತಿಳಿಸಿ, ಇದರ ವಿಷಯದಲ್ಲಿ ಸತ್ಯವನ್ನು ಪೂರ್ಣ ಪರೀಕ್ಷೆ ಮಾಡಿ ತಿಳಿದು ಕೊಳ್ಳುವ ಹಾಗೆ, ಧೈರ್ಯವುಳ್ಳ ಕೆಲವರನ್ನು ಕೊಡ ಬೇಕೆಂದು ಬೇಡಿ ಕೊಂಡನು. ಐದು ಮಂದಿ ಪೊಲಿಸ್‌ನವರು ಅಪ್ಪಣೆ ಹೊಂದಿ ತಮ್ಮಲ್ಲಿ ಧೈರ್ಯ ಮಾಡಿ ಕೊಂಡು ಅದೇ ರಾತ್ರಿಯಲ್ಲಿ ಎದ್ದು, ಆ ಬ್ರಾಹ್ಮಣನ ಸಂಗಡ ಹೋಗಿ, ಆ ಕೆರೆಗೆ ಸಮೀಪ ಬರುವಾಗ, ಬೆಂಕಿ ಉರಿಯುವ ಭೂತ ಕೆರೆಗೆ ಇಳಿಯಿತು. ಆಗ ಬ್ರಾಹ್ಮಣನು ಅದರ ಸಂಗಡಲೇ ಇಳಿದು, ಅದನ್ನು ಹಿಡಿಯಲಿಕ್ಕೆ ನೋಡಿದನು. ಆಗ ಅವನನ್ನು ಭಯ ಪಡಿಸುವದಕ್ಕಾಗಿ, ಹುಂ ಹುಂ ಎಂಬ ಶಬ್ದ ಮಾಡಿ ಕೂಗಿ, ಸ್ವಲ್ಪ ದೂರ ಹೋಗಿ, ಕಲ್ಲು ಬಿಸಾಡಲಿಕ್ಕೆ ತೊಡಗಿ, ಬಾಯಿಯಿಂದ ಬೆಂಕಿ ಉರಿಸಿತು. ಆ ಬ್ರಾಹ್ಮಣನು ಒಂದು ಡಾಲನ್ನು ಎದುರಿನಲ್ಲಿ ಹಿಡಿದು ಅದರ ಹತ್ತರ ಹೋಗಿ, ತಿರುಗಿ ಹಿಡಿಯಲಿಕ್ಕೆ ಪ್ರಯತ್ನ ಮಾಡುವಾಗ, ಆ ಭೂತವು ಕಸವೂ ಹೇಸಿಗೆಯೂ ಕೆಸರೂ ಇರುವ ಒಂದು ಮೂಲೆಯಲ್ಲಿ ಸೇರಿ, ಅಲ್ಲಿಯೇ ಕೂತು ಕೊಂಡಿತು. ಆ ಬ್ರಾಹ್ಮಣನಿಗೆ ಏನೂ ಆಗುವದಿಲ್ಲವೆಂದು ಆ ಪೊಲಿಸ್‌ನವರು ನೋಡಿ, ಅವನ ಹತ್ತರ ಬಂದು, ಆ ಭೂತದ ಜುಟ್ಟನ್ನು ಹಿಡಿದು, ಬೈದು ಚನ್ನಾಗಿ ಗುದ್ದಿದರು. ಆಗ ದಮ್ಮಯ! ದಮ್ಮಯ! ಎಂದು ಕೂಗಿ, ನಾನು ಭೂತಪ್ರೇತವಲ್ಲ, ಒಬ್ಬ ಸ್ತ್ರೀಯಾಗಿದ್ದೇನೆ, ನನ್ನನ್ನು ಹೊಡದು ಕೊಲ್ಲ ಬೇಡಿರೆಂದು ಬೇಡಿ ಕೊಂಡಿತು. ಆಗ ಆ ಸ್ತ್ರೀಯನ್ನು ಹೆಚ್ಚು ಹೊಡೆಯದೆ ಬಿಟ್ಟು ಅವಳನ್ನು ವಿಚಾರಿಸುವಾಗ, ತಾನು ಒಬ್ಬ ಬ್ರಾಹ್ಮಣನ ಹೆಂಡತಿಯಾಗಿದ್ದೇನೆಂದೂ, ಗಂಡನನ್ನು ಪ್ರೀತಿ ಮಾಡದೆ ಬೇರೊಬ್ಬನಿಗೆ ಕೂಡಿ ಕೊಂಡಿರುವ ಸಂಗತಿಯು ಯಾರಿಗೂ ತಿಳಿಯದೆ ಇರ ಬೇಕೆಂದು ದಿನಾಲು ಈ ಕೆರೆಗೆ ರಾತ್ರಿಯಲ್ಲಿ ಬಂದು, ಒಂದು ತರದ ಮದು ಹಚ್ಚಿದ ಕಾಗದವನ್ನೂ ಬೆಂಕಿಯನ್ನೂ ತಯಾರು ಮಾಡಿ, ಕೊಳವೆಯಲ್ಲಿಟ್ಟು, ಯಾರಾದರೂ ಇಲ್ಲಿಗೆ ಬರುತ್ತಾರೆಂಬದನ್ನು ನೋಡಿದರೆ, ಅದನ್ನು ಉರಿಸಿ, ಈ ಪ್ರಕಾರ ಜನರನ್ನು ಭಯ ಪಡಿಸಲಿಕ್ಕೆ ನೋಡುತ್ತಿದ್ದೆ ಎಂದು ಅರಿಕೆ ಮಾಡಿದಳು. ಆಗ ಆ ಬ್ರಾಹ್ಮಣನು ಅವಳಿಗೆ ಇನ್ನು ಮೇಲೆ ಇಲ್ಲಿಗೆ ಬಂದು ಇಂಥಾ ಕೆಲಸವನ್ನು ಮಾಡ ಬಾರದೆಂ

ದೂ, ಇನ್ನೊಂದು ಸಾರಿ ಶಿಕ್ಕಿದರೆ, ಮೂಗು ಕಿವಿಗಳನ್ನು ಕೊಯ್ಯುತ್ತೇನೆಂದು ಹೇಳಿ, ಅವಳನ್ನು ಭಯ ಪಡಿಸಿ ಕಳುಹಿಸಿ ಬಿಟ್ಟನು.

ಇದನ್ನು ಕೇಳಿ ಎಲ್ಲರೂ ಆಶ್ಚರ್ಯದಿಂದ: ಹೆಂಗಸರಿಗೆ ಎಂಥಾ ಯುಕ್ತಿ ಉಂಟಪ್ಪ! ಎಂದು ವಿಸ್ಮಿತರಾಗಿ ಹೇಳಿದರು.

ಚದ್ರಭ: ಆದರೆ ಇಲ್ಲಿ ಪೂಜೆ ಮಾಡುವ ಭೂತಗಳ ಸಂಗತಿ ಬೇರೆ ಉಂಟು.

ಪಾದ್ರಿ: ಹೆಚ್ಚು ಕಡಿಮೆ ಏನು? ಕೃಷ್ಣರಾಯರು ಮುಂಚೆ ಹೇಳಿದ ಕಥೆಗಳು ಅದೇ ತರದ ಸಂಗತಿಗಳನ್ನು ತೋರಿಸಲಿಲ್ಲವೋ? ಮನುಷ್ಯರು ಮಾತ್ರ ಮಿಥ್ಯಾಮತಿಗಳಾಗಿ ಇಂಥಾ ಬುದ್ಧಿ ಇಲ್ಲದ ಭಯದಲ್ಲಿ ಬೀಳುತ್ತಾರೆ. ಇದನ್ನು ಸ್ವಲ್ಪ ಹೆಚ್ಚು ನಮ್ಮ ಮನಸ್ಸಿಗೆ ತೆಗದು ಕೊಂಡು ಹ್ಯಾಗೆ ಆಯಿತೆಂದು ವಿಚಾರಿಸಿ ನೋಡಿ ಕೊಳ್ಳುವಾ!

ಅದಕ್ಕೆ ಅವರು: ಒಳ್ಳೇದು ನಿಮಗೆ ಗೊತ್ತಿದ್ದದ್ದನ್ನು ನಮಗೆ ಹೇಳಿರಿ.

ಪಾದ್ರಿ: ಭೂ ಪರಲೋಕಗಳನ್ನು ಉಂಟು ಮಾಡಿದ ಒಬ್ಬನೇ ದೇವರ ಜ್ಞಾನವು ಪೂರ್ವದಲ್ಲಿ ಎಲ್ಲಾ ಮನುಷ್ಯರಿಗೆ ಗೊತ್ತಿತ್ತು. ಆದರೆ ಈ ದೇವರಿಗೆ ಸೇವೆ ಮಾಡ ಮನಸ್ಸಿಲ್ಲದವರಾಗಿ ಹೆಚ್ಚು ಹೆಚ್ಚಾಗಿ ಪಾಪದಲ್ಲಿ ಬಿದ್ದು ದೇವರ ವಿಷಯದಲ್ಲಿ ಅಜ್ಞಾನರಾಗಿ ಲೋಕ ಸೃಷ್ಟಿಯಿಂದ ಅವನ ಅದೃಶ್ಯವಾದವುಗಳೂ, ಅವನ ನಿತ್ಯ ಬಲವೂ, ದೈವತ್ವವೂ ಪ್ರತ್ಯಕ್ಷವಾಗಿರುವದರಿಂದ ದೇವರು ಒಬ್ಬನೇ ಎಂದು ತಿಳಿದಿದ್ದರೂ, ಅವನನ್ನು ದೇವರೆಂದು ಮಹಿಮೆ ಪಡಿಸದೆ, ಸ್ತುತಿಸದೆ, ತಮ್ಮ ಯೋಚನೆಗಳಲ್ಲಿ ನಿಷ್ಪ್ರಯೋಜಕರಾಗಿ ಅವರ ಬುದ್ಧಿ ಇಲ್ಲದ ಹೃದಯವು ಅಂಧಕಾರವಾಯಿತು. ಈ ಕಾರಣಕ್ಕಾಗಿ ದೇವರು ಅವರ ಹೃದಯಗಳ ಆಶೆಗಳ ಪ್ರಕಾರ ಅವರನ್ನು ಅಶುದ್ಧತ್ವಕ್ಕೆ ಒಪ್ಪಿಸಿ ಬಿಟ್ಟನು. ಇವರು ದೇವರು ಸತ್ಯವನ್ನು ಸುಳ್ಳಿಗಾಗಿ ಮಾರ್ಪಡಿಸಿ, ಸೃಷ್ಟಿ ಕರ್ತನಿಗಿಂತ ಸೃಷ್ಟಿಯನ್ನು ಪೂಜಿಸಿದರು. ಅವರು ದೇವರನ್ನು ತಿಳುವಿಕೆಯಲ್ಲಿ ಇಟ್ಟು ಕೊಳ್ಳುವದು ಯುಕ್ತವೆಂದು ಎಣಿಸದ್ದರಿಂದ ಅಕೃತ್ಯಗಳನ್ನು ಮಾಡುವ ಹಾಗೆ ದೇವರು ಅವರನ್ನು ವಿಯುಕ್ತ ಬುದ್ಧಿಗೆ ಒಪ್ಪಿಸಿ ಬಿಟ್ಟನು. ಹೀಗೆ ಬುದ್ಧಿ ಹೀನರೂ ದುರಾಲೋಚಕರೂ ಆಗಿ, ಸದ್ವಿಶ್ವಾಸವೂ ದೇವಭಕ್ತಿಯೂ ಅವ

ರೊಳಗೆ ಕಡಿಮೆಯಾಗುತ್ತಾ ಬಂದದರಿಂದ, ಅವರು ಲಯವಾಗದ ದೇವರ ಮಹಿಮೆಯನ್ನು ಲಯವಾಗುವ ನರ ಪಕ್ಷಿ ಚತುಷ್ಪಾದ ಕ್ರಿಮಿಗಳಿಗೆ ಸಮಾನ ರೂಪವಾಗಿ ಮಾರ್ಪಡಿಸಿ, ಅವರಲ್ಲಿ ಮುಂಚೆ ದೇವರ ಬದಲಿಗೆ ದೇವರ ನಿರ್ಮಾಣವಾಗಿರುವ ಸೂರ್ಯ ಚಂದ್ರ ನಕ್ಷತ್ರಗಳನ್ನು ಬೆಂಕಿಗೆ ಸಮಾನ ಮಾಡಿ, ಇವುಗಳಿಗೆ ದೇವರೆಂದು ಆರಾಧನೆ ಮಾಡಿದರು. ಆ ಮೇಲೆ ತಮಗೆ ಹೆಚ್ಚು ಹತ್ತರವಾಗಿರುಪಂಥಾದ್ದನ್ನು, ಅಂದರೆ ಘಾಳಿ, ಭೂಮಿ, ಮೇಘ, ನೀರು ಮುಂತಾದವುಗಳನ್ನು ದೇವರುಗಳೆಂದೆಣಿಸಿ ಕಡೆಗೆ ತಮ್ಮಿಂದಲು ಸಹ ವಿಶೇಷವುಳ್ಳವರು ಯಾರಿಗಾದರೂ ಈ ಜೀವದಲ್ಲಿರುವ ತನಕ ಮಾನ ಮರ್ಯಾದೆ ಕೊಟ್ಟ ಪ್ರಕಾರ ಅಂಥವರಿಗೆ ಸತ್ತ ಮೇಲೆಯೂ ಕೊಡ ಬೇಕೆಂದು ನೆನಸಿ ಕೊಂಡು ಆರಾಧನೆ ಮಾಡಿ ಭಯಪಟ್ಟು ಪೂಜೆ ಮುಂತಾದವುಗಳನ್ನು ಮಾಡಿದರು. ಹಾಗೆ ಈಗ ಸಹ ನಡಿಯುತ್ತದೆ. ಐವತ್ತು ವರುಷಗಳ ಹಿಂದೆ ಕಾಶಿಯಲ್ಲಿ ಶಿವನಾಥನೆಂಬ ಐಶ್ವರ್ಯವಂತನಾದ ಒಬ್ಬನು ಇದ್ದನು; ಅವನು ಬಹಳ ಮೋಸ ಮಾಡುವವನಾಗಿಯೂ ಆಡುವವನಾಗಿಯೂ ಇದ್ದದರಿಂದ, ಯಾವಾಗಲೂ ಕೆಟ್ಟ ಕೃತ್ಯಗಳನ್ನು ತನ್ನ ಮನೆಯಲ್ಲಿ ನಡಿಸುತ್ತಾ ಇದ್ದನು. ಕೆಲವು ವರುಷಗಳಿಂದ ಹೀಗೆ ಅವನ ಮನೆಯಲ್ಲಿ ನಡಿಯುತ್ತದೆ ಎಂಬ ಸುದ್ದಿಯು ಸರಕಾರಕ್ಕೆ ಮುಟ್ಟಿದಾಗ, ಅವರು ಪೊಲಿಸ್‌ನವರನ್ನು ಕಳುಹಿಸಿ ಅವನನ್ನು ಹಿಡಿಯ ಬೇಕೆಂದು ಅಪ್ಪಣೆ ಕೊಟ್ಟರು. ಅವನು ಅದನ್ನು ಕೇಳಿ ಮನೆಯಲ್ಲಿ ಅಡಗಿ ಕೊಂಡನು. ಆಗ ದಂಡಿನವರು ಬಂದು ಬಲಾತ್ಕಾರದಿಂದ ತನ್ನನ್ನು ಕೊಂಡು ಹೋಗಲಿಕ್ಕಿದ್ದಾರೆಂದು ತಿಳಿದು, ಬಹದೂರೆಂಬವನನ್ನು ಕರಿಸಿ, ಆಯುಧಗಳನ್ನು ಹಿಡಿದು ಮನೆಯಿಂದ ಹೊರಟು ದಂಡಿನವರ ಮೇಲೆ ಬಿದ್ದು, ಓಡಿ ಹೋಗಲಿಕ್ಕೆ ಪ್ರಯತ್ನ ಮಾಡಿದನು; ಆದರೆ ದಂಡಿನವರು ತುಬಾಕಿಗಳನ್ನು ಹೊಡೆದು ಆ ಇಬ್ಬರನ್ನು ಕೊಂದರು; ಆ ಶಿವನಾಥನು ಸತ್ತ ಸ್ಥಳದಲ್ಲಿ ಮತ್ತೆ ಒಂದು ಕಟ್ಟೆಯನ್ನು ಕಟ್ಟಿಸಿ ಅವನು ಅಲ್ಲಿ ಭೂತವಾದನೆಂದು: ಹೂ, ಗಂಧ, ಅನ್ನ, ನೀರು, ಮುಂತಾದವುಗಳನ್ನು ಹಾಕಿ ಪೂಜೆ ಮಾಡಿದರು. ಹಾಗೆ ತಿರುನಲ್ವೇಲಿ ಎಂಬ ದೇಶದಲ್ಲಿಯೂ ಹತ್ತಿಪ್ಪತ್ತು ವರುಷಗಳ ಮುಂಚೆ ದಂಡಿನವರ

ಮುಖ್ಯಸ್ಥನಾದ ಒಬ್ಬ ಧೊರೆಯು ಸತ್ತು ಹೋದಾಗ ಆ ಪಟ್ಟಣದ ಜನರು
ಅವರು ಭೂತವಾದರೆಂದು ಬಹಳ ಹೆದರಿ, ಪ್ರತ್ಯೇಕವಾಗಿ ಒಂದು ಭೂ
ತಸ್ಥಾನವನ್ನು ಕಟ್ಟಿ, ಹೊಗೆ ಬತ್ತಿಯನ್ನೂ ಸರಾಯವನ್ನೂ ಕೊಟ್ಟು
ಪೂಜೆ ಮಾಡುತ್ತಾ ಬರುತ್ತಾರೆ. ಇದು ನಿಜವಾಗಿ ನಡೆದ ಸಂಗತಿಯಾ
ಗೆದೆ. ಈ ತುಳು ದೇಶದಲ್ಲಿ ಪೂಜಿಸುವಂಥ ಒಂದು ಸ್ಥಳವನ್ನು ನಿಶ್ಚಯಿ
ಸಲಿಕ್ಕೆ ಅಷ್ಟು ಪ್ರಯಾಸ ಪಡುವದು ಅವಶ್ಯವಿಲ್ಲವೆಂದು ತೋರುತ್ತದೆ.
ಯಾಕಂದರೆ ಶುಮಾರು ಇಪ್ಪತ್ತು ವರುಷಗಳ ಮುಂಚೆ ಪಡುಬಿದ್ರಿ
ಎಂಬ ಊರಿನಲ್ಲಿ ದನಗಳನ್ನು ಮೇಯಿಸುವ ಹುಡುಗರು ಒಂದು ಗುಡ್ಡೆ
ಯಲ್ಲಿ ಆಟಕ್ಕಾಗಿ ಒಂದು ಕಲ್ಲನ್ನು ನಿಲ್ಲಿಸಿ ಅದರ ಸುತ್ತಲು ಗೋಡೆಯ
ನ್ನಿಟ್ಟು ಒಂದು ಗೂಡಿನಂತೆ ಮಾಡಿದ್ದರು. ಚೌತಿಯ ದಿವಸದಲ್ಲಿ ವಿ
ನಾಯಕನಿಗೆ ಏನಾದರೂ ಮಾಡುವಂತೆ ಅವರು ಸಹ ಅಲ್ಲಿ ಮಾಡಿ
ದರು. ಇದನ್ನು ಅಲ್ಲಿಯ ಜನರು ಅನುಸರಿಸಿ ಗಣೇಶನಿಗೆ ಅದು ಒಂದು
ವಿಶೇಷ ಸ್ಥಳವೆಂದು ಏಳು ಎಂಟು ವರುಷಗಳ ಈಚೆಗೆ ಚೌತಿ ಹಬ್ಬದ
ಸಮಯದಲ್ಲಿ ಬಹಳ ಮಂದಿ ಕೂಡಿ ಬಂದು ಪೂಜೆಗೆ ಶುಮಾರು ಖ
ರ್ಚು ಮಾಡುತ್ತಾ ಬರುತ್ತಾರೆ. ಅದು ನಿಮ್ಮೆಲ್ಲರಿಗೆ ಗೊತ್ತುಂಟಲ್ಲವೋ?

ಎಲ್ಲರು: ಹೌದು, ಹೌದು.

ಪಾದ್ರಿ: ನೋಡಿರಿ, ಇದೇ ತರದಲ್ಲಿ ಭೂತಗಳ ಪೂಜೆ ಸಹ ಉ
ತ್ಪತ್ತಿಯಾಯಿತು.

ರಾಮಶೆ: ನಾವು ಇನ್ನು ಏನು ಹೇಳ ಬಹುದು? ಎಲ್ಲ ಅವರಿ
ಗೆ ಗೊತ್ತದೆ, ಅವರು ಹೇಳಿದ್ದೆಲ್ಲಾ ಸತ್ಯ.

ಕೃಷ್ಣರಾ: ಹೌದು, ಹಾಗೆಯೇ ಜನರು ಮನಸ್ಸು ಬಂದ ಹಾಗೆ
ಮಾಡುತ್ತಾರೆ.

ಪುಟ್ಟಣ್ಣಾಚಾ: ದೇವರು ಎಲ್ಲಿ ಪ್ರತಿಷ್ಠೆಯಾಗುತ್ತಾರೊ, ಅ
ಲ್ಲಿಯೇ ಪೂಜೆ ಮಾಡ ಬೇಡವೋ?

ಪಾದ್ರಿ: ನಿಮ್ಮ ಪೂಜೆಯಿಂದ ದೇವರಿಗೆ ಪ್ರಯೋಜನವೇನು?
ನಿಮ್ಮ ಕೈಯಲ್ಲಿರುವಂಥಾದ್ದೆಲ್ಲಾ ದೇವರ ದಾನವಲ್ಲವೋ? ಅವನು
ದಯೆಯಿಂದ ನಮಗೆ ಕೊಟ್ಟದರಿಂದ ಅವನನ್ನು ಮೆಚ್ಚಿಸಲಿಕ್ಕೆ ಕಾಣಿಕೆ

ಯಾಗಿ ಹಿಂದೆ ಕೊಡುವದು ಆದೀತೋ? ನೀವು ಪೂಜೆ ಮಾಡುವಂಥಾದೆಲ್ಲಾ ಜನರ ಭ್ರಮೆಗಾಗಿಯೂ ಡಂಭಾಚಾರಕ್ಕಾಗಿಯೂ ನಿಮ್ಮ ಹೊಟ್ಟೆ ತುಂಬಿಸುದಕ್ಕಾಗಿಯೂ ಮಾತ್ರ ಆಗಿರುತ್ತದೆ. ಒಬ್ಬನೇ ದೇವರ ಮೇಲೆ ನೀವು ಮನಸ್ಸು ಇಡದ್ದರಿಂದ, ದೇವರ ಐಕ್ಯದಿಂದ ದೂರವಾಗಿ, ಅದರ ಬದಲಾಗಿ ಅಸಂಘಟವಾದ ಕಲ್ಪನೆಗಳನ್ನು ನಂಬಿ ಭಯಪಡುತ್ತಿರಲ್ಲದೆ, ಪರಿಶುದ್ಧ ದೇವರು ಲೋಕ ಭಾವದವನಾಗಿರುವ ಮನುಷ್ಯನಂತೆ ಇದೆಲ್ಲ ಪ್ರವರ್ತಿಸುತ್ತಾನೆಂಬ ದುರಾಲೋಚನೆಗಳು ಸಹ ನಿಮ್ಮಲ್ಲಿ ಹುಟ್ಟಿಯವೆ; ಅದಕ್ಕಾಗಿ ಸೃಷ್ಟಿಯ ಬಲಗಳನ್ನೂ ಕಾರ್ಯಗಳನ್ನೂ ಕೆಟ್ಟ ಮನುಷ್ಯರ ಕ್ರಿಯೆಗಳನ್ನೂ ನೀತಿಯುಳ್ಳ ದೇವರಿಗಿಂತ ಹೆಚ್ಚಾಗಿ ವಿಶ್ವಾಸಿಸಿ, ಭಯ ಪಟ್ಟು, ಮೆಚ್ಚಿಸಲಿಕ್ಕೆ ನೋಡುತ್ತಾರೆ. ಪೂರ್ವದಲ್ಲಿ ಮನುಷ್ಯರು ಬೆಳಕು ಕತ್ತಲು ಇಲ್ಲವೆ ಒಳ್ಳೇದು ಕೆಟ್ಟದ್ದು ಎಂಬ ಹೆಚ್ಚು ಕಡಿಮೆ ನೋಡಿ, ಅದರ ಒಂದೊಂದಕ್ಕೆ ಒಬ್ಬ ಅಧಿಕಾರಸ್ಥನು ಇದ್ದಾನೆಂದೂ, ಉಪಕಾರ ಮಾಡುವ ದೇವರುಗಳು ಇದ್ದಾರೆಂದೂ, ಶಿಕ್ಷೆಯೂ ಉಪಹತಿಯೂ ಕೊಡುವ ದೇವರುಗಳು ಇರುತ್ತಾರೆಂದೂ ಆಲೋಚನೆ ಮಾಡಿದರೆಂಬದು ಋಗ್ವೇದದ ಗ್ರಹಸೂತ್ರದಿಂದಲೂ ಆ ಭೂತದ ಪ್ರಮಾಣದಿಂದಲೂ ತಿಳಿಯ ಬಹುದು. ಈ ದುರಾಲೋಚನೆಗೆ ತಕ್ಕದ್ದಾಗಿರುವಂಥಾ, ಒಬ್ಬನಾದ ದೇವರ ಸತ್ಯಕ್ಕೆ ಕೇವಲ ವಿರೋಧವಾಗಿರುವಂಥಾ ಬೇರೆ ಬೇರೆ ಕಾರ್ಯಗಳು ನಡಿಯುತ್ತವೆ. ಅದಕ್ಕೆ ಸ್ವಲ್ಪ ಆಲೋಚನೆ ಮಾಡುವವರು ಒಂದು ವೇಳೆ ಶುದ್ಧ ಬುದ್ಧಿಗೆ ಸಮ ಬೀಳುತ್ತದೋ? ಎಂದು ತೋರಿಸಲಿಕ್ಕಾಗಿ, ಇಲ್ಲವೆ ತಿಳಿಯದ ಜನರನ್ನು ಮೆಚ್ಚಿಸಲಿಕ್ಕಾಗಿ, ಅದರ ವಿಷಯದಲ್ಲಿ ತಾವು ನೆನಸುವಂಥಾದ್ದನ್ನು ಬರೆದು ದೇವರ ಕಾರ್ಯವನ್ನು ಕುರಿತು ಮನುಷ್ಯರೀತಿಯಲ್ಲಿಯೂ ಮನುಷ್ಯನ, ವಿಶೇಷವಾಗಿ ದೊಡ್ಡ ಪರಾಕ್ರಮಿಗಳ, ಕಾರ್ಯಗಳನ್ನು ಕುರಿತು ತಾವು ನೆನಸುವದನ್ನು ದೇವರ ಭಾವವಾಗಿಯೂ ತೋರಿಸಿ, ಈ ಪ್ರಕಾರ ದೇವರ ಪರಿಶುದ್ಧತ್ವವನ್ನು ಪಿಶಾಚಿಗಳ ಅಶುದ್ಧತ್ವಕ್ಕೆ ಸಮಾನ ಮಾಡಿ, ಮನುಷ್ಯರನ್ನು ಸಹ ದೇವರೆಂದು ನೆನಸಿ, ಸತ್ತವರಿಗೆ ಕ್ರಿಯೆ ಮಾಡಿದರು. ಹಾಗೆಯೇ ನೀವು ದೇವರುಗಳೆಂದು ನೆನಸುವ ರಾಮ, ಕೃಷ್ಣ ಮುಂತಾದ

ವರ ಚರಿತ್ರೆಗಳಾದವು. ಅದೇ ಪ್ರಕಾರ ಆಗದ ಕೆಟ್ಟ ಕೆಲಸಗಳನ್ನು ಎಲ್ಲಾ ಪಾಪದ ತಂದೆಯಾಗಿರುವ ಸೈತಾನನ ಕ್ರಿಯೆಗಳ ಸಂಗಡ ಬೆರಿಕೆ ಮಾಡಿ ನಡಿಸುವಂಥಾ ಮನುಷ್ಯರನ್ನು ಜೀವದಲ್ಲಿರುವಾಗಲೂ ಸತ್ತ ಮೇಲೆಯೂ ಸೈತಾನನೆಂದೂ ಭೂತ ಪಿಶಾಚಿಗಳೆಂದೂ ಜನರು ನೆನಸುವದಲ್ಲದೆ, ಇಂಥವರು ತಮಗೆ ಅತಿ ಸಮೀಪವಾಗಿದ್ದು ಮೋಸ ಉಪದ್ರಾದಿಗಳನ್ನು ಕೊಡ ಬಹುದೆಂದು ಭಯ ಪಟ್ಟು, ನಾನಾ ತರದ ಕಾರ್ಯಗಳಿಂದಲೂ ಪೂಜೆಗಳಿಂದಲೂ ಅವರನ್ನು ಮೆಚ್ಚಿಸಿ, ಸಮದಾಯಿಸ ನೋಡುತ್ತಾರೆ. ಈ ಪ್ರಕಾರ ನಿಮ್ಮ ಭೂತಗಣಂಗಳ ಚರಿತ್ರೆಗಳಾಗಿವೆ. ಕಡೆಗೆ ಅವರು ಇದೆಲ್ಲಾ ದೇವರ ಅಪ್ಪಣೆಯ ಪ್ರಕಾರ ನಡಿಯುತ್ತದೆಂದು ತೋರಿಸಿದರು. ಇದಕ್ಕೆ ಕೃಷ್ಣ ಚರಿತ್ರೆಯಲ್ಲಿ ಒಂದು ದೃಷ್ಟಾಂತ ಕೊಡುತ್ತೇನೆ:—ವಿಷ್ಣು ಮಾಯೆಯನ್ನು ಕರೆದು, ಎಲೇ ಮಾಯೆಯೆ! ನೀನು ನನಗೆ ತಂಗಿಯಾಗಿರುವದರಿಂದ, ದುರ್ಗಿ, ಚಾಮುಂಡಿ, ಪಾರ್ವತಿ, ಕಾರ್ತ್ಯಾಯನಿ, ಕಾಳಿಯೆಂಬ ಇತ್ಯಾದಿ ಹೆಸರುಗಳನ್ನು ಧರಿಸಿ, ಶಿವನಿಗೆ ಹೆಂಡತಿಯಾಗಿ ಕುರಿ ಕೋಣ ಕೋಳಿ ಮುಂತಾದ ಪ್ರಾಣಿಗಳ ಬಲಿಗಳನ್ನು ನಿನಗೆ ಕೊಟ್ಟು, ಯಾರು ನಿನ್ನನ್ನು ಭಕ್ತಿಯಿಂದ ಪೂಜಿಸುವರೋ, ಅವರಿಗೆ ನೀನು ಬೇಕಾದ ಇಷ್ಟಾರ್ಥಗಳನ್ನು ಕೊಡುತ್ತಾ ಲೋಕದ ಜನಗಳಿಂದ ಪೂಜಿಸಿಕೋ ಎಂದು ಅಪ್ಪಣೆ ಕೊಟ್ಟು ಕಳುಹಿಸಿದನೆಂದು ಬರೆದದೆ, ಅದರ ವಿವರ ಪುಟ್ಟಣ್ಣಾಚಾರಿಯರಿಗೆ ಗೊತ್ತಿರುವದು.

ಪುಟ್ಟಣ್ಣಾಚಾ: ಹೌದು, ಅದು ಅನೇಕ ಶ್ಲೋಕಗಳಲ್ಲಿ ವಿವರಿಸಿಯದೆ.

ಪಾದ್ರಿ: ನೋಡಿರಿ! ಹಾಗೆ ಮಾರಿ, ನಾಗಭೂತಗಳ ಸಂಗತಿ ಎದ್ದಿತು ಎಂಬದು ಸ್ಪಷ್ಟವಾಗಿ ಕಾಣುತ್ತದೆ. ಶಾಸ್ತ್ರ ತಿಳಿದವರು ಪ್ರೀತಿಯ ನೆನಪಿಗಾಗಿ ಸತ್ತವರಿಗೆ ಪಿತೃದಿನವೆಂದು ಆಚರಿಸುತ್ತಾರೆ. ಅದೇ ಪ್ರಕಾರ ಶಾಸ್ತ್ರ ತಿಳಿಯದವರು ಪಿತೃಗಳ ನೆನಪಿನಿಂದ ಕ್ರಮೇಣವಾಗಿ ವಿಶೇಷ ಕೆಟ್ಟವರನ್ನು ಹಿಡಿದು ಅವರ ಭಯಕ್ಕಾಗಿ ಕಾರ್ಯ ನಡಿಸಿದರು; ಯಾಕಂದರೆ ಕೆಲವು ಭೂತಗಳನ್ನು ಮಾತ್ರ ಎಲ್ಲಿಯೂ ನಂಬುತ್ತಾರೆ; ಒಂದೊಂದು ದಿಕ್ಕಿನಲ್ಲಿ ಬೇರೆ ಬೇರೆ ಭೂತಗಳುಂಟು. ನಾ

ವು ಬುದ್ಧಿಯುಳ್ಳವರಾಗಿ ಅದರ ವಿಷಯ ಸಮವಾದ ಒಳ್ಳೇ ಆಲೋಚನೆ ಮಾಡುವಾಗ, ಭೂತಗಳ ಬಲವು ಶುಮಾರು ಬಿದ್ದು ಹೋಗುವದಲ್ಲದೆ ಅದರ ಭಯವು ಕಡಿಮೆಯಾಗುವದು.

ಪಾತಾಳಿ ಪೂ: ಹೌದು, ನಾವೆಲ್ಲರು ಜಾತಿಯನ್ನು ಬಿಟ್ಟು ನಿಮ್ಮಲ್ಲಿ ಕೂಡ ಬೇಕೆಂದು ನೋಡುತ್ತೀರಿ.

ಪಾದ್ರೆ: ಕೂಡುವದೆಂಬುವದು ಬೇರೆ, ಅದನ್ನು ಬಿಡಿರಿ! ನೀವು ಸತ್ಯವಂತರಾಗಿ ನಿಮ್ಮ ಸ್ಥಿತಿಯನ್ನು ಸ್ವಲ್ಪ ತಿಳಿದು ಕೊಳ್ಳ ಬೇಕೆಂಬ ಆಶೆ ನನಗೀಗ ಉಂಟು.

ಚಂದ್ರಭ: ಹಾಗಾದರೆ ಮನುಷ್ಯರಿಗೂ ಭೂತಕ್ಕೂ ಏನೂ ಸಂಬಂಧವಿಲ್ಲವೋ?

ಪಾದ್ರೆ: ಮನುಷ್ಯನು ಅದರ ವಿಷಯ ಗ್ರಹಿಸ ಬಹುದಾದದ್ದನ್ನು ತೋರಿಸಿದೆನು; ಆದರೆ ಅದರ ವಿಷಯದಲ್ಲಿ ಮನುಷ್ಯನ ಬುದ್ಧಿಗೆ ಮುಟ್ಟದಂಥ, ಗ್ರಹಿಸಲಿಕ್ಕೆ ಕೂಡದಂಥ ಕಾರ್ಯವು ಏನೂ ಇರುವದಿಲ್ಲವೆಂದು ನೆನಸ ಕೂಡದು. ಅಂಧಕಾರದ ಕ್ರಿಯೆಯೂ ದುರಾತ್ಮಗಳ ಸಂಗತಿಯೂ ಬಹಳ ಉಂಟು. ಅದರ ವಿಷಯದಲ್ಲಿ ನಾವು ತಿಳಿದು ಕೊಳ್ಳಲಿಕ್ಕೆ ತಕ್ಕದ್ದಾಗಿರುವ ಸತ್ಯವನ್ನು ಎಲ್ಲಾ ಬುದ್ಧಿ ಜ್ಞಾನಗಳ ಬುಗ್ಗೆಯಾಗಿರುವ ದೇವರ ವಾಕ್ಯದಿಂದಲೇ ಕೇಳುವಾ.

ಹಾಗೆಯೇ ಮೊದಲಾಗಿ ದೇವರ ದೂತರ ವಿಷಯದಲ್ಲಿ ಮುಖ್ಯವಾದ ಸಾರಂಶವನ್ನು ವಿವರವಾಗಿ ನೋಡುವ! ದೇವರ ದೂತರು ಶುದ್ಧತ್ವವೂ ನೀತಿಯೂ ಭಾಗ್ಯವೂ ಉಳ್ಳ ಆತ್ಮಗಳಾಗಿ ತಮ್ಮ ಸ್ವಂತ ಚಿತ್ತಕ್ಕಾಗಲೀ ಆಲೋಚನೆಗಳಿಗಾಗಲೀ ಸಮ ತೋಚುವ ಹಾಗೆ ಎಲ್ಲಾ ಪೂರ್ಣವಾಗಿ ದೇವರ ಚಿತ್ತದ ಪ್ರಕಾರ ಮಾಡಿ, ಆತನ ಆಜ್ಞೆಗಳನ್ನು ಯಾವಾಗಲೂ ಸಂತೋಷದಿಂದ ಕೈಕೊಂಡು, ಆರಂಭದಿಂದ ಅಂತ್ಯದ ವರೆಗೂ ಲೋಕವನ್ನು ನಡಿಸಿ, ಆಳುವ ದೇವರ ದಾಸರಾಗಿದ್ದಾರೆ. ಪರಲೋಕದಲ್ಲಿ ಅವರು ದೇವರ ಸದ್ಗುಣಗಳಿಗಾಗಿಯೂ ಆಶ್ಚರ್ಯವಾಗಿರುವ ಕ್ರಿಯೆಗಳಿಗಾಗಿಯೂ ಸ್ತುತಿಸುವವರಾಗಿ, ಭೂಮಿಯಲ್ಲಿರುವ ಮನುಷ್ಯರ ಸೇವೆಗೂ, ವಿಶೇಷವಾಗಿ ಭಕ್ತರಿಗೆ ಸಹಾಯ ಮಾಡಿ, ಅವ

ರನ್ನು ಕಾಪಾಡಿ, ಸಮದಾಯಿಸಿ, ಕಷ್ಟ ಇಕ್ಕಟ್ಟುಗಳಿಂದ ಬಿಡಿಸಲಿಕ್ಕೂ ಸಿದ್ಧವಾಗಿದ್ದಾರೆ. ಹಾಗೆ ದಾನಿಯೇಲನೆಂಬುವವನು ಸಿಂಹಗಳ ಗವಿಯಲ್ಲಿರುವಾಗ ದೇವರ ದೂತನು ಬಂದು ಸಿಂಹಗಳು ಅವನನ್ನು ಮುಟ್ಟದ ಹಾಗೆ ಅವುಗಳ ಬಾಯಿಗಳನ್ನು ಮುಚ್ಚಿದನು. ಮತ್ತು ಪೇತ್ರನೆಂಬವನು ನಿರಪರಾಧಿಯಾಗಿ ಶೆರಮನೆಯಲ್ಲಿ ಬಿದ್ದಾಗ ದೇವರ ದೂತನು ಬಂದು ಸಂಕೋಲೆಗಳಿಗೂ ಕಾವಲಿಯವರಿಗೂ ಅವನನ್ನು ತಪ್ಪಿಸಿ ಬಿಡಿಸಲಿಕ್ಕೆ ಸಹಾಯವಾಗಿ ನಿಂತನು. ಬಹಳ ಅನ್ಯಾಯದಲ್ಲಿದ್ದ ಸೋದೊಮ್ ಗೊಮೋರ ಎಂಬ ಪಟ್ಣದವರ ಸಂಗಡ ಲೋಟನು ನಾಶವಾಗದ ಹಾಗೆ ದೇವರ ದೂತರು ಬಂದು ಅವನನ್ನು ಹೊರಗೆ ಕರ ಕೊಂಡು ಹೋದರು. ಸಾಯುವ ಸಮಯದಲ್ಲಿ ನೀತಿವಂತರ ಆತ್ಮಗಳನ್ನು ಪರಲೋಕದ ನಿತ್ಯಭಾಗ್ಯಕ್ಕೆ ಕೊಂಡು ಹೋಗುವದು ಅವರ ಕೆಲಸವಾಗೆದೆ. ಮತ್ತು ನಾವು ಮುಂಚೆ ನೋಡಿದ ಹಾಗೆ ಒಳ್ಳೇ ದೂತರಿಂದ ಒಂದು ಪಾಲು ಸತ್ಯದ ಸ್ಥಿತಿಯನ್ನು ಬಿಟ್ಟು ಪಾಪ ಮಾಡಿದರು; ಅವರ ಮುಖ್ಯಸ್ಥನಾಗಿರುವ ಸೈತಾನನು ತಂತ್ರ ಹೊಟ್ಟೆಕಿಚ್ಚುಗಳಿಂದ ಸರ್ಪವೇಶವನ್ನು ಧರಿಸಿ ಕೊಂಡು ಮನುಷ್ಯರನ್ನು ಕೆಡಿಸಿದನು. ಹ್ಯಾಗಂದರೆ — ಏದೆನ್ ಎಂಬ ತೋಟದ ಮಧ್ಯದಲ್ಲಿ ದೇವರು ಜ್ಞಾನದ ಮರವನ್ನು ನೆಟ್ಟು ಅದರಿಂದ ತಿನ್ನ ಬಾರದೆಂದು ಮೊದಲನೆ ಮನುಷ್ಯನಾದ ಆದಮನಿಗೆ ಹೇಳಿದನು; ಆದರೆ ಆ ಸರ್ಪವು ನಮ್ಮೆಲ್ಲರ ಮೂಲ ತಾಯಿಯಾಗಿರುವ ಹವ್ವಳೆಂಬವಳಿಗೆ ಹೇಳಿದ್ದು: ನೀವು ಈ ಹಣ್ಣನ್ನು ತಿನ್ನ ಬಹುದು, ತಿಂದರೆ ದೇವರ ಹಾಗೆಯೆ ಆಗುವಿರಿ. ಆಗ ಹವ್ವಳು ಆ ಹಣ್ಣನ್ನು ನೋಡಿ ಅದು ತಿನ್ನುವದಕೆ ಒಳ್ಳೇದೂ ಕಣ್ಣುಗಳಿಗೆ ಇಷ್ಟವೂ, ಆ ಮರವು ಬುದ್ಧಿ ಹೊಂದಿಸುವದಕ್ಕೆ ರಮ್ಯವೂ ಎಂದು ನೋಡಿ ಇಚ್ಛೈಸಿ ಅದರ ಫಲ ತೆಗದು ತಿಂದಳು, ತನ್ನ ಗಂಡನಿಗೂ ಕೊಟ್ಟಳು, ಅವನೂ ತಿಂದನು; ಮತ್ತು ಅವರು ತೋಟದಲ್ಲಿ ದೇವರ ಶಬ್ದವನ್ನು ಕೇಳಿ ಅಡಗಿ ಕೊಂಡರು; ಆಗ ಯೆಹೋವನಾದ ದೇವರು ಅವರನ್ನು ಕರೆದು, ನೀವು ಎಲ್ಲಿ ಅಂತ ಕೇಳಿ ಅವರನ್ನು ವಿಚಾರಿಸಿ ಅವರ ಪಾಪಕ್ಕಾಗಿ ಶಿಕ್ಷೆ ನಿರ್ಣಯಿಸಿ, ಸರ್ಪಕ್ಕೂ ಮನುಷ್ಯರಿಗೂ ಶಾಪ ಕೊಟ್ಟು, ಮನುಷ್ಯರು ಬೇನೆಯೂ ದುಖ್ಖವೂ ತಿಂದು

ಕಷ್ಟ ಮಾಡಿ ಮುಖದ ಬೆವರಿನಿಂದ ಆಹಾರ ತಿಂದು ಕಡೆಗೆ ಸತ್ತು ತಿರಿಗಿ ಮಣ್ಣಾಗ ಬೇಕೆಂಬದಾಯಿತು. ಮತ್ತು ಮನುಷ್ಯನು ಕೈ ಚಾಚಿ ಜೀವ ವೃಕ್ಷದ ಫಲವನ್ನು ತೆಗದು ತಿಂದು ಬದುಕ ಬಾರದು ಎಂದು ದೇವರು ಅಪ್ಪಣೆ ಕೊಟ್ಟು, ಅವನನ್ನು ಯಾವದರಿಂದ ಉಂಟು ಮಾಡಿದನೋ ಆ ಭೂಮಿ ವ್ಯವಸಾಯ ಮಾಡುವದಕ್ಕೆ ಏದೆನ್ ತೋಟದೊಳಗಿಂದ ಕಳುಹಿಸಿ, ತೋಟದ ಪೂರ್ವದಲ್ಲಿ ಕೇರೂಬಿಗಳನ್ನೂ ಸುತ್ತಾಡುವ ಕತ್ತಿಯ ಜ್ವಾಲೆಯನ್ನೂ ಜೀವವೃಕ್ಷದ ದಾರಿ ಕಾಯುವದಕ್ಕೋಸ್ಕರ ಇರಿಸಿದನು. ಈ ಪ್ರಕಾರ ಸೈತಾನನು ಆರಂಭದಿಂದಲೇ ಸುಳ್ಳುಗಾರನೂ ನರಹತ್ಯ ಮಾಡುವವನೂ ಆಗಿ ಮನುಷ್ಯರ ಮೇಲೆಯೂ, ಅವರು ದೇವರ ಹೆಸರಿನಲ್ಲಿ ಲೋಕವನ್ನು ನಡಿಸುವವರಾಗಿದ್ದದರಿಂದ ಲೋಕದ ಮೇಲೆಯೂ ಅಧಿಕಾರ ಹೊಂದಿ, ಲೋಕದ ಅಧಿಪತಿಯು, ಲೋಕೇಶನು, ಲೋಕದ ದೇವರು ಮುಂತಾದ ಹೆಸರುಗಳನ್ನು ಹೊಂದಿ, ಕುಯುಕ್ತಿಯಿಂದಲೂ ಬಲಾತ್ಕಾರದಿಂದಲೂ ಮನುಷ್ಯರನ್ನು ನಡಿಸಲಿಕ್ಕೆ ನೋಡುತ್ತಾನೆ. ವಿಶೇಷವಾಗಿ ಆರಂಭದಲ್ಲಿ ಮಾಡಿದ ಹಾಗೆಯೇ ಈಗಲೂ ಪ್ರತಿ ಮನುಷ್ಯನನ್ನು ಶೋಧನೆ ಮಾಡಿ, ಮಿಥ್ಯಾಮಿತಕ್ಕೆ ವೈದು, ಕೆಟ್ಟ ಆಲೋಚನೆಗಳನ್ನು ಹುಟ್ಟಿಸಿ, ದೇವರ ಮಾತನ್ನು ಅವರ ಹೃದಯದಿಂದ ಸುಲು ಕೊಂಡು, ಅಪಧೈರ್ಯಕ್ಕೂ ಅವಿಶ್ವಾಸಕ್ಕೂ ಅವಿಧೇಯತ್ವಕ್ಕೂ ಹಾಕಿ, ತನ್ನ ವಶ ಮಾಡಿ, ಮನುಷ್ಯನ ಹೃದಯದಲ್ಲಿ ಸಹಾ ಶೇರಿ ವಾಸಿಸಲಿಕ್ಕೆ ಮನಸ್ಸೂ ಅಧಿಕಾರವೂ ಉಳ್ಳವನಾಗಿ ಪೂರ್ಣವಾಗಿ ಕೆಡಿಸಲಿಕ್ಕೆ ನೋಡುತ್ತಾನೆ. ಅವನು ವಿಶೇಷವಾಗಿ ದೇವಭಕ್ತಿಯುಳ್ಳವರನ್ನು ಶೋಧಿಸಿ, ಅವರಿಗೆ ನಾನಾ ತರದ ಉಪದ್ರವ ಕೊಟ್ಟು, ಅವರ ಆಸ್ತಿಯನ್ನೂ ಜೀವವನ್ನೂ ಹಾಳು ಮಾಡಲಿಕ್ಕೆ ನೋಡುತ್ತಾನೆ. ಈ ಪ್ರಕಾರ ಬಹಳ ಐಶ್ವರ್ಯವೂ ಭಕ್ತಿಯೂ ಉಳ್ಳ ಮನುಷ್ಯನಾದ ಯೋಬನಿಗೆ ಮಾಡಿದನು. ಅವನ ಪಶುಗಳನ್ನು ಕೊಂಡು ಹೋಗಲಿಕ್ಕಾಗಿ ಲೂಟಿಗಾರರನ್ನು ಎಬ್ಬಿಸಿದನು; ಅವನ ಕುರಿಗಳನ್ನು ಕೊಲ್ಲಲಿಕ್ಕಾಗಿ ಮಿಂಚು ಹೊಡೆಯ ಮಾಡಿದನು; ಅವನ ಚಾಕ್ರಿಯವರನ್ನು ಕೊಲ್ಲಲಿಕ್ಕಾಗಿ ಪರ ದೇಶದ ವೈರಿಗಳನ್ನು ಬರ ಮಾಡಿದನು; ಅವನ ಮೂರು ಮಗಳಂದಿರನ್ನೂ ಏಳು ಮಗಂದಿರನ್ನೂ ಕೊಲ್ಲ

ಲಿಕ್ಕಾಗಿ ಬಿರುಷಾಳಿಯನ್ನು ಎಬ್ಬಿಸಿ ಮನೆ ಬೀಳ ಮಾಡಿದನು. ಯೋಬನು ಇದೆಲ್ಲಾದರಲ್ಲಿ ದೇವರಿಗೆ ವಿರೋಧವಾಗಿ ಪಾಪ ಮಾಡದದರಿಂದ ಅವನನ್ನು ಶರೀರದಲ್ಲಿ ಹೊಡದು ಕೆಟ್ಟ ಹುಣ್ಣುಗಳನ್ನು ಅಥವ ಕುಷ್ಠ ರೋಗವನ್ನು ಹುಟ್ಟಿಸಿ, ಬಹಳ ಉಪದ್ರ ಕೊಟ್ಟನು. ಮುಂಚೆ ದೇವರ ಸಮುಖದಲ್ಲಿ ಶೇರಲಿಕ್ಕೆ ಅಪ್ಪಣೆ ಹೊಂದಿದವನಾಗಿ ದೇವರ ಭಕ್ತರನ್ನು ಹೆಚ್ಚಾಗಿ ದೂಷಿಸಿದನು; ಈಗ ಅವನು ಪರಲೋಕದಿಂದ ಹೊರಗೆ ಹಾಕಲ್ಪಟ್ಟವನಾಗಿ ತನಗೆ ಈ ಲೋಕದಲ್ಲಿ ಸಮಯವು ಸ್ವಲ್ಪ ಮಾತ್ರವೇ ಇನ್ನು ಉಳಿಯಿತೆಂದು ತಿಳಿದು ದೊಡ್ಡ ಶಿಟ್ಟಿನಿಂದ ಇರುತ್ತಾನೆ.

ಚಂದ್ರಭ: ಇದು ಎಲ್ಲಾ ನಿಮ್ಮ ಶಾಸ್ತ್ರದ ಪ್ರಕಾರ ಆಗಿರುವದು; ಆದರೆ ಇದಕ್ಕೂ ನಮ್ಮ ಭೂತಗಳ ಸಂಗತಿಗಳಿಗೂ ಏನಾದರೂ ಒಂದು ಸಮ್ಮಂಧ ಉಂಟೆಂದು ಕಾಣುವದಿಲ್ಲ.

ಪಾದ್ರೆ: ದಯಮಾಡಿ ಇನ್ನು ಸ್ವಲ್ಪ ಹೆಚ್ಚು ಕೇಳಿದರೆ ಆದೀತು, ಆಗ ಯಾಕೆ ಇದನ್ನು ಹೇಳಿದೆನೆಂಬದು ನಿಮಗೆ ತಿಳಿಯುವದು. ಸೈತಾನನು ತಾನು ಮಾಡುವ ಹಾಗೆ ತನ್ನ ದೂತರು ಸಹ ಮಾಡಬೇಕೆಂದು ಅವರನ್ನು ಪ್ರೇರೇಪಿಸುತ್ತಾನೆ. ಅವರು ವಿಶ್ರಾಂತಿ ಹೊಂದಲಿಕ್ಕೆ ಹುಡುಕಿ ತಮಗೆ ಶಿಕ್ಕದೆ ಇರುವದರಿಂದ ನಡುಗಿ, ಬರುವ ನ್ಯಾಯತೀರ್ವಿಕೆಯನ್ನು ಕಾದು ಕೊಂಡಿರುತ್ತಾರೆ. ಇದು ಪೂರ್ಣವಾಗುವ ಪರ್ಯಂತರ ತಮ್ಮ ಕೆಟ್ಟ ಸ್ಥಿತಿಗಳಲ್ಲಿಯೂ ನಡತೆಗಳಲ್ಲಿಯೂ ತಮ್ಮ ಮುಖ್ಯಸ್ಥನ ಇಚ್ಛೆಯೂ ಮನಸ್ಸೂ ಇರುವ ಪ್ರಕಾರ ಮಾಡಿ, ಅವನ ಸಂಗಡ ಮನುಷ್ಯ ಜಾತಿಯನ್ನು ಕೆಡಿಸಲಿಕ್ಕೆ ಇಚ್ಛೈಸುತ್ತಾರೆ. ಪರಲೋಕದಲ್ಲಿ ತಮಗೆ ಸ್ಥಳ ಶಿಕ್ಕದ್ದರಿಂದ ಆಕಾಶದಲ್ಲಿದ್ದು, ಮನುಷ್ಯರನ್ನು ಉಪದ್ರವ ಪಡಿಸಿ, ನೋವುಗಳನ್ನೂ ರೋಗಗಳನ್ನೂ ಹುಟ್ಟಿಸಿ ನಾನಾ ತರದ ತಂತ್ರಗಳಿಂದ ಶೋಧಿಸ ಪ್ರಯತ್ನ ಮಾಡಿ, ಅವರ ನರಗಳ ಬಲವನ್ನೂ ಕ್ರಮವನ್ನೂ ಕೀಳ್ಮೇಲು ಮಾಡಿ ಬಿಟ್ಟು, ಹೀನ ಮಾಡಿ, ತಮ್ಮ ಕೈವಶ ಮಾಡಿ ಕೊಳ್ಳುತ್ತಾರೆ. ಹಾಗೆ ಮನುಷ್ಯನ ಪ್ರಾಣವೂ ಆತ್ಮವೂ ಶರೀರಭಾವದ ಕ್ರಮವನ್ನು ನಡಿಸದೆ, ಅದು ದೆವ್ವಗಳ ವಶದಲ್ಲಿ ಇದ್ದು ಅವುಗಳ ಚಿತ್ತದ ಪ್ರ

ಕಾರ ಕೈ, ಕಾಲು, ಬಾಯಿ, ಕಣ್ಣು ಮುಂತಾದ ಅವಯವಗಳನ್ನು ನಡಿಸಿ, ಹೀಗೆ ಬಹಳ ಭಯಂಕರವೂ ನಾಚಿಕೆಯೂ ಕರೆಕರೆಯೂ ಹುಟ್ಟಿಸುತ್ತಾರೆ. ಈ ಪ್ರಕಾರ ತಕ್ಕ ಸಮಯದ ಮುಂಚೆ ಮನುಷ್ಯನ ಜೀವವು ಹೋಗುವ ಹಾಗೆ ಆಗುತ್ತದೆ. ದೆವ್ವ ಹಿಡಿದವರು ಮಾತಾಡಲಿಕ್ಕೂ ಕೇಳಲಿಕ್ಕೂ ನೋಡಲಿಕ್ಕೂ ನಡಿಯಲಿಕ್ಕೂ ಕೂಡದವರಾಗಿ, ದೆವ್ವಗಳ ವಶದಲ್ಲಿ ಇರುವದುಂಟು; ಇಲ್ಲವೆ ದೆವ್ವಗಳು ಮನುಷ್ಯನನ್ನು ದೇವರ ಚಿತ್ತಕ್ಕೂ ಸ್ವಂತ ಮನಸ್ಸಿಗೂ ವಿರೋಧವಾದ ಆಗದ ಕ್ರಿಯೆಗಳನ್ನು ಮಾಡಲಿಕ್ಕೆ ಪ್ರೇರೇಪಿಸುತ್ತಾರೆ. ಈ ಪ್ರಕಾರ ಒಂದೊಂದು ಸಾರಿ ಉಪದ್ರ ಪಡ ಕೊಳ್ಳುವವನೂ ಅವನ ಹತ್ತರ ಇರುವವರೆಲ್ಲರೂ ಸೈತಾನನ ದೂತರ ಇಲ್ಲವೆ ನೀವು ಹೇಳುವ ಪ್ರಕಾರ ಭೂತಗಳ ಬಲದಿಂದ ಆದ ಸಂಗತಿಯನ್ನು ಸಂಶಯವಿಲ್ಲದೆ ತಿಳಿದು ನರಳುತ್ತಾರೆ. ಅದಕ್ಕೆ ಒಪ್ಪದೆ ವಿರೋಧವಾಗಿ ಮಾಡ ಬಹುದಾಗಿದ್ದರೂ, ತಪ್ಪಿಸಿ ಕೊಳ್ಳಲಿಕ್ಕೆ ಕೂಡದೆ ಮನುಷ್ಯರು ಸೈತಾನನ ದೂತರ ಸಂಗಡ ಒಡ್ದಾಡುತ್ತಾರೆ. ಒಂದೊಂದು ಸಾರಿ ಇಂಥಾ ಉಪದ್ರವಾಗುವಾಗ, ಬರೇ ಶರೀರ ಸಂಕಟ ಮಾತ್ರವೆಂದು ಕಾಣುತ್ತದೆ; ಯಾಕಂದರೆ ದೆವ್ವಗಳು ತಮ್ಮ ಕೆಲಸವನ್ನು ನೆಟ್ಟಗೆ ನಡಿಸದೆ ಬೇಗ ತಿಳಿಯದಂಥಾ ತಂತ್ರದಿಂದ ಅದನ್ನು ಸೊಟ್ಟಾಗಿ ವರ್ತಿಸಿ, ಒಬ್ಬ ಮನುಷ್ಯನನ್ನು ಕೆಡಿಸುತ್ತವೆ. ಹಾಗೆ ದೇವರ ವಾಕ್ಯದ ಪ್ರಕಾರ ಅನೇಕ ಕಷ್ಟ ಸಂಕಟ ರೋಗಗಳು, ವಿಶೇಷವಾಗಿ ಅಪಸ್ಮಾರ, ವಾತ ಮುಂತಾದ ರೋಗಗಳು ಸೈತಾನನ ಮತ್ತು ಅವನ ದೂತರ ಉಪದ್ರವೆಂದು ಹೇಳಬೇಕಾಗಿದ್ದರೂ, ಸಾಧಾರಣವಾಗಿ ಕಷ್ಟ ರೋಗಗಳೆಲ್ಲವು ಪಾಪದಿಂದ ಉಂಟಾಯಿತೆಂದು ತಿಳಿದು ಕೊಳ್ಳ ಬೇಕು. ಮನುಷ್ಯರು ಪಾಪಿಷ್ಠರಾಗಿರುವದರಿಂದಲೇ ಅವರಿಗೆ ರೋಗಗಳು ಬರುವದಕ್ಕೆ ಕಾರಣವೂ ಮಾರ್ಗವೂ ಆಯಿತೆಂಬ ಮೂಲಕ್ರಮವೂ ನಿರ್ಣಯವೂ ಸಂಶಯ ವಿಲ್ಲದೆ ಆಗಿರುತ್ತದೆ. ಯಾಕಂದರೆ ಮನುಷ್ಯರ ಸ್ವಭಾವ ಕೆಟ್ಟದ್ದಾಗಿರುವದರಿಂದ ಮಾತ್ರ ಈ ಕಾಣದಂಥ ಅಂಧಕಾರದ ಬಲದ ಆತ್ಮಗಳು ಮಾರ್ಗವೂ ಪ್ರಮೇಯವೂ ಹೊಂದಿ, ಪೀಡಿಸಲಿಕ್ಕೆ ಕಾರಣವಾಯಿತು. ಅದಕ್ಕಾಗಿ ಇಂಥಾ ನಮ್ಮ ಶತ್ರುಗಳಾಗಿರುವ ಎದುರಾಳಿಗಳನ್ನು ಜೈಸಲಿಕ್ಕೆ ಮ

ನಸ್ಸುಳ್ಳವನು ಮುಂಚಿತವಾಗಿ ತನ್ನ ಸ್ವಂತ ಹೆಚ್ಚಳ, ಗರ್ವ, ಉದಾಸೀನ, ಕಾಮ, ಸೋಮಾರಿತನ ಮುಂತಾದ ದುರ್ಗುಣಗಳಿಗೆ ವಿರೋಧವಾಗಿ ನಿಂತು, ಅವುಗಳಿಂದ ಬಿಡುಗಡೆ ಹೊಂದಿ ಶುದ್ಧವಾಗಲಿಕ್ಕೆ ನೋಡಬೇಕು. ಆ ಹಳೇ ಸರ್ಪನ ತಲೆಯು ಮನುಷ್ಯನ ಹೃದಯದಲ್ಲಿಯೇ ಇರುತ್ತದೆ. ಹೊರಗೆ ಅದರ ಬಾಲ ಮಾತ್ರ ಅಲ್ಲಾಡುತ್ತದೆ. ಆದರೂ ಹಾವಿನ ತಲೆಯನ್ನು ತುಳಿದು ಅದನ್ನು ಕೊಂದ ಕೂಡಲೇ ಬಾಲ ಅಲ್ಲಾಡುವದು ಸಹ ತನ್ನಷ್ಟಕ್ಕೆ ಹೋಗುವದು. ಹಾಗೆಯೇ ಪಾಪದ ತಲೆಯಾಗಿರುವ ಎಲ್ಲಾ ಕೆಟ್ಟ ಇಚ್ಛೆ ಆಶೆಗಳನ್ನು ನಮ್ಮ ಮನಸ್ಸಿನಲ್ಲಿಯೇ ತುಳಿದು ಹಾಕ ಬೇಕು; ಹೆಚ್ಚಾದದ್ದು ತನ್ನಷ್ಟಕ್ಕೆ ನಿಲ್ಲುತ್ತದೆ. ತನಗೆ ಪಾಪ ವಿಲ್ಲವೆಂದು ಯಾರಾದರೂ ಹೇಳ ಬಹುದೋ? ಇಗೋ ಪರಲೋಕಗಳು ಅವನ ಕಣ್ಣುಗಳ ಮುಂದೆ ನಿರ್ಮಲವಲ್ಲ! ಮನುಷ್ಯನು ಎಷ್ಟು ಕೆಟ್ಟು ಹೋದವನಾಗಿಯೂ ಅಸಹ್ಯವಾದವನಾಗಿಯೂ ಇದ್ದಾನೆ! ಜ್ಞಾನಿಗಳು ಅದನ್ನು ತಿಳಿಸಿದರು. ಹಿರಿಯರ ಕಾಲದಿಂದ ಅದು ಮರೆಯಾಗಿರಲಿಲ್ಲ; ದುಷ್ಟನು ತನ್ನ ದಿವಸಗಳೆಲ್ಲೆಲ್ಲಾ ವೇಧನೆ ಪಡುತ್ತಾನೆ; ಭಯಂಕರವಾದ ಶಬ್ದ ಅವನ ಕಿವಿಗಳಲ್ಲಿ ಅದೆ; ಸುಖದಲ್ಲಿ ಹಾಳು ಮಾಡುವವನು ಅವನ ಮೇಲೆ ಬರುತ್ತಾನೆ. ಕತ್ತಲೆಯೊಳಗೆ ತಿರುಗುತ್ತಾನೆಂದು ಅವನು ನಂಬುವದಿಲ್ಲ; ಇಕ್ಕಟ್ಟೂ ಸಂಕಟವೂ ಅವನನ್ನು ಹೆದರಿಸಿ ಅವನ ಮೇಲೆ ಬೀಳುತ್ತವೆ. ಯಾಕಂದರೆ ದೇವರಿಗೆ ವಿರೋಧವಾಗಿ ಕೈ ಚಾಚಿ, ಸರ್ವಶಕ್ತನಿಗೆ ವಿರೋಧವಾಗಿ ಬಲಗೊಂಡಿದ್ದಾನೆ, ಆದರೆ ನೀನು ನಿನ್ನ ದೇವರಾದ ಯೆಹೋವನ ಮಾತನ್ನು ಕೇಳಿ ಅವನ ಆಜ್ಞೆಗಳಿಗೆ ಕಿವಿಕೊಟ್ಟು ಕೈಕೊಂಡರೆ, ಅವನು ನಿನ್ನ ಮೇಲೆ ವ್ಯಾಧಿಗಳನ್ನು ಇಡುವದಿಲ್ಲ; ಯಾಕಂದರೆ ನಾನೇ ನಿನ್ನನ್ನು ಸ್ವಸ್ಥ ಮಾಡುವೆನು ಯೆಹೋವನೆಂದನ್ನುತ್ತಾನೆ. ಪಾಪದ ಸಂಬಳವು ಮರಣವು; ಆದರೆ ದೇವರ ಕೃಪೆಯ ವರವು ನಮ್ಮ ಕರ್ತನಾದ ಯೇಸುವಿನಲ್ಲಿ ಇರುವ ನಿತ್ಯಜೀವವು.

ರಾಮಶೆ: ನೀವು ಸಾಯುವದಿಲ್ಲವೊ?

ಪಾದ್ರೆ: ಸಾಯುವದಿಲ್ಲವೆಂದು ಹೇಳಿದ್ದು ಇಲ್ಲ, ಆದರೆ ನೋ

ಡಿರಿ, ಸಾಯುವದರಲ್ಲಿ ತರ ಉಂಟು. ಒಬ್ಬನು ಸಂಕಟದಲ್ಲಿ ತಾನು ಸತ್ತು ನರಕಕ್ಕೆ ಬೀಳುವೆನೆಂದು ಬಹಳ ಭಯ ಪಟ್ಟು ಸಾಯುತ್ತಾನೆ. ಮತ್ತೊಬ್ಬನು ಸ್ವರ್ಗಕ್ಕೆ ಹೋಗಿ ನಿತ್ಯಜೀವವನ್ನು ಹೊಂದುವೆನೆಂದು ಸಂತೋಷದಿಂದ ಸಾಯುತ್ತಾನಲ್ಲವೋ?

ಪುಟ್ಟಣ್ಣಾಚಾ: ಅದು ಸತ್ಯ.

ಪಾಟಾಳಿ ಪೂ: ಹಾಗಾದರೆ ಬಡವರು ವಿಶೇಷವಾಗಿ ಪಾಪಿಷ್ಠರೆಂದು ಕಾಣುತ್ತದೆ; ಯಾಕಂದರೆ ಅವರಿಗೆ ಹೆಚ್ಚು ಕಷ್ಟವೂ ಉಪದ್ರವೂ ಉಂಟು.

ಪಾದ್ರಿ: ಬಹಳ ಸಾರಿ ವಿಶೇಷವಾದ ಪಾಪಗಳಿಗಾಗಿ ವಿಶೇಷವಾದ ಸಂಕಟಗಳು ಬಂದವು; ಹ್ಯಾಗಂದರೆ ಅಮಲು, ಜಾರತ್ವ, ಇಂಥವುಗಳನ್ನು ಮಾಡುವವರಿಗೆ ವಿಶೇಷವಾಗಿ ಊನತೆ, ವಾತ, ಕುಷ್ಠ ಮುಂತಾದ ಕೆಟ್ಟ ರೋಗಗಳು ಬರುತ್ತವೆ. ಹಾಗೆ ಈ ಗಾದೆಯು ಹೇಳುತ್ತದೆ: "ಶಾಪ ಕೊಡುವ ಪಾಪಕ್ಕೆ ಹೆದರು; ಯಾಕಂದರೆ ದೋಷ ಮಾಡುವವನಿಗೆ ರೋಷ ಬಹಳ!" ಆದರೆ ಇಂಥಾ ರೋಗಗಳಲ್ಲಿದ್ದವರೆಲ್ಲರು ಹ್ಯಾಗಾದರೂ ಮೇಲೆ ಹೇಳಿದ ಪಾಪಗಳಲ್ಲಿ ಬಿದ್ದಿರ ಬೇಕೆಂದು ಯಾವಾಗಲೂ ನೆನಸ ಕೂಡದು; ಯಾಕಂದರೆ ಇಂಥಾ ರೋಗಗಳಿಂದ ದೇವರು ಅನೇಕ ಸಾರಿ ಒಬ್ಬನನ್ನು ಪಾಪ ಅನ್ಯಾಯಗಳಿಂದ ಕಾಪಾಡಿ, ತನ್ನ ಹತ್ತರ ವೈಯಲಿಕ್ಕೆ ನೋಡುತ್ತಾನೆ; ಇಲ್ಲವೇ ತನ್ನ ಮಹಿಮೆಯನ್ನು ಮತ್ತೂ ವಿಶೇಷವಾಗಿ ಪ್ರಕಟ ಮಾಡಲಿಕ್ಕೆ ಮನಸ್ಸುಳ್ಳವನಾಗಿರುವದರಿಂದ, ಈ ಪ್ರಕಾರ ಮಾಡುತ್ತಾನೆ. ಈ ತರದಲ್ಲಿ ದೇವರಿಂದ ಗದರಿಸಲ್ಪಟ್ಟ ಮನುಷ್ಯನು ಭಾಗ್ಯವಂತನು; ಸರ್ವಶಕ್ತನ ಶಿಕ್ಷೆಯನ್ನು ಅಲಕ್ಷೆ ಮಾಡ ಬೇಡ! ಯಾಕಂದರೆ ಅವನು ನೋಯಿಸುತ್ತಾನೆ, ಕಟ್ಟುತ್ತಾನೆ, ಘಾಯ ಮಾಡುತ್ತಾನೆ, ಅವನ ಕೈಗಳು ಸ್ವಸ್ಥ ಮಾಡುತ್ತವೆ; ಆರು ಇಕ್ಕಟ್ಟುಗಳಿಂದ ನಿನ್ನನ್ನು ತಪ್ಪಿಸುವನು, ಏಳರಲ್ಲಿ ಕೇಡು ನಿನ್ನನ್ನು ಮುಟ್ಟದು. ಕರ್ತನ ಶಿಕ್ಷೆಯನ್ನು ಅಲ್ಪವಾಗಿ ಎಣಿಸದೆ ಆಯಾಸ ಪಡದೆ ಇರು; ಯಾಕಂದರೆ ಆತನು ತಾನು ಪ್ರೀತಿ ಮಾಡುವವನನ್ನು ಸಹ ತಕ್ಕ ಕಾಲದಲ್ಲಿ ಶಿಕ್ಷಿಸುತ್ತಾನೆಂದು ದೇವರ ವಾಕ್ಯವು ಹೇಳುತ್ತದೆ.

ಕೃಷ್ಣರಾ: ದೇವರಿಗೆ ವಿರೋಧವಾಗಿ ಯಾವ ಮನುಷ್ಯನಿಗೆ ನಿಲ್ಲ ಕೂಡುವದು?

ಪಾದ್ರಿ: ಕಾನಾನ್ ದೇಶದಲ್ಲಿರುವ ಇಸ್ರಯೇಲ್ ಎಂಬ ಜನರ ವಿಷಯದಲ್ಲಿ ನಿಮಗೆ ಮುಂಚೆ ಸ್ವಲ್ಪ ಹೇಳಿದೆನು. ಅವರ ಚರಿತ್ರೆಯು ನಾನು ಹೇಳಿದ್ದಕ್ಕೆ ವಿಶೇಷವಾದ ದೃಷ್ಟಾಂತವಾಗಿರುತ್ತದೆ; ದೇವರ ಚಿತ್ತದ ಪ್ರಕಾರ ನಡದು ಕೊಳ್ಳುವವರಾಗಿದ್ದರೆ, ಬೇರೆ ಜನಾಂಗಗಳಿಗೆ ಆಗುವ ರೋಗಗಳು ತಮಗೆ ಬಾರದೆಂಬ ದೇವರ ವಾಗ್ದತ್ತವು ಅವರಿಗಿತ್ತು; ಅದೇ ಪ್ರಕಾರ ಅವರು ದೇವರ ಅಪ್ಪಣೆಗಳನ್ನು ಮೀರಿದರೆ ನಾನಾ ತರದ ರೋಗಗಳಲ್ಲಿ ಬೀಳುವರೆಂದು ದೇವರು ಅವರನ್ನು ಭಯಪಡಿಸಿ ಶಿಕ್ಷೆಯಾಗಿ ಹೇಳಿದ್ದೇನಂದರೆ: ನಿನ್ನ ಮೇಲೆ ತಲ್ಲಣವನ್ನೂ, ಕಣ್ಣುಗಳನ್ನು ಕ್ಷೀಣಿಸುವಂಥ ಪ್ರಾಣವನ್ನೂ, ಕುಗ್ಗಿ ಹೋಗ ಮಾಡುವಂಥ ಕ್ಷಯರೋಗವನ್ನೂ, ವ್ಯಾಧಿಯನ್ನೂ, ಛಳಿಜ್ವರವನ್ನೂ ಕಳುಹಿಸುವೆನು. ಯೆಹೋವನು ಉರಿವಾತದಿಂದಲೂ ಮಹಾ ತಾಪದಿಂದಲೂ ಕಾಡಿಗೆಯಿಂದಲೂ ಬಾಣತೆ ರೋಗದಿಂದಲೂ ನಿನ್ನನ್ನು ಹೊಡೆಯುವನು. ನಿನ್ನನ್ನು ಹುಣ್ಣುಗಳಿಂದಲೂ ಮೂಲವ್ಯಾಧಿಯಿಂದಲೂ ಗಜ್ಜಿಯಿಂದಲೂ ಇಸಬಿನಿಂದಲೂ ನೀನು ವಾಶಿಯಾಗ ಕೂಡದ ಹಾಗೆ ಹೊಡೆಯುವನು. ಯೆಹೋವನು ನಿನ್ನನ್ನು ಹುಚ್ಚುತನದಿಂದಲೂ ಕುರುಡುತನದಿಂದಲೂ ವಿಸ್ಮಯದಿಂದಲೂ ಹೊಡೆಯುವನು. ನೀನು ನಿನ್ನ ದೇವರಾದ ಯೆಹೋವನ ಮಾತನ್ನು ಕೇಳದೆ ಅವನ ಆಜ್ಞೆಗಳನ್ನೂ ನೇಮಗಳನ್ನೂ ಕಾಪಾಡದೆ ಇದ್ದದರಿಂದ, ಈ ಶಾಪಗಳೆಲ್ಲಾ ನಿನ್ನ ಮೇಲೆ ಬಂದು ನಿನ್ನನ್ನು ನಾಶನ ಮಾಡುವ ವರೆಗೂ ನಿನ್ನನ್ನ ಹಿಂದಟ್ಟಿ ನಿನಗೆ ಪ್ರಾಪ್ತವಾಗುವವು. ಅವು ನಿನ್ನ ಮೇಲೆಯೂ ನಿನ್ನ ಬೀಜದ ಮೇಲೆಯೂ ನಿತ್ಯವಾಗಿ ಗುರುತೂ ಲಕ್ಷಣವೂ ಆಗಿರುವವು. ಅವರ ಪಾಪಕ್ಕಾಗಿ ಈ ಪ್ರಕಾರವಾಯಿತು. ಇದು ದೇವರ ನೇಮು; ಇದು ಇನ್ನೂ ಉಂಟು. ವಿಶೇಷವಾದ ಪಾಪಗಳಿಗೆ ವಿಶೇಷವಾದ ರೋಗಗಳು ಶಿಕ್ಷೆಯಾಗಿ ಬರುತ್ತವೆ ಎಂಬ ದೃಷ್ಟಾಂತ ದೇವರೇ ಕೊಟ್ಟು, ಮಿರಿಯಂ, ಗೆಹಜಿ, ಉಜ್ಜಿಯ ಎಂಬವರಿಗೆ ಅವರ ದ್ರೋಹಕ್ಕಾಗಿ ಕುಷ್ಠರೋಗ ಬರ

ಮಾಡಿದನು. ದೇವರ ಕೈಯಿಂದಲೇ ಅವನ ಚಿತ್ತದ ಪ್ರಕಾರ ನಮ್ಮ ಪಾಪಗಳಿಗೂ ಶಿಕ್ಷೆಗಳು ಆಗುತ್ತವೆ ಎಂಬದನ್ನು ನಂಬುವಾ. ಆದರೆ ಭೂತಗಳೂ ಪ್ರೇತಗಳೂ ಇಂಥವುಗಳನ್ನು ಮಾಡವು; ವಿಶೇಷವಾಗಿ ಪ್ರೇತಗಳು ತಮ್ಮ ಸಂಸಾರದ ಬಳಿಗೆ ಬಂದು ಉಪದ್ರ ಕೊಡ ಬಹುದೆಂಬದು ನಾವು ನೆನಸಲಿಕ್ಕೆ ತಕ್ಕ ಆಧಾರವೂ ಕಾರಣವೂ ನಮಗೆ ಇಷ್ಟಾದರೂ ದೇವರ ವಾಕ್ಯದಲ್ಲಿ ದೊರಕುವದಿಲ್ಲ. ಅವರು ಪಾತಾಳದಲ್ಲಿ ಶೆರೆ ಹಿಡಿದ ಆತ್ಮಗಳಾಗಿದ್ದು ಅಲ್ಲಿಂದ ದಾಟಿ ಬಾರದ ಹಾಗೆ ಒಂದು ದೊಡ್ಡ ಡೊಂಗರ ಉಂಟೆಂದು ದೇವರ ವಾಕ್ಯವಾದ ಸತ್ಯವೇದವು ನಮಗೆ ಹೇಳುತ್ತದೆ.

ಕೃಷ್ಣರಾ: ಹಾಗಾದರೆ ನಿಮ್ಮ ಲೆಖ್ಖದಲ್ಲಿ ಪ್ರೇತಗಳು ಇಲ್ಲವೆಂದು ಕಾಣುತ್ತದೆ.

ಪಾದ್ರೆ: ಸತ್ತವರ ಆತ್ಮವೆಂಬ ಪ್ರೇತವಿಲ್ಲವೆಂದಲ್ಲ, ಆದರೆ ಈ ಲೋಕದಲ್ಲಿ ಕಾರ್ಯ ನಡಿಸ ಬಹುದೆಂಬ ಸೈತಾನನ ದೂತರಾಗಿರುವ ದೆವ್ವಗಳ ವಿಷಯ ಹೊರ್ತಾಗಿ, ಸತ್ತವರ ಆತ್ಮಗಳ ವಿಷಯ ಸ್ಪಷ್ಟವಾಗಿ ದೇವರ ವಾಕ್ಯವು ಹೇಳುವದೇ ಇಲ್ಲವೆಂದು ಇನ್ನೊಂದು ಸಾರಿ ಹೇಳುತ್ತೇನೆ. ಸೈತಾನನ ದೂತರಿಗೆ ನಾವು ದೆವ್ವಗಳೆಂದು ಹೇಳುತ್ತೇವೆ, ನೀವು ಭೂತಗಳೆಂದು ಹೇಳುತ್ತೀರಿ; ಅರ್ಥ ಒಂದೇ ಆಗಿರುವದು. ಇವುಗಳು ಉಪದ್ರ ಕೊಡ ಬಹುದು, ಆದರೆ ಪ್ರೇತ ಉಪದ್ರ ಕೊಡುತ್ತದೆಂದು ಕಾಣುವದಿಲ್ಲ. ಅದಲ್ಲದೆ ಮನುಷ್ಯನ ಆತ್ಮವು ಶರೀರದ ಜೀವ ಮುಗಿದ ಮೇಲೆ ಶರೀರವಿಲ್ಲದ ಆಕಾರವಾಗಿ ಈ ಲೋಕದಲ್ಲಿ ಉಳಿದು ತಿರುಗಾಡುವಂಥಾದ್ದು ಮನುಷ್ಯನು ಈ ಲೋಕದಲ್ಲಿ ಬದುಕಲಿಕ್ಕಾಗಿ ನಿರ್ಣಯಿಸಿದ ಜೀವದ ಸಮುದಾಚಾರಕ್ಕೆ ಸಮ ಬೀಳುವ ಹಾಗೆ ಕಾಣುವದಿಲ್ಲ; ಯಾಕಂದರೆ ಮನುಷ್ಯರಿಗೆ ಆಯುಷ್ಯದ ದಿನಗಳು ಪೂರ್ಣವಾಗುವ ಸಮಯದಲ್ಲಿ ಸತ್ತು ಹೋಗೋಣವೂ ಅದರ ಮೇಲೆ ನ್ಯಾಯತೀರ್ವಿಕೆಯೂ ನೇಮಕ ಮಾಡಿಯದೆ.

ಚಂದ್ರಭ: ಹಾಗಾದರೆ ಪ್ರೇತಗಳು ಈ ಲೋಕದಲ್ಲಿ ಕಾಣ ಕೂಡದು.

ಪಾದ್ರಿ: ಸತ್ತವರ ಆತ್ಮಗಳು ಈ ಲೋಕದಲ್ಲಿ ಹ್ಯಾಗಾದರೂ ಕಾಣ ಕೂಡದೆಂಬುವದಿಲ್ಲ; ಆದರೆ ಕಾಣುವದು ಹ್ಯಾಗಾದರೂ ಬಹಳ ಅಪರೂಪವಾಗಿರುತ್ತದೆ. ಇಲ್ಲಿಯ ಜನರು ಹೇಳುವ ತರದಲ್ಲಿ ಪ್ರೇತ ಬಂದು ಉಪದ್ರ ಕೊಡ ಬಹುದೆಂದು ನಾನು ನಂಬೆನು. ಒಂದು ವೇಳೆ ಕೆಲವು ದೆವ್ವಗಳು ಹೆಚ್ಚು ಯುಕ್ತಿಯುಳ್ಳವುಗಳಾಗಿದ್ದು ತಮ್ಮನ್ನು ಸತ್ತವರ ಆತ್ಮಗಳೆಂದು ಮೋಸದಲ್ಲಿ ತೋರಿಸಿ ತಮ್ಮ ಕತ್ತಲೆಯ ಕ್ರಿಯೆಗಳನ್ನು ಈ ಪ್ರಕಾರ ಹೆಚ್ಚು ಸುಲಭವಾಗಿ ನಡಿಸ ಬಹುದೆಂದು ನೆನಸಿ ಒಂದೊಂದು ಸಾರಿ ಹಾಗೆ ಆಗುವದುಂಟು; ಮತ್ತು ಪರಿಶುದ್ಧಾತ್ಮಕ್ಕೆ ವಿರೋಧವಾಗಿ ಪಾಪ ಮಾಡಿ ಅದರ ಪರಿಹಾರ ಹೊಂದದ ಆತ್ಮಗಳು ಪೂರ್ಣ ನಾಶನಕ್ಕೆ ತಕ್ಕವರಾಗಿರುವದರಿಂದ ಸೈತಾನನ ಉಪಾಯದಿಂದಲೂ ಪ್ರೇರೇಪಣೆಯಿಂದಲೂ ಈ ಲೋಕದಲ್ಲಿ ದೆವ್ವಗಳ ಕ್ರಿಯೆಗಳನ್ನು ಒಂದು ವೇಳೆ ನಡಿಸ್ಯಾವು; ಆದರೆ ಇದು ಅವರು ಮುಂಚೆ ಮನುಷ್ಯರಾಗಿದ್ದದರಿಂದ ಈ ರೀತಿ ಆಗುತ್ತದೆಂದು ಅಲ್ಲ, ತಾವು ಪೂರ್ಣ ದೆವ್ವಭಾವದವರಾಗಿದ್ದದರಿಂದ ಹೀಗೆ ಆಯಿತೆಂದು ನೆನಸ ಬೇಕು. ಮನುಷ್ಯನು ತನ್ನ ಚಿತ್ತವೂ ಒಪ್ಪಿಗೆಯೂ ಇಲ್ಲದೆ ಉಪದ್ರ ಪಡ ಕೊಂಡು ಒಂದು ಸಮಯದಲ್ಲಿ ಅವುಗಳ ವಶಕ್ಕೆ ಬೀಳುವದು ಸಹಾ ಇರ ಬಹುದು; ಮನುಷ್ಯರೆಲ್ಲರೂ ಪಾಪಿಷ್ಠರಾಗಿದ್ದದರಿಂದ ದೆವ್ವಗಳಿಗೆ ಅವರ ಮೇಲೆ ಅಷ್ಟು ಸಾಮರ್ಥ್ಯ ಶಿಕ್ಕಿತು; ಆದರೆ ಸೈತಾನನು ದೇವಭಕ್ತರಿಗೆ ಉಪದ್ರ ಕೊಡ ನೋಡಿದರೂ ಅವನು ದೇವರ ಅಪ್ಪಣೆ ಇಲ್ಲದೆ ಅವರನ್ನು ನೋಯಿಸ ಕೂಡದು; ಮತ್ತು ಅವರ ಮನಸ್ಸಿಗೆ ವಿರೋಧವಾಗಿ ಅವರ ಪ್ರಾಣ ಆತ್ಮಗಳನ್ನು ನಾಶನ ಮಾಡ ಕೂಡದೆಂಬುವದು ನಿಶ್ಚಯವಾಗಿದೆ. ಪಾಪವನ್ನು ಪಾಪವೆಂದು ತಿಳಿದು ಅದನ್ನು ಮಾಡ ಅಪೇಕ್ಷಿಸಿ ಮಾಡುವವನು ಮಾತ್ರ ನಾಶವಾಗಿ ಹೋಗಲಿಕ್ಕಿದ್ದಾನೆ; ಕೆಟ್ಟದ್ದಕ್ಕೆ ವೈಯ ಬೇಕೆಂದು ಸೈತಾನನು ಶೋಧನೆ ಮಾಡುತ್ತಾನೆ. ಆದರೂ ಹೆಚ್ಚಾದ ಶೋಧನೆಗಳು ಮನುಷ್ಯನ ಹೃದಯದಲ್ಲಿರುವ ಪಾಪದ ಬುಗ್ಗೆಯಿಂದ ಹೊರಡುತ್ತವೆ. ನಮ್ಮ ರಕ್ಷಕನಾದ ಯೇಸುವು ಈ ಲೋಕದಲ್ಲಿರುವ ಸಮಯದಲ್ಲಿ ಈ ಕೆಟ್ಟ ಆತ್ಮಗಳ ಉಪದ್ರಗಳು ವಿಶೇಷವಾಗಿ

ತ್ತೆಂದು ನೆನಸ ಬೇಕು; ಆ ಮೇಲೆ ದೆವ್ವ ಹಿಡಿದವರು ಕಡಿಮೆಯಾ ಗುತ್ತಾ ಬಂದರು; ಅವನ ಮುಖಾಂತ್ರವಾಗಿ ಪಾತಾಳದಲ್ಲಿರುವ ದೆವ್ವ ಗಳೊಳಗೆ ಒಂದು ಹಾರ್ಪಾಟ ಉಂಟಾಗಿ ಅವರ ಬಲ ಕಡಿಮೆಯಾ ಗಿ ಬಂತು.

ಚಂದ್ರಚ: ಇದು ಹ್ಯಾಗೆ? ಈಗ ಸಹ ಇಂಥವರು ಇಲ್ಲವೋ?

ಪಾಪ್ರೆ: ಇದನ್ನು ಸ್ವಲ್ಪ ಆಲೋಚನೆ ಮಾಡಿ ನೋಡುವಾ. ದೇವ ರ ವಾಕ್ಯದಿಂದ ತೋರುವದೇನಂದರೆ: — ನಮ್ಮ ಕರ್ತನಾದ ಯೇಸುವು ಈ ಲೋಕವನ್ನು ಬಿಟ್ಟ ಮೇಲೆ ಸಮಾರ್ಯದಲ್ಲಿಯೂ ಎಫೆಸದಲ್ಲಿಯೂ ಮಾತ್ರ ದೆವ್ವ ಹಿಡಿದವರು ಇದ್ದರೆಂದು ಅಪೊಸ್ತಲರ ಕ್ರಿಯೆಗಳೆಂಬ ಪು ಸ್ತಕದಲ್ಲಿ ಓದುತ್ತೇವೆ. ಈ ಎರಡು ಪಟ್ಣಗಳಲ್ಲಿ ಮಂತ್ರವಾದವು ಅಧಿ ಕವಾಗಿ ನಡಿಯಿತು; ಇದರಿಂದಲೇ ದೆವ್ವಗಳಿಗೆ ಆಸ್ಪದ ಶಿಕ್ಕಿದ ಹಾಗೆ ಆ ಯಿತು. ಹಾಗೆಯೇ ಈ ದೇಶದಲ್ಲಿಯೂ ದೆವ್ವಗಳ ಕ್ರಿಯೆಗಳು ಅಷ್ಟು ಬಲವಾಗಿ ನಡಿಯುವದು ಹ್ಯಾಗೆ? ಎಂದು ಕೇಳುತ್ತೀರಿ; ಅದಕ್ಕೆ ನಾ ನು ಉತ್ತರ ಕೊಡುವದೇನಂದರೆ: ಕೃತ್ರಿಮ ಕೆಲಸಗಳೂ ಮಂತ್ರವಾದ ಗಳೂ ಬಹಳ ನಡೆದು, ದೋಷವೂ ದ್ರೋಹವೂ ಹೆಚ್ಚು ಹೆಚ್ಚಾ ಗುತ್ತಾ ಬಂದದರಿಂದ ಸೈತಾನನ ತಂತ್ರವೂ ಬಲವೂ ಅವಲಂಬಿಸಿತೆಂ ದು ನೆನಸ ತಕ್ಕದ್ದು.

ಕೃಷ್ಣರಾ: ಇದು ಸತ್ಯವೇ! ಅದೇ ಪ್ರಕಾರ ದಾಸರ ಪದಗಳಲ್ಲಿ ಹೇಳಿರುವದೇನಂದರೆ:

ಆರಾರಿ ಪಡೆದು ತಿರಿದುಂಬುವದಕ್ಕೀಗ
ಕಾಡ ದೆವ್ವಗಳನ್ನು ಚಿನ್ನ ಬೆಳ್ಳಿಗಳಿಂದ
ಮಾಡಿ ಕೊಂಡದರ ಪೂಜೆಯನು ಮಾಡಿ,
ಕಾಡು ಕಳ್ಳರು ಬಂದು ಅವುಗಳನು ಕೊಂಡ್ಹೊಯ್ಯೆ,
ಮಾಡಿ ಕೊಂಡಿರ್ದುದಕೆ ಬಾಯ ಬಡು ಕೊಳುವಿ.
ಯಾತಕ್ಕೆ ಮರುಳಾದೆಯೋ? ಮನವೇ, ಯಾತಕ್ಕೆ ಮರುಳಾದೆ,
ಕಾಕು ದೈವವ ನಂಬಿ, ಕಾತರ ಪಟ್ಟು, ನೀತಿ ಮಾರ್ಗವ ಬಿಟ್ಟು?
ಮಾರಿಯೂ ಮಸಣಿಯೂ ಕಾಯ್ವುದೆ?

ಪಾದ್ರೆ: ಆರಂಭದಿಂದ ಈಚೆಗೆ ಸೈತಾನನ ಬಲವು ಒಂದೊಂದು ಸಾರಿ ಹೆಚ್ಚು ವಿಶೇಷವಾಗಿ ಕಾಣ ಬಂತು. ಅದು ಪಾತಾಳದ ಅಗಾಧದಿಂದ ಮನುಷ್ಯರೊಳಗೆ ಹಬ್ಬಿ, ಅದನ್ನು ಗಣ್ಯ ಮಾಡುವಂತೆ ವಿಶೇಷ ಅನುಭವವೂ ಅಭ್ಯಾಸವೂ ಮಾಡದವರಿಗೆ ಸಹ ಅದರ ಸ್ಪರ್ಶವಾಗಲಿಕ್ಕೆ ಅನುಕೂಲವಾಯಿತು. ಒಂದೊಂದು ಸಾರಿ ಯಾರೂ ನೆನಸದ ಸಮಯದಲ್ಲಿ ಸ್ವಲ್ಪ ಕಾಲದೊಳಗೆ ಒಂದು ದೇಶದಲ್ಲಿರುವ ಎಲ್ಲಾ ಮನುಷ್ಯರು ಮತ್ತರೂ ಭ್ರಾಂತರೂ ಆದವರಂತೆ ಅನಿಷ್ಟವೂ ಕ್ರೂರವೂ ಆದ ಮತ್ತು ಸೈತಾನನು ಮಾಡ ತಕ್ಕಂಥ ಕ್ರಿಯೆಗಳನ್ನು ಮಾಡುವರು. ಇದು ವಿಶೇಷವಾಗಿ ಕಾಟಕಾಯಿ ಆಗುವ ಸಮಯದಲ್ಲಿ ಬಹಳ ಜನರು ಕೂಡಿ ಹಬ್ಬಗಳನ್ನು ಆಚರಿಸುವಾಗ ನಡದ ವೃತ್ತಾಂತಗಳಿಂದ ತಿಳಿದು ಕೊಳ್ಳ ಬಹುದು.

ರಾಮಶೆ: ನೀವು ಹೇಳುವ ಹಾಗೆ ಪಿಶಾಚಿಗಳು ದುಸ್ಸಹಗಳನ್ನು ನಡಿಸುವದು ಹೌದಾದರೆ, ದೇವರು ಅವರನ್ನು ಉಂಟು ಮಾಡಿದ್ದು ಯಾಕೆ?

ಪಾದ್ರೆ: ಈ ಕತ್ತಲೆಯ ಸಂಗತಿಗಳು ದೆವ್ವಗಳ ಮತ್ತು ಅವರ ಮುಖ್ಯಸ್ಥನಾದ ಸೈತಾನನ ಕ್ರಿಯೆಗಳು ಆಗಿರುತ್ತವೆ. ಮನುಷ್ಯರು ಅವುಗಳನ್ನು ಪೂರ್ಣವಾಗಿ ಗ್ರಹಿಸಲಿಕ್ಕೆ ಕೂಡದವರಾಗಿರುವದರಿಂದ ಅನೇಕರು ಅವುಗಳ ವಿಷಯ ತಿಳಿಯದೆ ಮಾತಾಡುತ್ತಾರೆ; ಹ್ಯಾಗಂದರೆ ದೇವರಿಗೆ ಎಲ್ಲಾ ಕ್ರಿಯೆಗಳು ಮುಂಚಿತವಾಗಿಯೇ ಗೊತ್ತಾಗಿರುವದರಿಂದ, ಆತನು ಇಷ್ಟು ಕೆಟ್ಟವನಾಗಿರುವ ಸೈತಾನನನ್ನು ಉಂಟು ಮಾಡಿದ್ದು ಯಾಕೆ? ಅವನನ್ನು ಈ ವರೆಗೆ ಇಂಥಾ ಕೆಟ್ಟ ಕೆಲಸ ಮಾಡಲಿಕ್ಕೆ ಬಿಟ್ಟಿದ್ದು ಯಾಕೆ? ಎಂದು ಕೇಳುತ್ತಾರೆ.

ಚಂದ್ರಭ: ಸೈತಾನನು ಕೆಟ್ಟವನಾಗಿದ್ದರೂ ಮನುಷ್ಯರನ್ನು ಕೆಡಿಸದೆ ಇರುವ ಹಾಗೆ ದೇವರು ಯಾಕೆ ತಡೆಯುವದಿಲ್ಲ? ಅವನಿಗೂ ಅವನ ದೂತರಿಗೂ ಈ ಲೋಕದಲ್ಲಿ ಇಷ್ಟು ಅಧಿಕಾರ ಕೊಟ್ಟು ಅವನನ್ನು ನಾಶನ ಮಾಡದೆ ಉಳಿಸಿ, ಅವನು ತಂತ್ರದಿಂದಲೂ, ಯುಕ್ತಿಯಿಂದಲೂ ನಡಿಸುವ ಶೋಧನೆಗಳಿಗೆ ಒಳಪಡುವ ಮನುಷ್ಯರನ್ನು ವಿಚಾರಣೆ ಮಾಡಿ, ಶಿಕ್ಷಿಸುವದು ಯಾಕೆ?

ಪಾದ್ರೆ: ಇಂಥಾ ಪ್ರಶ್ನೆಗಳಿಗೆ ತಕ್ಕ ಉತ್ತರ ಕೊಡುವದಕ್ಕಿಂತ ಮುಂಚೆ ಅದಕ್ಕೆ ಪ್ರತಿಯಾಗಿ ಕೆಲವು ಪ್ರಶ್ನೆಗಳನ್ನು ಹಾಕುತ್ತೇನೆ. ಸರ್ವತ್ರಾಣಿಯಾಗಿರುವ ದೇವರು ತನ್ನ ಪರಿಶುದ್ಧ ಚಿತ್ತದ ಪ್ರಕಾರ ಎಲ್ಲಾ ಉಂಟು ಮಾಡಿ ನಡಿಸುವಾಗ, ಅಲ್ಪ ಮನುಷ್ಯರಾದ ನಾವು ಅವನ ಸಂಗಡ ಝುಗಳ ಮಾಡ ಬಹುದೋ? ಕುಂಬಾರನು ಒಂದು ಪಾತ್ರೆಯನ್ನು ಮಾಡುವಾಗ, ಮಣ್ಣಿನ ಮುದ್ದೆಯು ಅವನಿಗೆ ವಿರೋಧವಾಗಿ ಮಾತಾಡಿ, ಯಾಕೆ ಇಂಥಾ ಪಾತ್ರೆಗಳನ್ನು ಮಾಡುತ್ತೀ? ಎಂದು ಕೇಳುವದುಂಟೇ? ಅರಸನ ಚಾಕ್ರಿಯವನು ತನ್ನನ್ನು ಪ್ರಧಾನಿಯಾಗಿ ಮಾಡಲಿಲ್ಲವೆಂದು ಅರಸನ ಸಂಗಡ ವ್ಯಾಜ್ಯ ಮಾಡ ಬಹುದೋ? ಪರಲೋಕವು ಭೂಮಿಯ ಮೇಲೆ ಎಷ್ಟು ಎತ್ತರವೋ, ಅಷ್ಟು ಎತ್ತರ ಮನುಷ್ಯನ ಆಲೋಚನೆಗಳಿಗಿಂತ ದೇವರ ಆಲೋಚನೆಗಳು ಅವೆ; ನಮಗೆ ಗ್ರಹಿಸಲಿಕ್ಕೆ ಕೂಡದ ಆಶ್ಚರ್ಯವು ದೇವರಿಗೆ ಗೊತ್ತು ಇಲ್ಲವೋ? ದಿನಾಲು ಆಗುವಂಥ, ನಾವು ನೋಡುವಂಥ, ಎಷ್ಟೋ ಸಂಗತಿಗಳು ನಮ್ಮ ಬುದ್ಧಿಗೆ ಮೀರಿರುತ್ತವೆ! ಹಾಗಾದರೆ ದೇವರ ಆಲೋಚನೆಗಳನ್ನೂ ಕ್ರಿಯೆಗಳನ್ನೂ ಮಾರ್ಗಗಳನ್ನೂ ಶೋಧಿಸ ಬಹುದೆಂದು ನೆನಸುತ್ತೀರೋ? ನೀವು ಮುಂಚೆ ಚಿಕ್ಕವರಾಗಿರುವಾಗ ಆಹಾರ ತೆಗದು ಬೆಳದದ್ದೂ, ನಿಮ್ಮ ಕಿವಿ ಕೇಳುವ ಹಾಗೆ ಆದದ್ದೂ, ಕಣ್ಣು ನೋಡುವ ಹಾಗೆ ಆದದ್ದೂ, ನೀವು ಹಾಕಿದ ಬೀಜ ಮೊಳಿತದ್ದೂ ಈ ಮುಂತಾದ ಸಂಗತಿಗಳು ಹ್ಯಾಗೆ ಆದವೆಂದು ನೆನಸ ಕೂಡುವಿರೋ? ಎಷ್ಟು ಚಿಕ್ಕ ಮಕ್ಕಳು ತಮಗೆ ತಿಳಿಯದವುಗಳನ್ನು ಕುರಿತು ತಾಯಿ ತಂದೆಗಳ ಮಾತು ಕೇಳಿ ಸಮಾಧಾನ ಪಟ್ಟು, ಅವರು ತಮಗೆ ಹೇಳುವದೆಲ್ಲಾ ಸತ್ಯವೆಂದು ನಂಬುತ್ತಾರೆ! ಹಾಗೆಯೇ ನಮಗಿಂತ ಎಷ್ಟೋ ಅಮೂಲ್ಯವಾದ ದೇವರ ಮಾತನ್ನು ಕೇಳಿ, ಅದು ಪೂರ್ಣ ಸತ್ಯವೆಂದು ಕೈಕೊಂಡು ನಂಬ ಬೇಡವೋ? ಒಬ್ಬ ಒಕ್ಕಲಿಗನು ಪಶುಗಳಿಗೆ ಹಗ್ಗಗಳನ್ನೂ, ಒಬ್ಬ ಆಟಗಾರನು ಬೊಂಬೆಗಳಿಗೆ ಸೂತ್ರಗಳನ್ನೂ ಮಾಡಿ ತನ್ನ ಚಿತ್ತದ ಪ್ರಕಾರ ನಡಿಸುವಂತೆ ದೇವರು ಮನುಷ್ಯರನ್ನು ಪ್ರೇರಿಸುವದಿಲ್ಲ. ಮನುಷ್ಯರು ಬೊಂಬೆಗಳಲ್ಲ; ದೇವರು ಆಟಗಾರನಲ್ಲ; ದೇವರು ಎಲ್ಲದಕ್ಕಿಂತ ವಿಶೇಷವಾಗಿ ಬುದ್ಧಿಯುಳ್ಳ ಪ್ರಾ

ಣಿಗಳಾಗಿರುವ ಮನುಷ್ಯರನ್ನು ಉಂಟು ಮಾಡಿ, ಪ್ರೀತಿಯಿಂದಲೆ ನಡಿ
ಸಲಿಕ್ಕೆ ನೋಡುತ್ತಾನೆ. ಇದನ್ನು ನೆನಸಿ ದೇವರು ಮಾಡಿದ್ದೂ ಇನ್ನು
ಮಾಡುವಂಥಾದ್ದೂ ನಾವು ನೋಡಿ, ಓ ದೇವರ ಜ್ಞಾನ ತಿಳುವಿಕೆಗ
ಳ ಐಶ್ವರ್ಯದ ಅಗಾಧವೇ! ಲೋಕದಲ್ಲಿ ನಡಿಸಿದ ಅವನ ನ್ಯಾಯತೀ
ರ್ವಿಕೆಗಳು ಎಷ್ಟೋ ಅಶೋಧ್ಯವಾಗಿವೆ! ಅವನ ಹಾದಿಗಳು ಎಷ್ಟೋ
ಅಮಾರ್ಗ್ಯವಾಗಿವೆ! ಯಾಕಂದರೆ ಕರ್ತನ ಮಾತನ್ನು ತಿಳಿದವನ್ಯಾರು?
ಇಲ್ಲವೆ ಅವನಿಗೆ ಅಲೋಚನೆ ಹೇಳುವವನ್ಯಾರು? ಇಲ್ಲವೆ ತನಗೆ ತಿರು
ಗಿ ಕೊಡಲ್ಪಡುವ ಹಾಗೆ ಅವನಿಗೆ ಮುಂಕೊಟ್ಟವನ್ಯಾರು? ಯಾಕಂದ
ರೆ ಅವನ ದೆಶೆಯಿಂದಲೂ ಅವನ ಮೂಲವಾಗಿಯೂ ಅವನಿಗಾಗಿಯೂ
ಸಮಸ್ತವು ಉಂಟು; ಅವನಿಗೆ ಎಂದೆಂದಿಗೂ ಮಹಿಮೆ ಆಗಲಿ! ಎಂ
ದು ಅರಿಕೆ ಮಾಡಿ, ಅವನ ಕ್ರಿಯೆಗಳು ದೊಡ್ಡವುಗಳೂ ಆಶ್ಚರ್ಯವಾದ
ವುಗಳೂ, ಅವನ ಮಾರ್ಗಗಳೂ ನ್ಯಾಯತೀರ್ವಿಕೆಗಳೂ ನೀತಿಯೂ ಸ
ತ್ಯವೂ ಆಗಿವೆ ಎಂದು ನಂಬಿ, ಅದರ ವಿಷಯದಲ್ಲಿ ಅವನಿಗೆ ಆರಾಧನೆ
ಯನ್ನೂ ಸ್ತುತಿ ಸ್ತೋತ್ರಗಳನ್ನೂ ಮಾಡಿ, ಅವನೇ ಸರ್ವತ್ರಾಣಿಯೂ ಸ
ರ್ವಜ್ಞಾನಿಯೂ ಆಗಿ ಸರ್ವವನ್ನು ಆಳುತ್ತಾನೆಂದು ಒಪ್ಪ ಬೇಕು. ಅದು
ನಮಗೆ ತಕ್ಕದಲ್ಲವೋ? ನಮ್ಮ ಬಾಯಿಯನ್ನು ಮುಚ್ಚಿಕೊಂಡು ದೇವರ
ಮುಂದೆ ಸುಮ್ಮನಿರುವದು ಒಳ್ಳೇದು; ಯಾಕಂದರೆ ಇದರ ವಿಷಯದಲ್ಲಿ
ಮಿತಿ ಮೀರಿ ಮಾತಾಡುವವನಿಗೆ ಅವನು ಉತ್ತರ ಕೊಡುವದೇನಂದರೆ:
ತಿಳುವಿಕೆ ಇಲ್ಲದ ಮಾತುಗಳಿಂದ ಆಲೋಚನೆಯನ್ನು ಕತ್ತಲಾಗ ಮಾ
ಡುವವನ್ಯಾರು? ಪುರುಷನ ಹಾಗೆ ನಡುವನ್ನು ಕಟ್ಟು; ನಾನು ನಿನ್ನನ್ನು
ಕೇಳುವೆನು, ನೀನು ನನಗೆ ತಿಳಿಸು. ನಾನು ಭೂಮಿಯ ಅಸ್ತಿವಾರ
ಹಾಕಿದ್ದಾಗ, ನೀನು ಎಲ್ಲಿ ಇದ್ದಿ? ನಿನಗೆ ಗ್ರಹಿಕೆ ಇದ್ದರೆ, ತಿಳಿಯ ಪ
ಡಿಸು. ಅದರ ಅಳತೆಯ ಕೋಲುಗಳನ್ನು ಹಾಕಿದವನ್ಯಾರು? ತಿಳಿಯು
ತ್ತೀಯೋ? ಅದರ ಮೇಲೆ ಥಾರ ಇಟ್ಟವನ್ಯಾರು? ಯಾತರ ಮೇಲೆ
ಅದರ ಅಡಿಗಳು ಕೂತವೆ? ಇಲ್ಲವೆ ಅದರ ಮೂಲೇ ಕಲ್ಲನ್ನು ಹಾಕಿದವ
ನ್ಯಾರು, ಉದಯದ ನಕ್ಷತ್ರಗಳು ಕೂಡಾ ಹರ್ಷಧ್ವನಿ ಮಾಡುವಾಗ,
ದೇವರ ಮಕ್ಕಳೆಲ್ಲಾ ಉಲ್ಲಾಸದಿಂದ ಆರ್ಭಟಿಸುವಾಗ? ಇಲ್ಲವೆ ಸ

ಮುದ್ರವು ಗರ್ಭದೊಳಗಿಂದ ನೆಗದು ಬರುವಾಗ, ಅದಕ್ಕೆ ಬಾಗಲುಗಳನ್ನು ಇಟ್ಟವನ್ಯಾರು? ನಾನು ಅದರ ವಸ್ತ್ರವಾಗಿ ಮೇಘವನ್ನೂ, ಅದಕ್ಕೆ ಬಟ್ಟೆಯಾಗಿ ಅಂಧಕಾರವನ್ನೂ ಕೊಟ್ಟಾಗ, ಅದಕ್ಕೆ ನನ್ನ ನೇಮ ನಿರ್ಣಯಿಸಿದೆನು; ಅದಕ್ಕೆ ಅಗುಳಿಗಳನ್ನೂ ಬಾಗಲುಗಳನ್ನೂ ಇಟ್ಟೆನು. ಇಲ್ಲಿಯ ತನಕ ಬರುವಿ, ಮುಂದರಿಯ ಕೂಡದು, ಇಲ್ಲಿ ನಿನ್ನ ತೆರೆಗಳ ಅಹಂಕಾರ ನಿಲ್ಲಲಿ, ಅಂದೆನು. ನಿನ್ನ ದಿವಸಗಳಾರಭ್ಯ ಬೆಳಿಗ್ಗೈಗೆ ಅಪ್ಪಣೆ ಕೊಟ್ಟಿಯೋ? ಅದು ಭೂಮಿಯ ಅಂಚುಗಳನ್ನು ಹಿಡಿಯುವ ಹಾಗೆಯೂ, ದುಷ್ಟರು ಅದರೊಳಗಿಂದ ಝಾಡಿಸಲ್ಪಡುವ ಹಾಗೆಯೂ, ಉದಯಕ್ಕೆ ಸ್ಥಳ ತೋರಿಸಿದಿಯೋ? ಮುದ್ರೆಯಿಂದ ಮಣ್ಣು ಆಗುವ ಹಾಗೆ, ಅದು ಮಾರ್ಪಡುತ್ತದೆ; ವಸ್ತ್ರದ ಹಾಗೆನಿಂತಿರುತ್ತದೆ. ಮತ್ತು ದುಷ್ಟರಿಂದ ಅವರ ಬೆಳಕು ಹಿಂಜರಿಯುತ್ತದೆ; ಎತ್ತಿದ ತೋಳು ಮುರಿದು ಹೋಗುವದು. ನೀನು ಸಮುದ್ರದ ಬುಗ್ಗಗಳ ತನಕ ಬಂದು, ಅಗಾಧದ ನೀರಿನ ಗುಂಡಿಯಲ್ಲಿ ತಿರುಗಾಡಿದಿಯೋ? ನಿನಗೆ ಮರಣದ ಬಾಗ್ಲುಗಳು ತೆರೆಯಲ್ಪಟ್ಟವೋ? ಮರಣದ ನೆರಳಿನ ಬಾಗ್ಲುಗಳನ್ನು ನೀನು ನೋಡಿದಿಯೋ? ಭೂಮಿಯ ವಿಸ್ತಾರಗಳ ತನಕ ನೀನು ಗ್ರಹಿಸಿದಿಯೋ? ಇದನ್ನೆಲ್ಲಾ ತಿಳುಕೊಂಡರೆ, ತಿಳಿಯ ಪಡಿಸು. ಬೆಳಕಿನ ನಿವಾಸಕ್ಕೆ ದಾರಿ ಯಾವದು? ಕತ್ತಲೆಯ ಸ್ಥಳವು ಯಾವದು? ಅದರ ಗಡಿಯ ತನಕ ಅದನ್ನು ತಿಳಿದು ಕೊಂಡಿಯೋ? ಅದರ ಮನೆಗೆ ಹೋಗುವ ಹಾದಿಗಳನ್ನು ಗ್ರಹಿಸಿದಿಯೋ? ಅಂದೇ ಹುಟ್ಟಿದ್ದರಿಂದ ನಿನಗೆ ತಿಳಿಯುವದೋ? ನಿನ್ನ ದಿವಸಗಳ ಲೆಖ್ಖವು ಬಹಳವಾಗಿರುವದರಿಂದ? ಹಿಮದ ಉಗ್ರಾಣಗಳ ತನಕ ಬಂದಿಯೋ? ಆನೇ ಕಲ್ಲಿನ ಉಗ್ರಾಣಗಳನ್ನು ನೋಡಿದಿಯೋ? (ಯೋಬ. ೩೮, ೨—೨೨.) ಇದಕ್ಕೆ ದೇವ ಭಕ್ತನಾಗಿರುವ ಯೋಬನು ಅರಿಕೆ ಮಾಡಿದ್ದೇನಂದರೆ, ಇಗೋ ನೀಚನಾಗಿದ್ದೇನೆ, ಏನು ಪ್ರತ್ಯುತ್ತರ ಕೊಡಲಿ? ನನ್ನ ಬಾಯಿ ಮುಚ್ಚಿ ಕೊಳ್ಳುತ್ತೇನೆ; ಒಂದು ಸಾರಿ ಮಾತಾಡಿದೆನು, ತಿರುಗಿ ಉತ್ತರ ಕೊಟ್ಟೆನು, ಹೆಚ್ಚು ಮಾತಾಡೆನು. ನಾವು ಸಹ ಹಾಗೆ ಹೇಳ ಬಹುದಲ್ಲದೆ ಮತ್ತೇನು ಹೇಳ ಶಕ್ತರಾಗಿದ್ದೇವೆ?

ಪುಟ್ಟಣ್ಣಾಚಾ: ಹೌದು, ದೇವರ ಸಂಗಡ ನ್ಯಾಯ ಮಾಡಲಿಕ್ಕೆ ಹೋಗುವವನು ಜ್ಞಾನಿಯಾಗಿರುವ ಮನುಷ್ಯನಲ್ಲ.

ಪಾದ್ರೆ: ದೇವರಾದ ಕರ್ತನಿಗೆ ನಿಶ್ಚಯವಾಗಿ ಲೋಕದ ಉತ್ಪತ್ತಿಯಿಂದ ಈಚೆಗೆ ತನ್ನ ಎಲ್ಲಾ ಕ್ರಿಯೆಗಳು ಗೊತ್ತಿದ್ದವು. ಅವನು ಸೈತಾನನ ಎಲ್ಲಾ ಕೆಟ್ಟ ಕಾರ್ಯಗಳನ್ನು ಮುಂಚೆಯೇ ತಿಳಿದು ಕೊಂಡು, ಮನುಷ್ಯರು ಪಾಪ ಮಾಡಿದರಿಂದ ಭಂಗಕ್ಕೂ ನರಕಕ್ಕೂ ಬೀಳುವರೆಂದು ತಿಳಿದಿದ್ದರೂ ಸೈತಾನನನ್ನು ಬೆಳಕಿನ ದೂತನಾಗಿಯೂ ಮನುಷ್ಯನನ್ನು ತನ್ನ ಪ್ರತಿರೂಪದಲ್ಲಿಯೂ ಉಂಟು ಮಾಡಿದನು; ಯಾಕಂದರೆ ದೇವರು ಮನುಷ್ಯನ ಹಾಗೆ ಪಶ್ಚಾತ್ತಾಪ ಪಡ ಕೊಳ್ಳುವವನಲ್ಲ. ತನ್ನ ಮನಸ್ಸಿನಲ್ಲಿ ಇರುವದನ್ನು ತನ್ನ ಚಿತ್ತದ ಪ್ರಕಾರ ನಡಿಸಿ ಪೂರೈಸಲಿಕ್ಕೆ ಬಲ್ಲನು. ಅವನು ಅನಾದಿ ಕಾಲದ ಮುಂಚೆ ಆಲೋಚನೆಯ ಮಾರ್ಗವನ್ನೂ ನಿರ್ಣಯಿಸಿ, ಇದರ ಮುಖಾಂತ್ರ ಕೆಟ್ಟದ್ದಕ್ಕೆ ಎದುರು ನಿಂತು, ಅದನ್ನು ಪೂರ್ಣವಾಗಿ ಜೈಸಲಿಕ್ಕೆ ಕೂಡುವ ಹಾಗೆ ಮನುಷ್ಯರಿಗೆ ಬೇಕಾದ ಬಲ ಕೊಟ್ಟು ಸಹಾಯ ಮಾಡಿದನು. ಅವನು ಸೈತಾನನನ್ನು ಆಗಲೇ ಕೆಡಿಸದೆ ನಮಗೆ ಗ್ರಹಿಸ ಕೂಡದ ತಾಳ್ಮೆಯಿಂದಲೂ ದೀರ್ಘಶಾಂತಿಯಿಂದಲೂ ತಾಳಿ ಕೊಳ್ಳುತ್ತಾ ಇದ್ದಾನೆ. ಇದಲ್ಲದೆ ದೇವರ ರಾಜ್ಯವು ವಿಸ್ತಾರವಾಗಿ ನೆಟ್ಟಗೆ ನಡಿಯಲಿಕ್ಕೆ ಕೂಡುವದಿಲ್ಲ ಎಂಬದೂ, ಇಲ್ಲವೆ ಸೈತಾನನ ಕೆಟ್ಟ ಕೆಲಸ ನಡಿಸ ಬೇಕೆಂಬದೂ ಅಲ್ಲ, ದೇವರು ಎಲ್ಲರಿಗೆ, ಮನುಷ್ಯರಿಗೂ ಸೈತಾನನಿಗೂ ಕೊಟ್ಟ ಸ್ವತಂತ್ರದಲ್ಲಿ ಎಲ್ಲವೂ ಸಾಗಿ ಹೋಗಿ, ಅವನು ಇಟ್ಟ ಗಡುವು ಪೂರ್ಣವಾಗುವ ತನಕ ನಡಿಯ ಬೇಕೆಂದು ಅವನ ಚಿತ್ತವಾಗಿದೆ. ಅದು ಆಗುವ ಹಾಗೆ ಸರ್ವತ್ರಾಣಿಯೂ ಲೋಕಾಧಿಪತಿಯೂ ಆಗಿರುವ ದೇವರು ತನ್ನನ್ನೂ ತನ್ನ ಸೃಷ್ಟಿಯ ಮಹಿಮೆಯನ್ನೂ ಭಾಗ್ಯವನ್ನೂ ತಕ್ಕ ಹಾಗೆ ಪ್ರಕಟ ಮಾಡಿ ನಮ್ಮನ್ನು ಸನ್ಮಾರ್ಗದಲ್ಲಿ ನಡಿಸಲಿಕ್ಕೆ ಬಲ್ಲನು. ಇದನ್ನು ಹ್ಯಾಗೆ ಮಾಡುತ್ತಾನೆಂದು ಅಲ್ಪ ಬುದ್ಧಿಯವರಾದ ನಾವು ಈಗ ಈ ಲೋಕದಲ್ಲಿರುವ ತನಕ ಪೂರ್ಣವಾಗಿ ತಿಳಿಧು ಕೊಳ್ಳ ಕೂಡದು; ಅವನ ಚಿತ್ತವು ದೂತರಿಗೆ ಸಹ ಅರಿಯದ ಮರ್ಮವಾಗಿರುತ್ತದೆ.

ನಮ್ಮ ಸ್ವಂತ ರಕ್ಷಣೆಗೂ ತಕ್ಕ ಪ್ರಯೋಜನಗಳಿಗೂ ಅವಶ್ಯವಾಗಿರುವಷ್ಟು ಮಾತ್ರ ಅದರ ವಿಷಯವಲ್ಲಿ ತಿಳಿದು ಕೊಳ್ಳಲಿಕ್ಕೆ ಯೋಗ್ಯವಾದ್ದನ್ನು ದೇವರು ತನ್ನ ಜ್ಞಾನದ ಪ್ರಕಾರ ತನ್ನ ವಾಕ್ಯದಲ್ಲಿ ನಮಗೆ ತಿಳಿಸಿದ್ದಾನೆ; ಅದಕ್ಕಾಗಿ ನಾವು ಇದನ್ನು ಪೂರ್ಣ ವಿಶ್ವಾಸದಿಂದ ಅನುಭವ ಮಾಡಿ, ದೇವರ ಎಲ್ಲಾ ಮಾರ್ಗಗಳ ಅಂತ್ಯವನ್ನು ನೆನಸ ಬೇಕು. ಅದರ ವಿಷಯದಲ್ಲಿ ಹೆಚ್ಚು ಮಾತಾಡ ಮನಸ್ಸಿದ್ದರೆ, ಕೆಲವು ದಿನದ ಮೇಲೆ ದಯ ಮಾಡಿ ಇನ್ನೊಂದು ಸಾರಿ ಇಲ್ಲಿಗೆ ಬಂದು ಮಾತಾಡುವ, ಹೀಗೆ ಸಂಭಾಷಣೆ ಮಾಡುವದರಲ್ಲಿ ನನಗೆ ಸಂತೋಷ ಉಂಟು.

ಅದಕ್ಕೆ ಎಲ್ಲರೂ: ಆದೀತು, ಸಂತೋಷದಿಂದ ಬರುತ್ತೇವೆ.

ರಾಮಶೆ: ಯಾವಾಗ ತಿರುಗಿ ದಯ ಮಾಡುತ್ತೀರಿ?

ಪಾದ್ರೆ: ಮಳೆಯನ್ನು ನೋಡ ಬೇಕು; ಕೂಡಿದರೆ ಒಂದು ವಾರದ ಮೇಲೆ ಬರುತ್ತೇನೆ.

ಆಗ ಎಲ್ಲರೂ: ಒಳ್ಳೇದು ನಾವು ಸಹ ಆಗ ಬರುವ ಬುಧವಾರ ದಿವಸ ಬರುವೆವು.

ಇಷ್ಟಾದ ಮೇಲೆ ಪಾದ್ರೆ ಧೊರೆ ಸಲಾಂ ಮಾಡಿ ಹೊರಟು ಹೋದರು.

ಮೂರನೇ ಸಂಭಾಷಣೆಯು

3. ಭೂತಗಳ ಉಪದ್ರ ಪರಿಹಾರವಾಗುವ ಮಾರ್ಗವು

ಏಳು ದಿವಸದ ಮೇಲೆ ಪಾದ್ರೆ ಧೊರೆಯು ತಿರಿಗಿ ಆ ಊರಿಗೆ ಬಂದರು. ಬಂಗ್ಲೆಯಲ್ಲಿ ಸ್ವಲ್ಪ ತಡವಾದ ಕಾರಣ ಆ ರಾಮಶೆಟ್ಟಿಯ ಅಂಗಡಿಗೆ ಸಮೀಪಿಸುವಾಗ ಕೃಷ್ಣರಾಯರೂ, ಚಂದ್ರಭಟ್ಟರೂ, ರಾಮಶೆಟ್ಟಿಯೂ, ಈ ಮೂವರು ಕಾದು ಕೊಂಡಿದ್ದರು; ಇವರನ್ನು ನೋಡಿ ಸಂತೋಷವಾಗಿ ನಗಾಡಿ ಕೈ ಮುಗಿದು ಸಲಾಂ ಮಾಡಿದರು. ಪಾದ್ರೆ ಧೊರೆ ಸಹಾ ಸಲಾಂ ಮಾಡಿ, ಹ್ಯಾಗೆ ಇದ್ಧೀರೆಂದು ಕೇಳುವಾಗ, ದೇವರ ದಯದಿಂದ ಕ್ಷೇಮದಲ್ಲಿದ್ಧೇವೆಂದು ಹೇಳಿದರು. ಹಾಗೆ ಮಾತಾಡುವಾಗ

ಪುಟ್ಟಣ್ಣಾಚಾರ್ಯರು ಬಂದು ಸಲಾಂ ಮಾಡಿ ಕೂತು ಕೊಂಡು ಹೇಳಿದ್ದು: ಈ ಹೊತ್ತು ನನಗೆ ಬರಲಿಕ್ಕೆ ಆಗುವದಿಲ್ಲವೆಂದು ನೆನಸಿದೆನು; ನಿನ್ನೆ ಒಂದು ಸಾಕ್ಷಿಗಾಗಿ ಕೋರ್ಟಿಗೆ ಹೋಗಿ ರಾತ್ರಿ ತನಕ ಅಲ್ಲಿ ನಿಲ್ಲ ಬೇಕಾಯಿತು; ಮತ್ತೇನು ಮಾಡ ಬಹುದು? ಕತ್ತಲೆಯೂ ದೂರ ಹಾದಿಯೂ ಇದ್ದರೂ ನೀವು ಬರುವಿರೆಂದು ಜ್ಞಾಪಕ ಮಾಡಿ ನಾನು ಸಹ ಬರುವೆನೆಂದು ಹೇಳಿದ್ದನ್ನು ನೆನಸಿ ನಾನು ಬಾರದಿದ್ದರೆ, ನನ್ನ ಮಾತು ಸುಳ್ಳಾಗುತ್ತದಲ್ಲ! ಧೊರೆಗಳಿಗೆ ಸುಳ್ಳು ಹೇಳಲಿಕ್ಕಾಗದೆಂದು, ರಾತ್ರಿಯಲ್ಲಿಯೇ ಅಲ್ಲಿಂದ ಹೊರಟು ಶುಮಾರು ಮಧ್ಯರಾತ್ರೆಗೆ ಬಂದೆನು.

ಪಾದ್ರೆ: ಹಾಗಾದರೆ ನಿಮಗೆ ಬಹು ಕಷ್ಟವೂ ಕಾಲುಗಳಿಗೆ ದಣುವೂ ಆಯಿತಲ್ಲಾ? ಆದರೆ ಸತ್ಯಕ್ಕಾಗಿ ಈ ಪ್ರಕಾರ ಮಾಡುವದು ಒಳ್ಳೇದು, ಇದು ನನಗೆ ಮಹಾ ಸಂತೋಷವಾಗೆದೆ; ಹಾಗೆಯೇ ಯಾವಾಗಲೂ ಮಾಡಿರಿ.

ಕೃಷ್ಣರಾ: ಸುಳ್ಳು ಹೇಳಲಿಕ್ಕಾಗದು.

ರಾಮಶೆ: ಧೊರೆಗಳ ಮುಂದೆ ಸುಳ್ಳು ಹೇಳಲಿಕ್ಕೆ ಆಗುತ್ತದೋ? ಅವರ ಮುಂದೆ ಯಾವಾಗಲೂ ಒಂದೇ ಪ್ರಕಾರ ಸತ್ಯವೇ ಸೈ! ಆದರೂ ನಮ್ಮೊಳಗೆ ಸುಳ್ಳು ಹೇಳದೆ ಇರಲಿಕ್ಕೆ ಆಗುತ್ತದೋ?

ಚಂದ್ರಭ: ಇದು ಬಿಡು! ಅವರ ಎದುರಿನಲ್ಲಿ ಇದನ್ನು ಯಾಕೆ ಮಾತಾಡುವದು? ಅದು ಅವರಿಗೆ ಗೊತ್ತಿಲ್ಲವೋ? ನಾವು ಈಗ ಕೂಡಿರುವ ಕಾರಣವನ್ನು ಹಿಡಿದು ಭೂತಗಳ ವಿಷಯವನ್ನು ಮಾತಾಡುವ.

ಕೃಷ್ಣರಾ: ಹೌದು ಭೂತಗಳ, ಇಲ್ಲವೇ ಅವರು ಹೇಳುವ ಪ್ರಕಾರ ಸೈತಾನನ ದೂತರಾದ ದೆವ್ವಗಳ ಉಪದ್ರ ಪರಿಹಾರವಾಗುವ ಸಂಗತಿಯನ್ನು ಕೂಡಾ ಆಲೋಚಿಸಿ ನೋಡುವಾ.

ಪಾದ್ರೆ: ಹೌದು ಹೀಗೆಯೇ ಮಾಡಿ ಮೊನ್ನೆ ಮಾತಾಡಿದ ಹಾಗೆ ಮೊದಲಾಗಿ ಜನರು ಹೇಳುವದನ್ನು ಮನಸ್ಸಿಗೆ ತಂದು ಉಪದ್ರ ಬಾರದ ಹಾಗೆಯೂ ಬಂದದ್ದು ಪರಿಹಾರವಾಗುವ ಹಾಗೆಯೂ ಏನು ಮಾಡುತ್ತಾರೆಂಬುವದನ್ನು ನೋಡುವಾ!

ರಾಮಶೆ: ಇದರ ವಿಷಯದಲ್ಲಿ ಏನು ಮಾಡ ಬೇಕೆಂಬುವದನ್ನು ಭೂತಗಳೇ ನಮಗೆ ತಿಳಿಸುತ್ತವೆ; ದೇವರ ಅಪ್ಪಣೆ ಸಹ ಉಂಟು.

ಪಾದ್ರಿ: ದೇವರ ಅಪ್ಪಣೆಯು ಅದರ ವಿಷಯದಲ್ಲಿ ಇಲ್ಲವೇ ಇಲ್ಲ! ಭೂತಗಳು ಏನಾದರೂ ಹೇಳುವದುಂಟೋ? ಭಟ್ಟರೂ, ಪೂಜಾರಿಗಳೂ ಇವರೇ ನೀವು ಮೆಚ್ಚುವಂಥಾದ್ದನ್ನು ಹೇಳುತ್ತಾರಷ್ಟೆ; ಆಗ ನೀವು ಅದನ್ನು ಮಾಡುತ್ತೀರಿ. ಇದಲ್ಲದೆ ಒಬ್ಬೊಬ್ಬನು ತನ್ನ ಮನಸ್ಸಿಗೆ ಬಂದ ಹಾಗೆ ಇದಕ್ಕೇನಾದರೂ ಕೂಡಿಸಿ ಹೇಳಿ ಅಭ್ಯಂತರಿಸ ನೋಡುವನು.

ಅಷ್ಟರೊಳಗೆ ಪಾಟಾಳಿ ಪೂಜಾರಿಯು ಬಂದು ಸಲಾಂ ಮಾಡಿ ಕೂತು ಕೊಂಡನು.

ಪಾದ್ರಿ: ಒಂದೊಂದು ಊರಿನಲ್ಲಿ ಭೂತಗಳ ಕಾರ್ಯವನ್ನು ನಡಿಸಿ ಅವರನ್ನು ಶಾಂತ ಪಡಿಸಲಿಕ್ಕಾಗಿ ವಿಶೇಷವಾದ ಸ್ಥಾನಗಳನ್ನು ಕಟ್ಟಿ ಕ್ರಮ ಪ್ರಕಾರ ಕೋಲ, ಅಗೆಲು, ತಂಬಿಲ, ಬಲಿ ಮುಂತಾದವುಗಳನ್ನು ಕೊಡುವದು ದೇವರ ಅಪ್ಪಣೆಯಿಂದಾದದ್ದೋ? ಇಲ್ಲವೆ ಮನುಷ್ಯನ ಇಚ್ಛೆಯಿಂದಾದದ್ದೋ? ದೇವರ ಅಪ್ಪಣೆ ಏನಂದರೆ: ನಿನ್ನ ದೇವರಾದ ಕರ್ತನು ನಾನೇ, ನನ್ನ ಮುಂದೆ ನಿನಗೆ ಬೇರೆ ದೇವರುಗಳು ಇರ ಬಾರದು ನೀನು ಯಾವ ತರದ ರೂಪವನ್ನಾದರೂ ಮಾಡಿ, ಕೈ ಮುಗಿದು ಪೂಜೆ ಮುಂತಾದ ಸೇವೆಗಳನ್ನು ಮಾಡ ಬಾರದು. ಪಾಟಾಳಿಯು ಈಗ ಪೂಜೆ ಮಾಡಿ ಬಂದನಲ್ಲವೋ? ದೇವರಿಗೆ ಮಾಡಿದನೋ?

ರಾಮಶೆ: ನಾವು ದಿನಾಲು ನಾರಾಯಣ ದೇವರನ್ನು ನೆನಸಿ ಕೊಂಡು ಕೈ ಮುಗಿದು ಸ್ವಾಮೀ! ದೇವರೇ! ಎಂದು ಹೇಳುತ್ತೇವೆ.

ಪಾದ್ರಿ: ಹೌದು, ಹೀಗೆ ಮಾಡುತ್ತೀರಿ, ಆದರೆ ನಿಮ್ಮ ಹೃದಯಗಳು ದೇವರಿಗೆ ದೂರವಾಗಿವೆ. ಈ ಹತ್ತು ಮಂದಿ ಸ್ಥಾನಗಳು ಅಲ್ಲದೆ ಅನೇಕ ಮನೆಗಳಲ್ಲಿಯೂ ಪ್ರತ್ಯೇಕವಾಗಿ ಭೂತಗಳ ಕೊಠಡಿಗಳಿದ್ದು ಮಂಚ, ಹಾಸಿಗೆ, ರೂಪ ಮುಂತಾದವುಗಳನ್ನು ಭೂತಗಳಿಗೆಂದು ಇಟ್ಟು, ಅವರ ಕ್ರಿಯೆ ಮಾಡುತ್ತಾರೆ.

ಪುಟ್ಟಣ್ಣಾಚಾ: ಇದಕ್ಕೆ ಮಾರಿಯ ಸಂಗತಿಯನ್ನೂ ಶೇರಿಸ ಬೇಕು. ನಮ್ಮ ಬಳಿಯಲ್ಲಿ ಇದು ಶುಮಾರಾಗಿದೆ, ಆದರೆ ಘಟ್ಟದ ಮೇಲೆ ಬಹಳ ಅದೆ. ಮಾರಿಯ ಗುಡಿ ಇರುವಲ್ಲಿ ಕೋಣ ಹಂದಿ ಕು

ರಿ ಆಡು ಕೋಳಿಗಳನ್ನು ಕೊಯ್ದು, ಬೇರೆ ತರದ ಬಹಳ ಘೋಷ ಮಾಡಿ, ಮಾರಿಯನ್ನು ಶಾಂತಿ ಪಡಿಸಲಿಕ್ಕೆ ನೋಡುತ್ತಾರೆ.

ಪಾದ್ರೆ: ಭೂತಗಳಿಗೆ ಅದೇ ತರದಲ್ಲಿ ಕುರಿ ಕೋಳಿ ಕೊಯಿದು ಪೂಜೆ ಮಾಡಿ ಕುಣಿದಾಡುವದಲ್ಲದೆ ಕೆಲವು ದಿಕ್ಕಿನಲ್ಲಿ ಕೊಯಿದವುಗಳ ರಕ್ತವನ್ನು ಸಹ ಕುಡಿದು ಈ ಪ್ರಕಾರ ಭೂತಗಳ ಸೇವೆ ಮಾಡಿ ತಮಗೆ ಉಪದ್ರ ಆಗದ ಹಾಗೆ ನೋಡುವರು. ಹತ್ತು ಮಂದಿ ಕೂಡಿ ಕಾರ್ಯ ನಡಿಸುವಾಗ ಪೂಜಾರಿಯು ಉಪವಾಸ ಮಾಡಿ ಸಂಜೆಯಲ್ಲಿ ಇಲ್ಲವೆ ರಾತ್ರಿಯಲ್ಲಿ ತನ್ನ ವೃತ್ತಿಯನ್ನು ಶುರು ಮಾಡುತ್ತಾನೆ. ಪೂಜಾರಿ ಸ್ವಲ್ಪ ಬಲಹೀನನಾಗಿದ್ದು ಈ ಪ್ರಕಾರ ಕುಣಿದಾಡ ತೊಡಗಿ ಜನರ ಧೋಲು ಮುಂತಾದ ವಾದ್ಯಗಳ ಘೋಷದಿಂದ ವಿಶ್ವಭ್ರಮನಾಗಿ ಭೂತ ತನ್ನ ಮೇಲೆ ಬಂತೆಂದು ಜನರು ನೆನಸುವ ಹಾಗೆ ನಡುಗಿ ಆರ್ಭಟಿಸುವದರಿಂದ ಬಂದ ಜನರು ತಮ್ಮ ಮತ್ತು ತಮ್ಮ ದನಗಳ ರೋಗ ಸಂಕಟಗಳ ವಿಷಯದಲ್ಲಿ ಕೇಳುತ್ತಾರೆ; ಅದಕ್ಕವನು ತಕ್ಕ ಉತ್ತರ ಕೊಟ್ಟು, ಭೂತ ತನ್ನ ಮುಖಾಂತ್ರ ಮಾತಾಡುತ್ತದೆಂದು ತೋರಿಸುತ್ತಾನೆ. ಇದರಲ್ಲಿ ಜನರು ಆಶ್ಚರ್ಯ ಪಡಲಿಕ್ಕೆ ವಿಶೇಷವಾಗಿ ಮನಸ್ಸುಳ್ಳವರಾಗಿರುವದರಿಂದ ಕುಣಿದಾಡುವಂಥವನು ಮುಂಚಿತವಾಗಿ ಸ್ವಲ್ಪ ಹೆಚ್ಚು ಕುಶಲತೆಯೂ, ಯುಕ್ತಿಯೂ ಉಳ್ಳವನಾಗಿರ ಅಭ್ಯಾಸ ಮಾಡಿದವನಾಗಿರ ಬೇಕು.

ರಾಮಶೆ: ಭೂತ ಅವನನ್ನು ಹಿಡಿಯದೆ ಇದ್ದರೆ, ಅವನು ನಡುಗುವದು ಹ್ಯಾಗೆ? ಅವನು ತಿವಿದು ಕೊಳ್ಳುವಾಗ ರಕ್ತ ಬಾರದೆ ಇರುವದೇನು? ಅದು ಭೂತದ ಬಲದಿಂದಲ್ಲವೋ?

ಪಾದ್ರೆ: ಇದಕ್ಕೆ ತಕ್ಕ ಉತ್ತರ ಕೊಡುವದು ನನಗೆ ಅವಶ್ಯವಿಲ್ಲ, ಇಲ್ಲಿ ಪಾಟಾಳಿ ಪೂಜಾರಿಯು ಇದ್ದಾನಲ್ಲ? ಅವನು ಉತ್ತರ ಕೊಡ ಬಹುದು.

ಇದಕ್ಕೆ ಎಲ್ಲರು ನೆಗಾಡಿದರು.

ಪಾಟಾಳಿ ಪೂ: ತಿವಿದು ಕೊಳ್ಳುತ್ತಾರೆಂದು ಹೇಳುವ ಮಾತು ಸುಮ್ಮನೆ; ಒಬ್ಬನು ತಿವಿದು ಕೊಂಡರೆ, ರಕ್ತವೂ ಕರುಳುಗಳೂ ಬಂದು ಸತ್ತೇ ಹೋಗುವನು. ಜನರನ್ನು ಭ್ರಮಿಸುವದಕ್ಕಾಗಿ ಪೂಜಾ

ರಿಗಳು ಇದಕ್ಕೆ ಅಭ್ಯಾಸ ಮಾಡಿ ತಿಳಿದು ಕೊಳ್ಳುತ್ತಾರೆಂಬುವ ಹಾಗೆ ತೋರಿಸುವದಲ್ಲದೆ, ಮತ್ತೇನು ಇಲ್ಲ.

ರಾಮಶೆ: ಇದು ಹಾಗಿರಲಿ! ಆದರೆ ದನಗಳಿಗೆ ಗುಣವಾಗುತ್ತದೆಂದು ಹೇಳುತ್ತಾರೆ; ಮತ್ತು ಅವರು ಹೇಳುವ ಪ್ರಕಾರವೇ ಆಗುತ್ತದಲ್ಲವೋ?

ಪಾದ್ರೆ: ಹೌದು ಪೂಜಾರಿಗಳು ಇಲ್ಲವೆ ಭಟ್ಟರು ತಮ್ಮನ್ನು ಕೇಳುವವರಿಗೆ ದ್ವಯಾರ್ಥದ ಇಲ್ಲವೆ ಅರ್ಥ ತಿಳಿಯದ ಸಂಶಯದ ಮಾತುಗಳನ್ನು ಹೇಳುವದರಿಂದ ಗುಣವಾಗಲೀ ಅವಗುಣವಾಗಲೀ ಆದರೂ ಅವರು ಹೇಳಿದ ಹಾಗೆಯೇ ಆಯಿತೆಂದು ನಂಬುತ್ತಾರೆ.

ಕೃಷ್ಣರಾ: ಇದು ಸತ್ಯವೇ.

ಚಂದ್ರಭ: ನಮ್ಮ ಗುಟ್ಟಿನ ಸಂಗತಿಗಳು ಸಹ ಈ ಧೊರೆಗಳಿಗೆ ಗೊತ್ತಾಗುವದು ಹ್ಯಾಗೆಂದು ನನಗೆ ಆಶ್ಚರ್ಯ ಕಾಣುತ್ತದೆ.

ಪುಟ್ಟಣ್ಣಾಚಾ: ಅವರಿಗೆ ಬೇಕಾದ ಪುಸ್ತಕಗಳು ಇಲ್ಲವೋ? ಅವರಿಗೆ ಗೊತ್ತು ಇಲ್ಲದ್ದು ಉಂಟೋ?

ರಾಮಶೆ: ಇದಲ್ಲದೆ ಅವರು ತಮ್ಮ ಮುನಿಶಿಯರಿಗೆ ಇಂಥವುಗಳನ್ನು ತಿಳಿಸುವದಕ್ಕಾಗಿ ಬೇಕಾದಷ್ಟು ಹಣ ಕೊಡುತ್ತಾರೆ, ಅವರಿಗೇನು ಕಡಿಮೆ?

ಪಾದ್ರೆ: ಮನೆಯಲ್ಲಿ ಆಗುವ ಯಾವ ಕಾರ್ಯವಾದರೂ ಅಂದರೆ, ಮದುವೆ, ಜನನ, ಸಾವು, ಮತ್ತು ಗದ್ದೆ ಉಳುವದೂ, ಕೊಯ್ಯುವದೂ ಸಹ ಭೂತಗಳ ಕ್ರಿಯ ಮಾಡದೆ ಆಗ ಕೂಡದು. ಈ ತರದಲ್ಲಿ ನಿಮಗೆ ಕೈ ಕೊಳ್ಳಲಿಕ್ಕೆ ದೊಡ್ಡ ಹೊರೆ ಕಟ್ಟಿದ ಹಾಗೆಯೇ ಅನೇಕ ಉಂಟು. ಭೂತಗಳ ಉಪಹತಿ ಬಾರದ ಹಾಗೆ ಮನೆಯಲ್ಲಿಯೂ ಕೈಯಲ್ಲಿಯೂ ಕೊರಳಿನಲ್ಲಿಯೂ ಮೂಲಿಗೆಯಂತ್ರ ಮಂತ್ರ ಮುಂತಾದ್ದು ಕಟ್ಟಿ ಹುಡುಗರಿಗೆ ಹುಡಿಗಿಯರಂತೆ ತಲೆ ಕೂದಲು ಬೆಳಿಸಿ, ಮೂಗಿಗೆ ನತ್ತು ಹಾಕಿ ಚಿಕ್ಕ ಹುಡುಗರಿಗೆ ವೊಲೆ ತಿನ್ನಿಸಿ ಆಗದ ನೀಚ ಹೆಸರುಗಳನ್ನಿಟ್ಟು ಹೀಗೆಯೇ ಭೂತಗಳು ಉಪದ್ರ ಕೊಡದ ಹಾಗೆ ಮಾಡುತ್ತಾರೆ; ಜಾತಕರ್ಮದ ಪದ್ಧತಿ ಅದೇ ಭಯದಿಂದ ನಡಿಯುತ್ತದೆಂದು ಕಾಣುತ್ತದೆ. ಸ್ವಲ್ಪ ಶಾಸ್ತ್ರ ತಿಳಿದವರು

ಗಾಯತ್ರಿ ಎಂಬ ಇಪ್ಪತ್ತೆಂಟು ಸಂಸ್ಕೃತ ಅಕ್ಷರಗಳನ್ನು ಹೇಳಿದರೆ, ಬಿಡುಗಡೆ ಆಗುವದೆಂದು ನೆನಸುತ್ತಾರೆ. ಈ ಗಾಯತ್ರಿ ಯಾವದಂದರೆ:

ಓಂ ಭೂರ್ಭುವಃಸ್ವಃತತ್ಸ ವಿತುರ್ವರೇಣ್ಯಮ್ ಭರ್ಗೋದೇವಸ್ಯ ಧೀಮಹೀಧಿಯೋ ಯೋನಃಪ್ರಚೋದಯಾತ್.

ಇದರ ಅರ್ಥವೇನಂದರೆ: ಎಲ್ಲಾ ಕೇವಲ ಸೃಷ್ಟಿಯನ್ನು ಹೆತ್ತಂಥಾ ನಿರತಿಶಯ ದೇವನ ಶ್ರೇಷ್ಠವಾದಂಥಾ ಯಾವ ವೇದ ಪ್ರತಿಪಾದ್ಯವಾದ ಹಿರಣ್ಮಯ ಬ್ರಹ್ಮತೇಜಸು ಭಜಿಸಿದವರ ಪಾಪವನ್ನು ನಾಶ ಮಾಡುವದಕ್ಕೆ ಕಾರಣ ರೂಪವಾಗಿ ನಿಯಮಾದಿಗಳಿಂದ ಪಾಪವನ್ನು ಕಳಕೊಂಡವರಿಂದ ಅನುದಿನ ಧ್ಯಾನಿಸಲ್ಪಡುವದೋ, ಅದು ನಮ್ಮ ಬುದ್ಧಿಗಳನ್ನು ಶ್ರೇಯಸ್ಕರ ಕರ್ಮಗಳಲ್ಲಿ ಅತ್ಯಂತಾತಿಶಯ ಸುಖಾನುಭವವನ್ನು ಹೊಂದಲಿಕ್ಕೆ ಕಾರಣವಾಗಿರುವ ಧರ್ಮ ಕೆಲಸದಲ್ಲಿ ಪ್ರೇರಿಸಲಿ! ಹೀಗೆ ನೆನಪು ಮಾಡುತ್ತಾ ಬರುವ ದೆಶೆಯಿಂದ ಇದನ್ನು ಹೇಳುವವರಿಗೆಲ್ಲಾ ಪಾಪಗಳನ್ನು ಚನ್ನಾಗಿ ನಾಶನ ಮಾಡಲಾಗುತ್ತದೆ, ಸಂದೇಹವಿಲ್ಲ. ಹಾಗೆಯೇ ಕೆಲವು ಮಂದಿ ಹೇಳುತ್ತಾರೆ, ಇದರ ವಿಷಯದಲ್ಲಿ ಈಚೆಗೆ ಗಾಯತ್ರ್ಯರ್ಥ ಬೋಧಿನಿ ಎಂಬ ಚಿಕ್ಕ ಪುಸ್ತಕವನ್ನು ಛಾಪಿಸಿದರು, ಪಾಪವು ಈ ಪ್ರಕಾರ ಲಘುವಾಗಿ ಪರಿಹಾರವಾಗುವದು ಅಹುದಾಗಿದ್ದರೆ, ಅನ್ಯಾಯವು ವಿಶೇಷವಾಗಿ ಈ ಮಂತ್ರವನ್ನು ತಿಳಿದಿದ್ದವರಲ್ಲಿ ಹೆಚ್ಚು ಹೆಚ್ಚಾಗಿ ನಡಿಯುವದು ಯಾಕೆ? ಈ ಪುಸ್ತಕದಲ್ಲಿ ತೋರಿಸಿದ ಹಾಗೆಯೇ ಪಾಪವಿಲ್ಲದೆ ಪೂರ್ಣ ಸುಖದಲ್ಲಿರುವವರು ನನಗೆ ಈ ವರೆಗೂ ಒಬ್ಬನಾದರೂ ಸಿಕ್ಕಲಿಲ್ಲ. ಹೌದು "ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ, ಬೇಟೆಗಾರಗೆ ದಯ ಹುಟ್ಟೀತೇ?"

ಪುಟ್ಟಣ್ಣಾಚಾ: ಗಾಯತ್ರ್ಯರ್ಥದ ಪುಸ್ತಕದಲ್ಲಿ ಹಾಗೆ ಹೇಳುವದುಂಟೋ?

ಪಾದ್ರೆ: ಹೌದು ಹೀಗೆ ಉಂಟು; ಅದನ್ನು ತರಿಸಿ ವಿಚಾರಣೆ ಮಾಡಿ ನೋಡಿದರೆ ಒಳ್ಳೇದಾಗಿತ್ತು. ಬುದ್ಧಿಯುಳ್ಳವರಾದ ನೀವು ತಿಳಿಯದ ಜನರಿಗೆ ಬುದ್ಧಿ ನೀತಿ ಹೇಳಿ ಕೊಟ್ಟಿದ್ದರೆ, ಬಹಳ ಪುಣ್ಯವಾಗಿರುತ್ತಿತ್ತು; ಯಾಕಂದರೆ ಸಾಧಾರಣವಾಗಿ ನಡೆಯುವ ಕ್ರಿಯೆಗಳಲ್ಲದೆ ಬೇರೆ

ಬುದ್ಧಿ ಇಲ್ಲದ ಅನೇಕ ಕೆಲಸಗಳನ್ನು ಮಾಡುತ್ತಾರೆ, ಅದಕ್ಕೆ ಕೆಲವು ಮಂದಿ ಜ್ಯೋತಿಷರೂ ಭಟ್ಟರೂ ತಿಳಿಯದವರಿಗೆ ದುರ್ಬೋಧನೆ ಕೊಟ್ಟು ಮಾರ್ಗ ತೋರಿಸುತ್ತಾರೆ; ಯಾಕಂದರೆ ಅವರಲ್ಲಿ ತಿಳಿಯದವರಾಗಿ ತಮ್ಮ ಜಾತಿಯ ಕೆಲಸವೆಂದು ಮಾತ್ರ ಇದನ್ನು ಮಾಡುವದರಿಂದ ಕೇಳುವವರನ್ನು ಮೆಚ್ಚಿಸಲಿಕ್ಕಾಗಿ ಊರಿನ ರಿವಾಜು ಪ್ರಕಾರ ಏನಾದರೂ ಹೇಳುತ್ತಾರೆ. ಆದರೆ ಅವರಲ್ಲಿ ಕೆಲವರು ಒಂದು ಭೂತಭಜನೆ ಮಾಡಿ ಕೊಂಡಿರುತ್ತಾರೆ, ಇಂಥವರನ್ನೂ ಮಾಟ ಮಾಡುವ ಮಂತ್ರವಾದಿಗಳನ್ನೂ ಮೋಸಗಾರರೆಂದು ಜನರು ಹೇಳುತ್ತಾರೆ. ಅಂಥವರಿಗೆ ಒಂದು ತರದಲ್ಲಿ ಭಯ ಪಟ್ಟರೂ ಅವರ ಮಾತಿಗೆ ಕಿವಿ ಕೊಡುತ್ತಾರೆ.

ಚಂದ್ರಭ: ಹಾಗೆ ಮಾಡುವಂಥ ಜನರು ಹ್ಯಾಗಾದರೂ ಕಡಿಮೆ, ಸತ್ಯವಂತರು ಅನೇಕರಿದ್ದಾರೆ.

ಪಾದ್ರಿ: ಆದರೂ ಅಂಥವರು ಸಿಕ್ಕುವ ಪರಿಯಂತರ ಬಹಳ ಹುಡುಕ ಬೇಕು; ನನಗೆ ಇಂದಿನ ವರೆಗೆ ಸಿಕ್ಕಲೇ ಇಲ್ಲ.

ಅವರು ಸ್ವಲ್ಪ ನೆಗಾಡಿ ಸುಮ್ಮನಿದ್ದರು.

ಪಾದ್ರಿ: ಮನುಷ್ಯನಿಗಾಗಲೀ ದನಗಳಿಗಾಗಲೀ ಸಂಕಟ ಬಂದರೆ ಜನರು ಶುಭಾಶುಭ ಸಮಯವೆಂದು ನೋಡಿ ಭಟ್ಟನ ಬಳಿಗೆ ಹೋಗಿ ಪ್ರಶ್ನೆ ನಿಮಿತ್ತ ಜಾತಕ ಮುಂತಾದ್ದನ್ನು ಕೇಳುತ್ತಾರೆ; ಇದರಲ್ಲಿ ಬಹಳ ಸಾರಿ "ಇಲಿಗೆ ಹೆದರಿ ಹುಲಿಯ ಬಾಯಿಯಲ್ಲಿ ಬಿದ್ದ" ಎಂಬ ಗಾದೆಯಂತೆ ಆಗುತ್ತದೆ; ಯಾಕಂದರೆ ಜನರನ್ನು ಪೂರ್ಣವಾಗಿ ತಮ್ಮ ಅಧಿಕಾರದಲ್ಲಿ ಇಟ್ಟು ಕೊಂಡು ನೀಚ ಉದಾಸೀನರಾಗಿ ಬಡವರ ಆಸ್ತಿಯನ್ನು ತೆಗದು ತಿನ್ನುವದು ಇವರ ಅಭಿಲಾಶೆಯಾಗಿದೆ. ನಾನು ಒಂದೊಂದು ಸಾರಿ ಒಬ್ಬ ಭಟ್ಟರ ಸಂಗಡ ಮಾತಾಡಿ ಅವರ ಮೋಸದ ಸಂಗತಿಯನ್ನು ತೋರಿಸಿ, ಶಕ್ತಿ ಇಲ್ಲದವನಿಗೆ ಏನು ಸಹಾಯ ಮಾಡಿದ್ದೀರಿ? ತ್ರಾಣವಿಲ್ಲದವನಿಗೆ ಏನು ರಕ್ಷಣೆ ಮಾಡಿದ್ದೀರಿ? ಜ್ಞಾನವಿಲ್ಲದವನಿಗೆ ಯಾವ ಆಲೋಚನೆ ಹೇಳಿದ್ದೀರಿ? ಸುಜ್ಞಾನವನ್ನು ಬಹಳವಾಗಿ ಬೋಧಿಸಿದ್ದರೆ, ಯಾವನ ಸಂಗಡ ನೀವು ಸತ್ಯ ಮಾತುಗಳಾಡಿದ್ದೀರಿ? ಯಾವನ ಶ್ವಾಸವು ನಿಮ್ಮಿಂದ ಹೊರಡುತ್ತದೆಂದು ಕೇಳುವಾಗ, ಅವರು

ಉತ್ತರ ಕೊಟ್ಟದ್ದೇನಂದರೆ: ನಾವು ಮಾಡುವ ಕೆಲಸ ಮೋಸದ್ದಾಗಿದೆ, ಅಹುದು! ಆದರೂ ಜನರು ನಮ್ಮ ಬಳಿಗೆ ಬಂದು ಕೇಳುತ್ತಾರೆ, ಅದಕ್ಕೆ ತಕ್ಕದ್ದೇನಾದರೂ ಹೇಳ ಬೇಕು; ಅವರಿಗೆ ಸತ್ಯದ ಮನಸ್ಸಿದ್ದರೆ, ಗ್ರಹಿಸಿ ಕೊಳ್ಳ ಬಹುದಾಗಿತ್ತು, ಯಾಕಂದರೆ ನಾವು ಹೇಳುವಂಥಾದಕ್ಕೆ ಮಿಥ್ಯವೆಂಬ ಹೆಸರುಂಟು, ಅದರ ಅರ್ಥ ಸುಳ್ಳು. ಹಾಗಾದರೆ ನಾವು ಜನರು ಆಶೆ ಮಾಡುವ ಪ್ರಕಾರ ಮಾತ್ರ ಇದನ್ನು ಮಾತಾಡುತ್ತೇವೆ. ನೋಡಿರಿ, ಈ ಮಾತುಗಳನ್ನು ಜಟ್ಟರೇ ನನಗೆ ಅರಿಕೆ ಮಾಡಿದ್ದು; ಆದರೆ ಹಾಗಲ್ಲ, ಪ್ರಿಯರೇ! ನೀವು ಸುಳ್ಳನ್ನು ಪ್ರೀತಿ ಮಾಡಿ ಮನಸ್ಸಿಟ್ಟು ಸತ್ಯವಲ್ಲದ್ದನ್ನು ನಡಿಸುತ್ತೀರಿ, ಆದದರಿಂದ ನೀವು ಕಾಠಿಣ್ಯವುಳ್ಳವರಾಗಿದ್ದೀರಿ, ಇನ್ನು ಸತ್ಯದ ಧರ್ಮವನ್ನು ನಿತ್ಯವೂ ಬೊಧಿಸಿದರೆ ಈ ತರದ ಮನಸ್ಸಿಗೆ ಸೊಗಸೀತೇ? ಎಂಬ ಗಾದೆ ನಿಮ್ಮ ಸ್ಥಿತಿಯನ್ನು ತೋರಿಸುತ್ತದೆ.

ರಾಮಶೆ: ಜಟ್ಟರ ವಿಷಯ ಧೊರೆಗಳು ಈ ಪ್ರಕಾರ ಮಾತಾಡುವಾಗ ನಾವು ಇನ್ನೇನು ನೆನಸ ಬಹುದು?

ಪಟಾಳಿ ಪೂ: ಹೀಗೆಯೇ ಮೊನ್ನೆ ಸಹ ತೋರಿಸಿದಿರಲ್ಲ? ಜಟ್ಟರು ಹೇಳುವದು ಮಿಥ್ಯವಾಗಿರುತ್ತದೆಂಬುವದು ಸತ್ಯ! ಆದರೆ ಎಲ್ಲರೂ ಪ್ರಶ್ನೆ ಕೇಳಿ ಮಾಡುತ್ತಾರಪ್ಪಾ.

ಪಾದ್ರೆ: ನಿಮಿತ್ಯ ಹೇಳುವವರು ಪೂರ್ಣವಾಗಿ ಸುಳ್ಳಿನಲ್ಲಿ ಮುಳುಗಿ ಹೋಗಿದ್ದಾರೆಂದು ಕಾಣುತ್ತದೆ; ಹಾಗಾದರೆ ಕೇಳುವವರಿಗೆ ಏನು ಉತ್ತರ ಕೊಡ ಬಹುದು? ಎಂಥಾ ಬುದ್ಧಿ ಹೇಳ ಬಹುದು?

ಪುಟ್ಟಣ್ಣಾಚಾ: ಜನರ ಭ್ರಮೆಗಾಗಿ ಏನಾದರೂ ಮಾಡ ಬೇಕೇ ಹೊರ್ತು ಮತ್ತೇನೂ ಪ್ರಯೋಜನವಿಲ್ಲಾ; ಯಾವದಾದರೂ ಒಂದು ಜೂತಕ್ಕೆ ಸಮವಾದ ಪೂಜೆ ಮಾಡದೆ ಇರುವದರಿಂದಲೋ, ಇಲ್ಲವೇ ಅದು ಅಶುದ್ಧವಾದದರಿಂದಲೋ, ಅಥವ ಕ್ರೂರತ್ವವೂ ರಕ್ತದ ಆಶೆಯೂ ಉಳ್ಳವರಾಗಿರುವವರಿಂದಲೋ ಏನೋ, ಉಪದ್ರವಾಯಿತೆಂದು ಜನರು ನೆನಸುತ್ತಾರೆ; ಇದಕ್ಕೆ ತಕ್ಕದ್ದೇನಾದರೂ ಮಾಡಲಿಕ್ಕೆ ಹೇಳಿದರೆ ಜನರು ಮಾಡುತ್ತಾರೆ, ಇದರಿಂದ ಜನರಲ್ಲಿದ್ದ ಭ್ರಾಂತಿಯು ಹೋಗುತ್ತದೆ. ಇದರಲ್ಲಿ ದೋಷವೇನು?

ಪಾದ್ರಿ: ಈ ವರೆಗೆ ಗೊತ್ತಿಲ್ಲದೆ ಬಂದ ಹೊಸ ಜೂತದ ಉಪದ್ರ ವಾಯಿತೆಂದು ಜಟ್ಟಿರು ಹೇಳಿ, ಈ ಜೂತಕ್ಕೆ ಮಾಡ ಬೇಕಾದ ಕಾರ್ಯ ವನ್ನು ತೋರಿಸುತ್ತಾರೆ. ಮತ್ತು ಮಕ್ಕಳಿಗೆ ಸಂಕಟವಾದರೆ, ದೃಷ್ಟಿ ಬಿತ್ತು, ಇಲ್ಲವೆ ಕೆಟ್ಟ ವಾಗ್ದೋಷವಾಯಿತು, ಈ ಮುಂತಾದ ಕಾರಣಗಳನ್ನು ತೋರಿಸುತ್ತಾರೆ. ಕೇಳುವವನಿಗೆ ಇದರ ವಿಷಯ ಏನೂ ಕಾಣದಿದ್ದರೆ, ಯುಕ್ತಿಯುಳ್ಳ ಜಟ್ಟನು ಇನ್ನೊಮ್ಮೆ ಕವಡಿಗಳನ್ನಿಟ್ಟು ನೋಡುವ ಹಾಗೆ ಮಾಡಿ, ಕೇಳುವವನಿಗೆ ಬೇರೆ ಬೇರೆ ತರದ ಪ್ರಶ್ನೆಗಳನ್ನು ಹಾಕಿ, ಸಂಶಯ ಹುಟ್ಟಿಸಿ, ತಾನು ಹೇಳುವಂಥಾ ಮಾತು ಅವನಿಂದ ಹೊರಡುವ ಹಾಗೆ ಮಾಡುವ ತನಕ ಬಹು ಚಾತುರ್ಯದಿಂದ ತನ್ನ ಮಾತಿನ ಅರ್ಥವನ್ನು ತೋರಿಸಿ ಕೊಟ್ಟು ಕೇಳುವವನು ನಂಬುವ ಹಾಗೆ ಮಾಡುತ್ತಾನೆ. ಅನೇಕರು ಈ ಯುಕ್ತಿಯನ್ನು ಏನೂ ನೋಡದೆ, ಜಟ್ಟನ ಮಾತು ದೇವರು ಹೇಳಿದನೆಂಬಂತೆ ಸ್ವೀಕರಿಸಿ ಅದರ ಪ್ರಕಾರವೇ ಮಾಡುತ್ತಾರೆ. ಜನರು ಒಂದೊಂದು ಸಾರಿ ಅದಕ್ಕೆ ಇನ್ನೂ ಸ್ವಲ್ಪ ಕೂಡಿಸಿ ಹರಿಕೆ ಹೇಳಿ, ಹ್ಯಾಗಾದರೂ ತಮ್ಮ ಅಪೇಕ್ಷೆಯ ಪ್ರಕಾರ ಗುಣವಾಗ ಬೇಕೆಂದು ನೋಡುತ್ತಾರೆ. ಬುದ್ಧಿ ಇಲ್ಲದವರನ್ನು ಈ ಪ್ರಕಾರ ನಡಿಸಿ ಸುಳ್ಳಿನ ಮಾರ್ಗಕ್ಕೆ ತಕ್ಕೊಂಡು ಹೋಗುವದು ದೋಷವಲ್ಲವೋ? ಅದು ಕುರುಡನನ್ನು ಕುಣಿಗೆ ಬೀಳ ಮಾಡಿದ ಹಾಗೆಯೇ ಆಯಿತಲ್ಲವೋ?

ಕೃಷ್ಣರಾ: ನಿಶ್ಚಯವಾಗಿ ಇದು ದೊಡ್ಡ ದೋಷವಾಗಿದೆ!

ಪಾದ್ರಿ: ನಾನೀಗ ಹೇಳಿದ್ದಕ್ಕೆ ಒಂದು ದೃಷ್ಟಾಂತ ನಿಮಗೆ ಕೊಡುತ್ತೇನೆ ಏನಂದರೆ — ಕೆಲವು ಕಾಲದ ಮುಂಚೆ ತನ್ನ ಹೆಂಡತಿಗಾಗಿ ಪ್ರಶ್ನೆ ಕೇಳಲಿಕ್ಕೆ ಜಟ್ಟಿರ ಹತ್ತಿರ ಹೋಗಿ ತಿರಿಗಿ ಬರುವಂಥ ಒಬ್ಬ ಬ್ರಾಹ್ಮಣನನ್ನು ದಾರಿಯಲ್ಲಿ ಕಂಡು ಅವನ ಸಂಗಡ ಮಾತಾಡಿ, ಜಟ್ಟಿರು ಏನು ಹೇಳಿದರೆಂದು ವಿಚಾರಿಸಿದಾಗ, ಆ ಬ್ರಾಹ್ಮಣನು ನನಗೆ ತಿಳಿಸಿದ್ದೇನಂದರೆ — ನಿನ್ನ ಕುಟುಂಬದಲ್ಲಿ ಕೆಲವು ಮಂದಿ ದುರ್ಮರಣವಾಗಿ ಸತ್ತು ಕಲುರುಟ್ಟೀ ಶೆರೆಗೆ ಬಿದ್ದು, ಕೂತು ಕೊಳ್ಳಲಿಕ್ಕೆ ಸ್ಥಳವಿಲ್ಲದವರಾಗಿ ಅಂತರಾಟದಲ್ಲಿ ತಿರುಗಾಡುತ್ತಾರೆ. ಅದು ಯಾಕೆಂದು ಕೇಳಿದ್ದಕ್ಕೆ, ಮೂ

ವರಿದ್ದಾರೆ, ಆದರೆ ಒಂದು ವಿಶೇಷ ಶಿಟ್ಟು ಮಾಡಿದ್ದುಂಟು ಎಂಬ ಉತ್ತರವಾಯಿತು. ಇದಕ್ಕೆ ಏನು ಮಾಡ ಬೇಕೆಂದು ಕೇಳುವಾಗ ಈ ಪ್ರೇತಗಳನ್ನು ಬಿಡಿಸಲಿಕ್ಕೆ ಪ್ರಯಾಸ ಬೇಕು! ಕಲ್ಲುರುಟ್ಟಿಯನ್ನು ನಂಬಿ ಪೂಜಿಸ ಬೇಕೆಂದು ಉತ್ತರವಾದಾಗ, ಇದನ್ನು ಹ್ಯಾಗೆ ಮಾಡ ಬೇಕೆಂದು ಕೇಳಿದೆನು, ಅದಕ್ಕೆ ಭಟ್ಟನು ನನಗೆ ಹೇಳಿದ್ದು: ಬಹಳ ವರುಷಗಳ ಮುಂಚೆ ಕಲ್ಲುರುಟಿಯನ್ನು ನಂಬಿ, ಶಿರಿಗಿ ಬಿಟ್ಟದ್ದಕ್ಕಾಗಿ ಈ ಉಪಹತಿಯು ಬಂತು; ಇದರ ವಿಷಯ ನಾನು ಎಷ್ಟು ಆಲೋಚನೆ ಮಾಡಿದರೂ ಅದು ನನ್ನ ನೆನಪಿಗೆ ಬರಲಿಲ್ಲ; ಆದರೆ ಭಟ್ಟನು ತಾನು ಹೇಳುವ ಹಾಗೆಯೇ ಉಂಟೆಂದು ಮತ್ತೂ ನಿಶ್ಚಯ ಮಾಡಿ ಹೇಳಿದದರಿಂದ ನಾನು ತರ್ಕ ಮಾಡಿ ಏನೂ ಒಪ್ಪಿ ಕೊಳ್ಳದೆ ಇರುವಾಗ, ಭಟ್ಟನು ನನಗೆ ದೃಷ್ಟಾಂತ ಕೊಟ್ಟು ಹೇಳಿದ್ದೇನಂದರೆ: ನೀನು ಚಿಕ್ಕ ಹುಡುಗನಾಗಿರುವ ಸಮಯದಲ್ಲಿ ನಿನ್ನ ತಾಯಿಯು ನಿನ್ನನ್ನು ಕಲ್ಲುರುಟ್ಟಿಯ ಭಜನೆ ಮಾಡಲಿಕ್ಕೆ ನೇಮಿಸಿದಳು. ಇದಕ್ಕೆ ನಾನು ಸಂಶಯ ಪಟ್ಟು ನನ್ನ ತಾಯಿಯು ಸತ್ತು ಹೋಗಿ ಮೂವತ್ತು ವರುಷಗಳಾದದರಿಂದ ಹಾಗೆ ಇರುವದೆಂದು ಹೇಳಿ ನಂಬಿದೆನು. — ಇದು ಮೇಲೆ ಹೇಳಿದ ಒಬ್ಬ ಬ್ರಾಹ್ಮಣನು ನನ್ನ ಸಂಗಡ ದಾರಿಯಲ್ಲಿ ನಡಿಯುತ್ತಾ ಇರುವವನಾಗಿ ಹೇಳಿದ ಅವನ ಸ್ವಂತ ಕಥೆಯಾಗಿದೆ. ಈ ಸಂಗತಿಯನ್ನು ನೋಡುವಾಗ ಅವನ ಮಾತು ಕೆಸರಿನಲ್ಲಿ ನೆಟ್ಟ ಸ್ಥಂಭದ ಹಾಗಲ್ಲವೊ? ಆದರೆ ಆ ಬ್ರಾಹ್ಮಣನು ನಂಬಿ ಮನಸ್ಸಿಟ್ಟು ಹೇಳಿದ ಆ ಮೂವರ ಪ್ರೇತ ನಿವೃತ್ತಿ ಮಾಡಲಿಕ್ಕೆ ಬೇಕಾದ ಕ್ರಿಯೆ ಮಾಡಿ ಕಲ್ಲುರುಟ್ಟಿಯನ್ನು ನಂಬಿದನು. ಇದು ಬುದ್ಧಿಯುಳ್ಳ ಮನುಷ್ಯನಿಗೆ ತಕ್ಕದ್ದೋ? ನಮ್ಮನ್ನುಂಟು ಮಾಡಿದ ದೇವರ ದಯೆಯನ್ನು ಹುಡುಕಿ ಕಷ್ಟದಲ್ಲಿ ಅವನ ಸಹಾಯವನ್ನೇ ಬೇಡಿ ಕೊಳ್ಳ ಬೇಕಲ್ಲವೋ?

ರಾಮಶೆ: ಭೂತಗಳ ಮೂಲವಾಗಿ ದೇವರು ನಮಗೆ ಸಹಾಯ ಮಾಡುತ್ತಾನಲ್ಲವೋ?

ಪಾದ್ರಿ: ಬರಹವಾಗಲಿ ಶಾಸ್ತ್ರವಾಗಲಿ ಏನೂ ತಿಳಿಯದವರು ಹಾಗೆ ಹೇಳುವರು; ಆದರೆ ತಮ್ಮನ್ನು ವಿಶೇಷವಾದ ದೇವರ ಚಾಕ್ರಿಯವರೆಂ

ದು ನೆನಸುವ ಬ್ರಾಹ್ಮಣರು ಈ ಪ್ರಕಾರ ನಂಬಿ ಮಾಡುವದು ತಕ್ಕದ್ದೋ?

ಪುಟ್ಟಣ್ಣಾಚಾ: ಬ್ರಾಹ್ಮಣರು ಬಹಳವಾಗಿ ನಂಬುವದಿಲ್ಲ; ಈ ಕೀಳು ಜಾತಿಯವರು ಮಾತ್ರ ಹಾಗೆ ಮಾಡುತ್ತಾರೆ.

ಪಾದ್ರಿ: ಭೂತಗಳನ್ನು ನಂಬದೆ ಇರುವ ಬ್ರಾಹ್ಮಣರು ಇಲ್ಲಿ ಹ್ಯಾಗಾದರೂ ಕಡಿಮೆ, ನಂಬುವವರು ಅನೇಕರು; ಆದರೆ ಹೆಚ್ಚಾದವರನ್ನು ಬಿಡಿರಿ! ನೀವು ಭೂತಗಣಂಗಳಿಗೆ ಏನೂ ಭಯ ಪಟ್ಟು ಸೇವೆ ಮಾಡುವದಿಲ್ಲವೋ?

ಅದಕ್ಕವರು: ವಿಶೇಷವೇನೂ ಕಾಣುವದಿಲ್ಲ!

ಪಾದ್ರಿ: ಭೂತ, ಪ್ರೇತ, ಮಾರಿ, ನಾಗ, ಕೆಟ್ಟ ಕಣ್ಣು ಮುಂತಾದವುಗಳಿಂದ ಆಗುವ ಉಪದ್ರವನ್ನು ನಡಿಸಲಿಕ್ಕೂ ಪರಿಹರಿಸಲಿಕ್ಕೂ ಮಂತ್ರಗಳನ್ನು ಮಾಡಿ ಮೂಲಿಕೆ ಯಂತ್ರಗಳನ್ನು ಕಟ್ಟಿ ಪೂಜೆ ಮುಂತಾದ ಬೇರೆ ಬುದ್ಧಿಯಿಲ್ಲದ ಕ್ರಿಯಗಳನ್ನು ಮಾಡುತ್ತಾರೆ. ಯಾವವಂದರೆ, ಹುಲಿಯ ಒಂದು ಹಲ್ಲನ್ನಾಗಲೀ ಉಗುರನ್ನಾಗಲೀ ಭಂಗಾರ ಬೆಳ್ಳಿ ಹಿತ್ತಾಳಿ ಮುಂತಾದವುಗಳಿಂದ ಕಟ್ಟಿಸಿ ಕುತ್ತಿಗೆಯಲ್ಲ್ಯಾಗಲೀ ಸೊಂಟದಲ್ಲ್ಯಾಗಲೀ ಕಟ್ಟುತ್ತಾರೆ; ಕಬ್ಬಿಣದ ಉಂಗರವನ್ನು ಮುತ್ತು ಕಲ್ಲಿನ ಸಂಗಡ ಕಟ್ಟುವದೂ, ಇಲ್ಲವೆ ಬೆರಳಿಗೆ ಇಡುವದೂ, ಮುಂಡಾಸಿನಲ್ಲಿ ನಿಂಬೆ ಹಣ್ಣು ಕಟ್ಟುವದೂ, ಹನುಮನ ಪದಕ ಮತ್ತು ಇದಕ್ಕೆ ಸಮವಾದ ಭುಜಪತ್ರೆಯಲ್ಲಿ ಬರಹ ಬರೆಯುವದೂ, ತಗಡು ಬರೆದು ತಾಳಿ ಎಂಬ ಭಂಗಾರ ಬೆಳ್ಳಿ ಹಿತ್ತಾಳಿಗಳಿಂಥ ಮಾಡಿದ ಕೊಳವೆಯಲ್ಲಿ ಹಾಕಿ ಉತ್ತಮ ದಿನವಾಗಿರುವ ಆದಿತ್ಯವಾರ ಇಲವೆ ಮಂಗಳವಾರದಲ್ಲಿ ಶರೀರಕ್ಕೆ ವಿಶೇಷವಾಗಿ ಭುಜಕ್ಕೆ ಕಟ್ಟಿ ಕೊಳ್ಳುವದೂ ಎಲ್ಲಾ ಕೇಡಿಗೆ ವಿಷವೆಂದು ಅನ್ನುತ್ತಾರೆ. ಒಬ್ಬ ಸಂಕಟದವನು ಬಗುಳು ಸನ್ನಿಯುಳ್ಳವನಾಗಿ ಭೂತವು ತನ್ನನ್ನು ಹಿಡಿಯಿತೆಂದು ನೆನಸಿ ಭಯದಿಂದ ಶಿಳಿದಾಗಲಿ ಶಿಳಿಯದೆಯಾಗಲಿ ಮಾತಾಡುತ್ತಿರುವಾಗ ಹತ್ತರದವರು ಸಂಕಟದವನಿಂದ ಭೂತ ಮಾತಾಡುತ್ತದೆಂದು ನೆನಸಿ ಇದಕ್ಕೆ ತಕ್ಕ ಪ್ರಶ್ನೆಯನ್ನು ಹಾಕುತ್ತಾರೆ; ಆಗ ಇಂಥಾ ಸಂಕಟದವನು ಯಾರಾದರೂ ಒಂದು ದಿಕ್ಕಿನಿಂ

ದ ಬಂದು ಭೂತವೆಂದು ಮಾತಾಡುವಷ್ಟರಲ್ಲಿ ಕುಟುಂಬದವರು — ದಮ್ಮಯ ಅವನನ್ನು ಬಿಡ ಬೇಕು! ನೀನು ಏನು ಕೇಳಿದರೂ ನಾವು ಮಾಡಿ ಕೊಡುತ್ತೇವೆಂದು ಹರಿಕೆ ಹೇಳುತ್ತಾರೆ. ಸಂಕಟವು ಕಡಿಮೆಯಾಗದಿದ್ದರೆ ಈ ಪ್ರಕಾರ ಗಲಿಬಿಲಿ ಆಗದೆ ಹ್ಯಾಗಾದರೂ ನಿಮಿತ್ಯ ಕೇಳದೆ ಸುಮ್ಮನೆ ಕೂತು ಕೊಳ್ಳಲಿಕ್ಕಿಲ್ಲ. ಇದರಲ್ಲಿ ಭಟ್ಟನು ಭೂತ ಕೇಳುವದನ್ನೂ ತೋರಿಸುತ್ತಾನೆ. ಕೇಳುವವರ ಸ್ಥಿತಿಗೆ ಮೀರಿ ಕೊಡ ಬೇಕೆಂದು ಹೇಳುವಾಗ ಇದರಿಂದ ಕಡಿಮೆ ಆಗುವ ಹಾಗೆ ಬೇಡಿ ಕೊಂಡು ಅದನ್ನು ಕೊಟ್ಟು ಭೂತವನ್ನು ಮೆಚ್ಚಿಸಲಿಕ್ಕೆ ನೋಡುತ್ತಾರೆ. ಈ ಪ್ರಕಾರ ಒಂದು ಸಾರಿ ಒಂದು ಕಥೆ ಕೇಳಿದೆನು, ಏನಂದರೆ: ಒಬ್ಬ ಒಕ್ಕಲಿಗನಿಗೆ ತನ್ನ ಮಗನಿಗಾಗಿ ನೂರ ಇಪ್ಪತ್ತೈದು ರೂಪಾಯಿ ಮಾತ್ರ ಭೂತಕ್ಕೆ ಖರ್ಚು ಮಾಡ ಬೇಕೆಂದು ಹೇಳಿದಾಗ ಅವನು ತಾನು ಬಡವನಾಗಿರುವದರಿಂದ ತನಗೆ ಕಡಿಮೆ ಮಾಡಿದರೆ ಆದೀತೆಂದು ಬೇಡಿ ಕೊಂಡದ್ದಕ್ಕೆ, ನೂರು ರೂಪಾಯಿ ಕೊಡ ಬೇಕೆಂದು ಹೇಳಿತು. ಇನ್ನೊಂದು ಸಾರಿ ಕಡಿಮೆ ಮಾಡ ಬೇಕೆಂದು ಬೇಡಿ ಕೊಂಡಾಗ ಎಪ್ಪತ್ತೈದು ಎಂತ ಹೇಳಿತು. ಆಗ ಆ ಒಕ್ಕಲಿಗನು ಈ ಹೊತ್ತು ಭೂತಕ್ಕೆ ಒಳ್ಳೇ ದಿವಸವೆಂದು ಬೇಡುತ್ತಾ ಬೇಡುತ್ತಾ ಹೀಗೆ ಆರುವತ್ತು, ಐವತ್ತು, ಮತ್ತು ನಾಲ್ವತ್ತು ಕಡೆಗೆ ಎರಡು ರೂಪಾಯಿ ಮಾತ್ರ ಕೊಡ ಬೇಕೆಂದು ಭೂತವು ಹೇಳಿದಾಗ ಆ ಒಕ್ಕಲಿಗನು ಇನ್ನೊಂದು ಸಾರಿ ಬೇಡಿ ಕೊಂಡು ತಾನು ಬಡವನಾಗಿರುವದರಿಂದ ಕಡಿಮೆ ಮಾಡ ಬೇಕೆಂದು ಹೇಳುವಾಗ ಭೂತ ಶಿಟ್ಟು ಮಾಡಿ ಒಂದು ರೂಪಾಯಿ ಸಾಕು, ಆದರೂ ನೀನು ಹೀಗೆ ಪದೇಪದೇ ಕೇಳಿ ಕರಕರೆ ಮಾಡಿದರಿಂದ ವರುಷ ವರುಷಕ್ಕೆ ಒಂದು ರೂಪಾಯಿ ಖರ್ಚು ಮಾಡ ಬೇಕೆಂಬ ಉತ್ತರ ಆಯಿತಂತೆ. ಹಾಗೆಯೇ ಬೆಳ್ಳಿ ಭಂಗಾರದ ಆಭರಣ ಮುಂತಾದವುಗಳನ್ನು ಹರಿಕೆ ಹೇಳಿ, ಮಾರಿ ಭೂತಗಳಿಗೆ ಹಾಕಲು ಒಳ್ಳೇದಾಗುವದೆಂದು ನೆನಸುತ್ತಾರೆ. ತಾವು ಆಶೆ ಮಾಡಿದ್ದು ದೇವರ ದಯದಿಂದ ಶಿಕ್ಕಿದರೆ ಭೂತ ಒಳ್ಳೇದೆಂದು ಹೇಳುತ್ತಾರೆ, ಆಗದಿದ್ದರೆ ತಿರಿಗಿ ಹರಿಕೆ ಹೇಳಿ ನಿಮಿತ್ತ ಕೇಳುತ್ತಾರೆ, ಆಗ ಸಾಧಾರಣವಾಗಿ ಮಾಡುವವರಲ್ಲಿ ತಪ್ಪು ಆಯಿತೆಂಬ ಉತ್ತರ ಕೊಡುತ್ತದೆ. ಅಪಪಥ್ಯವಾದದರಿಂದ ಇನ್ನೊಂ

ದು ಸಾರಿ ಕ್ರಿಯೆ ಮಾಡ ಬೇಕೆಂದೂ, ಭೂತಕ್ಕೆ ಮೆಚ್ಚಿಕೆಯಾಗದೆ ಅದು ಬಿಡುವದಿಲ್ಲವೆಂದೂ ಅಪ್ಪಣೆ ಆಗುತ್ತದೆ. ಇದನ್ನು ಕೂಡುವಷ್ಟು ಸೂಕ್ಷ್ಮವಾಗಿ ಮಾಡಲಿಕ್ಕೆ ನೋಡುವಷ್ಟರಲ್ಲಿ ಒಂದು ವೇಳೆ ಗುಣವಾದರೆ ಭೂತ ಪರಿಹಾರ ಮಾಡಿತೆಂದು ನೆನಸಿ, ಮೇಲಿಗೆ ಹೆಚ್ಚಾಗಿ ಭಯ ಪಟ್ಟು, ಸೇವೆ ಮಾಡುತ್ತಾರೆ. ಗುಣವಾಗದಿದ್ದರೆ ಅನೇಕ ಸಾರಿ ಭೂತಕ್ಕೂ ಭಟ್ಟನಿಗೂ ಬೈದು ಶಪಿಸುತ್ತಾರೆ. ಹಾಗೆಯೇ ನನ್ನ ಪರಿಚಿತನಾದ ಒಬ್ಬ ಒಕ್ಕಲಿಗನ ಕೂಸಿಗೆ ಸಂಕಟವಾಯಿತು; ಆಗ ಅವನು ನಿಮಿತ್ತ ಕೇಳಿ ತನಗೆ ಅಪ್ಪಣೆ ಆದ ಪ್ರಕಾರ ಸೂಕ್ಷ್ಮವಾಗಿ ಮಾಡಿದನು; ಆದರೂ ಕೂಸು ತೀರಿ ಹೋಯಿತು. ಮತ್ತೊಂದು ಕೂಸಿಗೆ ಸಹ ಸಂಕಟವಾಯಿತು, ತಿರಿಗಿ ನಿಮಿತ್ತ ಕೇಳಲಿಕ್ಕೆ ಹೋಗುವಷ್ಟರೊಳಗೆ ಮೂರನೆದೂ ಅದೇ ರೋಗದಲ್ಲಿ ಬಿತ್ತು; ಆಗ ಬಹಳ ಘಾಬ್ರಿಯಾಗಿ ಭಟ್ಟನು ಹೇಳಿದ್ದನ್ನು ಮಾತ್ರವಲ್ಲ, ಜನರು ಹೇಳುವಂಥಾದ್ದನ್ನು ಸಹ ಕೇಳಿ, ತಾನೂ ಹೆಂಡತಿಯೂ ಹರಿಕೆ ಹೇಳಿದ್ದಲ್ಲದೆ, ಬೇಕಾದಷ್ಟು ಪ್ರಯತ್ನ ಮಾಡಿ ಮಾರಿಗೂ ಸ್ಥಾನದಲ್ಲಿಯೂ ಮನೆಯಲ್ಲಿಯೂ ಇರುವ ಭೂತಗಳಿಗೂ ಪೂಜೆ ಮಾಡಿ, ದೇವಸ್ಥಾನಗಳಿಗೆ ಸಹ ಹರಿಕೆ ಹೇಳಿ, ಬೇರೆ ಇಬ್ಬರು ಭಟ್ಟರನ್ನು ತರಿಸಿ ಕೇಳಿ, ಬಹಳ ವೆಸನದಲ್ಲಿದ್ದನು. ಮಕ್ಕಳಿಗೆ ರೋಗ ಹೆಚ್ಚಾಗಿ ಅವಗುಣವಾಯಿತು ಹೊರ್ತು, ಸ್ವಸ್ಥವಾಗುವದನ್ನು ಕಾಣಲಿಲ್ಲ; ಆಗ ಮುಂಚೆ ಕೇಳಿದ ಭಟ್ಟನ ಬಳಿಗೆ ತಿರಿಗಿ ಹೋಗಿ ಇನ್ನೊಂದು ಸಾರಿ ನಿಮಿತ್ತ ಕೇಳಿದಾಗ, ಪೂಜೆಯಲ್ಲಿ ಒಂದು ತಪ್ಪಾದದರಿಂದ ಗುಣವಾಗುವದಿಲ್ಲವೆಂದು ಹೇಳಿದನು. ಅವನು ಮನೆಗೆ ಬಂದು ಇನ್ನೊಂದು ಸಾರಿ ಪೂಜೆ ಮಾಡಲಿಕ್ಕೆ, ಬಹು ಚಿಂತೆಯಿಂದ, ತನ್ನಿಂದಾಗುವಷ್ಟು ಪ್ರಯತ್ನ ಮಾಡಿ, ಬಹಳ ಸಾಹಿತ್ಯವನ್ನು ಸಿದ್ಧ ಮಾಡಿ ಕೋಲ ಕೊಟ್ಟನು; ಆದರೂ ಮತ್ತೂ ಗುಣವಾಗುವದನ್ನು ಕಾಣದದರಿಂದ ತಿರಿಗಿ ಹೋಗಿ ಕೇಳುವಾಗ, ಏನು ಮಾಡುವ? ಏನಾದರೂ ಅಪಥ್ಯವಾಗಿರ ಬೇಕೆಂದು ಭಟ್ಟನು ಹೇಳಿದನು. ಅವನು ಇದನ್ನು ಕೇಳಿದಾಗ ಅವನಿಗೆ ಬಹಳ ಶಿಟ್ಟು ಬಂತು, ಮತ್ತು ಭಟ್ಟನಿಗೆ: ಹಾಗಾದರೆ ಅಪಥ್ಯವಾಯಿತೆಂದು ಹೇಳುತ್ತೀರೋ? ಹಾಗಲ್ಲ! ಇದು ನನ್ನ ಅ

ದೃಷ್ಟವೆಂದು ಉತ್ತರ ಕೊಟ್ಟು ಎದ್ದು ಮನೆಗೆ ಹೋಗಿ ಅದೇ ಸಿಟ್ಟಿನಿಂದ ಭೂತಗಳನ್ನೂ ಭೂತದ ಮಂಚಪನ್ನೆಲ್ಲಾ ಮಗಚಿ ಅಂದಿನಿಂದ ಈಚೆಗೆ ಭೂತಗಳಿಗಾಗಲೀ ಮಾರಿಗಾಗಲೀ ಪೂಜೆ ಮಾಡುವದೇ ಇಲ್ಲ. ಅದೇ ವರುಷದಲ್ಲಿ ಅವನ ಕುಟುಂಬದಲ್ಲಿ ಕೆಲವು ಮಂದಿಗೆ ಮೈಲೆಗಜ್ಜಿಯಾಗಿ ಶೀರಿ ಹೋಗುವಾಗ, ಇದು ನಿನ್ನ ಗರ್ವದ ಶಿಕ್ಷೆ ಎಂದು ಎಲ್ಲರೂ ಹೇಳಿದರೂ, ಅವನು ತನ್ನ ಮನಸ್ಸಿನಲ್ಲಿ ಸ್ಥಿರವಾಗಿದ್ದು ಭೂತಗಳೆಲ್ಲ ವಂಚಕರೆಂದೂ, ನಿಮಿತ್ತ ಕೇಳುವಿಕೆಯು ಬರೇ ಮೋಸವೆಂದೂ ಈಗಲೂ ಹೇಳುತ್ತಾನೆ. ಕೆಲವು ವಾರಗಳ ಮುಂಚೆ ಅವನ ಸಂಗಡ ಮಾತಾಡುವಾಗ ಭೂತವನ್ನು ತುಚ್ಛೀಕರಿಸಿದಂದಿನಿಂದ ಈಚೆಗೆ ಸುಖ ಉಂಟೆಂದೂ ಮುಂಚೆ ಯಾವಾಗಲೂ ಉಪದ್ರವಿತ್ತು, ಆ ಭೂತದ ಮಂಚವನ್ನು ಮಗಚಿದ ಮೇಲೆ ಏನೂ ಇಲ್ಲವೆಂದೂ ಹೇಳಿದನು.

ಪಾಟಾಳಿ ಪೂ: ಹೌದು ಈ ಪ್ರಕಾರ ಒಂದೊಂದು ಸಾರಿ ಮಾಡುವರು; ಹೀಗೆ ಮಾಡಿಧವನ ಗುರ್ತು ನನಗೂ ಉಂಟು. ಅಪ್ಪಣ್ಣ ಪೂಜಾರಿ ಎಂಬವನು ತನ್ನ ಮನೆಯಲ್ಲಿ ೧೩ ಭೂತಗಳನ್ನು ಸಲುಹಿ ಪೂಜೆ ಮಾಡಿದರೂ ಅವುಗಳಿಂದ ಅವನಿಗೆ ಬಹಳ ಉಪಹತಿ ಆಯಿತು; ಇದರ ವಿಷಯದಲ್ಲಿ ಬಹಳ ಕರಕರೆಯೂ ಸಿಟ್ಟೂ ಉಳ್ಳವನಾಗಿ, ಇನ್ನು ಮುಂದೆ ಈ ಉಪದ್ರವನ್ನು ತಾಳಿ ಕೊಳ್ಳಲಾರೆನೆಂದು ಎಲ್ಲಾ ಭೂತಗಳನ್ನು ತೆಗದು ಹಾಕಿ ಈ ಪ್ರಕಾರ ತನಗೆ ಬಿಡುಗಡೆಯಾಗುವದೆಂದು ನೆನಸಿದನು; ಆದರೂ ಅವನಿಗೆ ಮತ್ತೂ ಕಷ್ಟ ಬಂತು. ಎಂಟು ತಿಂಗಳುಗಳ ಪರ್ಯಂತರ ನೋಡಿ ಕುಟುಂಬದವರು ಅವನಿಗೆ ಹೆಚ್ಚು ಹೇಳಿ ಕೊಟ್ಟದರಿಂದಲೂ, ತನ್ನಲ್ಲಿ ಸಂಶಯ ಹುಟ್ಟಿದರಿಂದಲೂ ಕಡೆಗೆ ಭೂತಸ್ಥಾನವನ್ನು ತಿರಿಗಿ ಸಮ ಮಾಡಿ ಪೂಜೆ ನಡಿಸುತ್ತಾನೆ; ಆದರೆ ಭೂತಗಳ ಉಪದ್ರವು ಮುಂಚಿನ ಹಾಗೆ ಈಗಲೂ ತಡಿಯ ಕೂಡದೆಂದು ನರಳುತ್ತಾನೆ.

ರಾಮಶೆ: ಆಗ ಭೂತಗಳನ್ನು ಬಿಟ್ಟದ್ದಾಗಲಿಲ್ಲವೆಂದು ಕಾಣುತ್ತದೆ.

ಪಾದ್ರಿ: ಹೌದು, ಈ ಪ್ರಕಾರ ಆಗಲಿಲ್ಲ. ಬಹಳ ಭೂತಗಳ

ಪೂಜೆ ಮಂತ್ರ ಮುಂತಾದ ಕೆಟ್ಟ ಕ್ರಿಯೆಗಳಿಂದ ಈ ಜಾತಗಳ ಅಧಿಕಾರಕ್ಕೆ ಬಿದ್ದ ಮೇಲೆ ಅದರ ಕತ್ತಲೆಯ ಬಲದೊಳಗಿಂದ ಮನಸ್ಸು ಬಂದ ಹಾಗೆ ತಪ್ಪಿಸಿ ಕೊಳ್ಳಲಿಕ್ಕೆ ಕೂಡದು; "ಡೊಣ್ಣೀ ಹಿಂಪಿದರೆ ಎಣ್ಣೆ ಬೀಳುವದೇ?" ತಲಾತ ಮರದಿಂದ ತಲಾತ ಹಣ್ಣು ಮಾತ್ರ ಆಗುತ್ತದೆ. ದೇವರು ದಯದಿಂದ ನಮಗೆ ಸಹಾಯ ಮಾಡುವದು ಹೊರ್ತಾಗಿ ಸ್ವಂತ ಬುದ್ಧಿಯಿಂದಲೂ ಸಾಮರ್ಥ್ಯದಿಂದಲೂ ತಪ್ಪಿಸಲಿಕ್ಕಿಲ್ಲ.

ಚಂದ್ರಜ: ಹಾಗಾದರೆ ಕಷ್ಟ ಸಂಕಟಗಳಿರುವಾಗ ನಾವು ಉಪಾಯ ಮಾಡಿ ಮದ್ದು ಕೊಡಲಿಕ್ಕಾಗದೋ?

ಪಾದ್ರಿ: ರೋಗಕ್ಕೆ ತಕ್ಕ ಔಷಧವನ್ನು ತೆಗದು ಕೊಳ್ಳ ಬಾರದೆಂದು ನಾನು ಹೇಳಲಿಲ್ಲ. ಆದರೆ ನಿಮ್ಮ ಔಷಧಗಳಲ್ಲಿ ಬಹಳ ಸಾರಿ ಮಂತ್ರದ ಸ್ವಭಾವವು ಇರುತ್ತದೆ, ಇಲ್ಲವೆ ಮಂತ್ರವಿಲ್ಲದಿದ್ದರೂ ಮಿತಿ ಮಿರಿ ಖಾರವಾಗಿರುವ ಬಹಳ ಔಷದವನ್ನು ಮಾಡಿ ಕೊಡುವದರಿಂದ ಸಂಕಟವಿಲ್ಲದವರು ಸಹ ಅದನ್ನು ತೆಗದು ಕೊಂಡು ಬದುಕುವದು ಪ್ರಯಾಸವಾಗಿರುತ್ತದೆ. ಮತ್ತು ಒಂದೊಂದು ಸಾರಿ ಸಂಕಟದವರ ಅನುಪಾನ ಮಾಡುವದು ಸಹ ಇದಕ್ಕೆ ಸಮವಾಗಿರುತ್ತದೆ; ವಿಶೇಷವಾಗಿ ಒಬ್ಬನನ್ನು ಜಾತ ಹಿಡಿಯಿತೆಂದುನೆನಸುವಾಗ ಬಹಳ ಕ್ರೂರ ಸಂಗತಿಗಳನ್ನು ಮಾಡುತ್ತಾರೆ. ಹೀಗೆ ಮಂತ್ರಗಾರರೂ ವೈದ್ಯರೂ ಜಟ್ಟರೂ ಜಾತಕ ನೋಡುವವರೂ ಯಂತ್ರ ಮಾಡಿ, ನಿವಾಳಿಸಿ ಬಿಸಾಡುವದು ಮುಂತಾದ ಅನಿಷ್ಟ ಕ್ರಿಯೆಗಳನ್ನು ಮಾಡುತ್ತಾರೆ ಹೊರ್ತು, ತಕ್ಕ ಉಪಾಯವನ್ನು ತಿಳಿಯದೆ ಇರುತ್ತಾರೆಂಬುವದನ್ನಲ್ಲದೆ ಅವರಲ್ಲಿ ಶುಮಾರಿನ ಜನರು ಬರಹ ತಿಳಿಯದವರು ಸಹ "ಸಣ್ಣ ತಲೆಗೆ ದೊಡ್ಡ ಮುಂಡಾಸು ಎಂಬ ಹಾಗೆ" ಇದ್ದು, ನಾಚಿಕೆ ಇಲ್ಲದೆ ಮೋಸದಿಂದಲೇ ಕಾಲಕ್ಷೇಪ ಮಾಡುವದನ್ನು ಯಾರೂ ಗಣ್ಯ ಮಾಡುವದಿಲ್ಲವೆಂತ ಕಾಣುತ್ತದೆ.

ಚಂದ್ರಜ: ತನಗಾಗುವದು ಯಾರಿಗಾದರೂ ಗೊತ್ತುಂಟೋ?

ಪಾದ್ರಿ: ಗೊತ್ತಿಲ್ಲ ಸರಿ! ಆದರೆ ತನ್ನದನ್ನು ಗೊತ್ತು ಮಾಡಲಿಕ್ಕೆ ಕೂಡದವನು ಮತ್ತೊಬ್ಬನನ್ನು ಕುರಿತು ಹೇಳ ಬಹುದೇ?

ಪುಟ್ಟಣ್ಣಾಚಾ: ಇದು ಯಾವ ಮನುಷ್ಯನಿಗೂ ಕೂಡದು ನಿಶ್ಚಯ!

ಪಾದ್ರೆ: ನೋಡಿರಿ! ಇಂಥವರ ವಿಷಯದಲ್ಲಿ ಒಂದು ಮಾತು ಉಂಟು ಏನೆಂದರೆ: ನೀವು ಸುಳ್ಳು ಕಲ್ಪಿಸುವವರು, ನೀವೆಲ್ಲರು ಬೊಂಬೆ ವೈದ್ಯರೇ. ನೀವು ಮೌನವಾಗಿಯೇ ಇದ್ದರೆ ಎಷ್ಟೋ ಒಳ್ಳೇದು! ಅದು ನಿಮಗೆ ಜ್ಞಾನವಾಗಿರುವದು. ದಯ ಮಾಡಿ ನನ್ನ ವಾದ ಕೇಳಿರಿ; ನನ್ನ ತುಟಿಗಳ ತರ್ಕಗಳನ್ನು ಆಲೈಸಿರಿ. ದೇವರಿಗೋಸ್ಕರ ನೀವು ಅನ್ಯಾಯ ನುಡಿಯುವಿರೊ? ಅವನಿಗೋಸ್ಕರ ಮೋಸ ನುಡಿಯುವಿರೋ? ಅವನ ಮುಖದಾಕ್ಷಿಣ್ಯ ನೋಡುವಿರೋ? ದೇವರಿಗೋಸ್ಕರ ತರ್ಕ ಮಾಡುವಿರೋ? ಅವನು ನಿಮ್ಮನ್ನು ವಿಚಾರಿಸಿದರೆ, ಒಳ್ಳೇದೋ? ಮನುಷ್ಯನನ್ನು ವಂಚಿಸುವ ಪ್ರಕಾರ, ಅವನನ್ನು ವಂಚಿಸುವಿರೋ? ನೀವು ಅಂತರಂಗವಾಗಿ ಮುಖದಾಕ್ಷಿಣ್ಯ ನೋಡಿದರೆ, ನಿಮ್ಮನ್ನು ಗದರಿಸೇ ಗದರಿಸುವನು. ಅವನ ಘನತೆಯು ನಿಮ್ಮನ್ನು ಹೆದರಿಸುವದಿಲ್ಲವೋ? ಅವನ ಭಯ ನಿಮ್ಮ ಮೇಲೆ ಬೀಳುವದಿಲ್ಲವೋ? ನಿಮ್ಮ ಜ್ಞಾಪಕ ವಾಕ್ಯಗಳು ಬೂದಿಗಾದೆಗಳು; ನಿಮ್ಮ ಡಾಲುಗಳು ಮಣ್ಣಿನ ಡಾಲುಗಳು. (ಯೋಬ್. ೧೩, ೪ — ೧೨.) ಎಲ್ಲರೂ ಇದನ್ನು ತಿಳಿದು ಮೋಸ ಮಾಡುವವರೆಂದು ನಾನು ಹೇಳುವದು ಅವಶ್ಯವಿಲ್ಲ. ಅವರಲ್ಲಿ ಕೆಲವು ಮಂದಿ ಇದು ತಮ್ಮ ಕೆಲಸವೆಂದು ಒಂದು ತರದ ವಿಶ್ವಾಸದಿಂದ ಮಾಡ್ಯಾರು. ಹಾಗಾಗಿದ್ದರೂ ನೀತಿಯೂ ಸತ್ಯವೂ ಸರ್ವತ್ರಾಣವೂ ಉಳ್ಳ ದೇವರ ಸಹಾಯದಿಂದಲೂ ದಯದಿಂದಲೂ ಅವರು ಏನೂ ಮಾಡದೆ ಕತ್ತಲೆಯಾಗಿರುವ ಸೈತಾನನ ಪಿಶಾಚಿ ಭೂತಗಳ ಸಹಾಯದಿಂದ ಮಾತ್ರ ಮಾಡಲಿಕ್ಕೆ ನೋಡುತ್ತಾರೆ. ಅವು ಮಾತ್ರವಲ್ಲದೆ ಇನ್ನು ಮದ್ದು ಮಾಡುವದು ಇದ್ದರೂ ಅದು ಬಹಳ ಸಾರಿ ಮನುಷ್ಯರ ಮೃಗಗಳ ಮೂತ್ರ ಮುಂತಾದ ಹೇಸಿಗೆಯನ್ನು ಬೇರೆ ಒಳ್ಳೇ ಮದ್ದಿಗೆ ಬೆರಕೆ ಮಾಡಿ ಮಂತ್ರ ಯಂತ್ರಗಳನ್ನು ಅದರ ಸಂಗಡ ಕೂಡಿಸುವದು ಮನುಷ್ಯನಿಗೆ ಹ್ಯಾಗಾದರೂ ತಕ್ಕದಲ್ಲವೆಂದು ನೆನಸ ಬೇಕು. ವಿಶೇಷವಾಗಿ ಒಬ್ಬನನ್ನು ಭೂತ ಹಿಡಿಯಿತೆಂದು ನೆನಸುವಾಗ ಅದನ್ನು ಓಡಿಸಲಿಕ್ಕಾಗಿ ಒಂದೊಂದು ಸಾರಿ ಎಂಥಾ ಕ್ರೂರ ಸಂಗತಿಗಳನ್ನು ಮಾಡುತ್ತಾರೆ! ಭೂತ ಹೊರಟಿತೆಂದು ಭೂತ ಪೀಡಿತನು ಯಾವದೊಂದು ತರದಲ್ಲಿ ನಂಬುವಂತೆ ಆದರೆ ಗುಣವಾ

ಗುಣವಾಗುವದು; ಅವನು ನಂಬುವಂತೆ ಮಾಡ ಕೂಡದಿದ್ದರೆ ಗುಣವಾಗುವದಿಲ್ಲ. ಈ ಪ್ರಕಾರ ತನ್ನನ್ನು ಬಿಡುವದಿಲ್ಲವೆಂದು ನೆನಸುವವನು ಸಾಧಾರಣವಾಗಿ ಕೃಶವಾಗಿ ಹೋಗಿ ಕ್ಷಯ, ಜಲೋದರ ಮುಂತಾದ ರೋಗಗಳಿಂದ ಸಾಯುತ್ತಾನೆ. ಭೂತ ಉಪಹತಿ ಎಂಬ ರೋಗಗಳನ್ನು ಇಂಥಾ ನೀಚ ಉಪಾಯಗಳಿಂದ ಪರಿಹಾರ ಮಾಡಲಿಕ್ಕೆ ನೋಡುವವರು ಉಪದ್ರಕ್ಕಿಂತ ಹೆಚ್ಚು ಕೆಟ್ಟವರಾಗಿದ್ದಾರೆ; ಅವರು ಭೂತವನ್ನು ಬಿಡಿಸಲಿಕ್ಕೆ ಉಪಯೋಗಿಸುವ ಕರಣಗಳು ಉಪದ್ರದ ಕೇಡಿಗಿಂತ ಹೆಚ್ಚು ಕೇಡೆಂದು ನೆನಸ ಬೇಕು. ಬಡವರಿಗೆ ಈ ಪ್ರಕಾರ ಮೋಸವಾಗುವದನ್ನು ನೋಡುವದು ದುಃಖದ ಸಂಗತಿಯಾಗೆದೆ; ಅನೇಕರು ಈ ಮೋಸವನ್ನು ತಿಳಿದು ಕೊಂಡರೂ ಅದನ್ನು ಬಿಡಲಿಕ್ಕೆ ಮನಸ್ಸಿಲ್ಲದವರಾಗಿ ಹೆಚ್ಚು ಹೆಚ್ಚಾಗಿ ಅದರಲ್ಲಿ ಮುಣುಗಿ ತಾವು ಅದರಿಂದ ಬಿಡುಗಡೆಯಾಗುವ ಇಚ್ಛೆಯುಳ್ಳವರಾಗಿದ್ದರೂ, ಅದನ್ನು ಕುರಿತು ಚಿಂತಿಸದೆ ಮಾನವನ್ನೂ ಆಸ್ತಿಯನ್ನೂ ಜೀವವನ್ನೂ ಸಹ ಕಳಕೊಳ್ಳುತ್ತಾರೆ. ಇಲ್ಲಲ್ಲಿ ತಿರುಗಿ ಕೊಂಡು ಗುಣವಾಗ ಬೇಕೆಂದು ಹುಡುಕಿ ಹೆಚ್ಚು ಬುದ್ಧಿಹೀನರಾಗಿಯೂ ಬಲಹೀನರಾಗಿಯೂ ಇದ್ದು ನೀರಿನ ಬಾವಿಗಳು ತಮಗೆ ಸಿಕ್ಕದರಿಂದ ನೀರು ಬಯಸುವ ಆಶೆಯಿಂದಲೇ ಸತ್ತು ಹೋಗುತ್ತಾರೆ. ಇದರ ಮೂಲವೇನೆಂಬದಕ್ಕೆ ಯಾವ ಕಾರಣ ಕೊಡ ಬಹುದು? ಅವರು ಕಷ್ಟಪಟ್ಟು ಅರ್ಪಿಸುವದೆಲ್ಲಾ ತಮಗೆ ಸಹಾಯ ಮಾಡಲಿಕ್ಕೆ ಕೂಡುವಂಥ ಒಬ್ಬನೇ ದೇವರಿಗೆ ಅಲ್ಲ, ಅದನ್ನು ದೆವ್ವಗಳಿಗೆ ಅರ್ಪಿಸಿ ಬಯಸುತ್ತಾರೆಂದು ಹೇಳಬೇಕು. ಒಂದೊಂದು ಸಂಕಟದಲ್ಲಿ ಇದಕ್ಕೆ ಹೊಸದಾದ ದೃಷ್ಟಾಂತ ಉಂಟಾಗುತ್ತದೆ; ತಮ್ಮಿಂದ ಆಗುವಷ್ಟು ಸಾಮರ್ಥ್ಯ ಮೀರಿ ಮಾಡಿದರೂ ಸತ್ಯಜ್ಞಾನಕ್ಕೆ ಶೇರುವದಿಲ್ಲ. ಬೆಳಕು ಅವರಿಗೆ ಪ್ರಕಾಶ ಕೊಡುವದಿಲ್ಲ, ವಿವೇಚನಾಮಾರ್ಗವು ಅವರ ಕಣ್ಣುಗಳಿಗೆ ಮರೆಯಾಗುತ್ತದೆ.

ರಾಮಶೆ: ನಮಗೇನು ಕಡಿಮೆ? ಕಷ್ಟ ಮಾಡಿ ತಿಂದು ಸಾಯ ಬೇಕೆಂದು ನೀವು ಹೇಳುತ್ತೀರಿ; ಆಗ ನಿಮ್ಮದೂ ನಮ್ಮದೂ ಗತಿ ಒಂದೇ.

ಪಾದ್ರೆ: ಹೌದು! ಈಗ ಹಾಗೆ ಮಾತಾಡುತ್ತೀರಿ; ಆದರೆ ಕಷ್ಟ ಬಂದು ಸಾಯುವ ಸಮಯದಲ್ಲಿ ನಿಮಗೂ ನಮಗೂ ಹೆಚ್ಚು ಕಡಿಮೆ

ಉಂಟು. ಆಗ ಸಾಯುವವನು ಎಲ್ಲಾ ಬಿಟ್ಟು ಸುತ್ತಲೂ ಕತ್ತಲೆಯಾಗಿದ್ದು ಯಾರಾದರೂ ಹತ್ತರ ಇಲ್ಲದೆ, ಒಬ್ಬನಾಗಿ ಹೋಗ ಬೇಕು; ಒಳಗೆ ಅಂಧಕಾರವೂ ವ್ಯಥೆಯೂ, ಹೊರಗೆ ಚಯವೂ ಇರುವಾಗ ನಿಮಗೆ ಯಾವ ಬೆಳಕು ಪ್ರಕಾಶ ಕೊಡುವದು? ಮತ್ತು ಈಗಲೂ ಈ ಲೋಕದ ಕಷ್ಟದೊಳಗೆ ನಿಮಗೇನು ಸಮಜ್ಜೈಸಿಗೆ ಉಂಟು.

ಪುಟ್ಟಣ್ಣಾಚಾರಿಯರೇ, ನಿಮ್ಮ ಶಾಸ್ತ್ರ ಪುಸ್ತಕಗಳಲ್ಲಿ ಪ್ರಕಾಶ ಕೊಡುವ ಒಂದು ಸತ್ಯದ ಬೆಳಕು ಕಾಣುತ್ತದೋ?

ಅವರು: ಐತರೇಯ ಪ್ರಮಾಣದ II, 7ರಲ್ಲಿ ಅಶ್ವಹೋಮದ ವಿಷಯ ಹೇಳುವದೇನಂದರೆ: ಕುದುರೆಯನ್ನು ಕ್ಕೊಂದು ಅದರ ರಕ್ತವನ್ನು ತೆಗದು ಇದು ಕೆಟ್ಟ ಆತ್ಮಗಳ ಪಾಲೆಂದು ರಾಕ್ಷಸರಿಗೆ ಕೊಡ ಬೇಕು. ಮತ್ತು ಮನುವಿನ ಧರ್ಮಶಾಸ್ತ್ರ III ಅಧ್ಯಾಯದಲ್ಲಿ ಪಿತೃ ಮುಂತಾದ ಒಳ್ಳೇ ಕೆಟ್ಟ ಆತ್ಮಗಳಿಗೆ ಬಲಿಯೂ ಹುತವೂ ಪ್ರಹುತವೂ ಮಾಡ ಬೇಕೆಂದು ವಿವರಿಸಿ ಪಾಪ ಪರಿಹಾರವೂ ಮುಕ್ತಿಯೂ ಹೊಂದಲಿಕ್ಕಾಗಿ ಉಪವಾಸ ಮಾಡಿ, ಚಾಂದ್ರಾಯನ ಮುಂತಾದವುಗಳನ್ನು ಆಚರಿಸ ಬೇಕೆಂದು ವಿಶೇಷವಾಗಿ ಬ್ರಾಹ್ಮಣರಿಗೆ ತೋರಿಸುತ್ತದೆ.

ಪಾದ್ರೆ: ನೀವು ಹೇಳಿದ ಅಶ್ವಹೋಮ ಮುಂತಾದವುಗಳನ್ನೂ ಆಚಾರಗಳನ್ನೂ ಈಗ ಯಾರು ಮಾಡುತ್ತಾರೆ? ಮಾಡಿದರೆ ಅದರಿಂದ ಪ್ರಯೋಜನವೇನು?

ಆಗ ಅವರು: ಶಾಸ್ತ್ರದಲ್ಲಿರುವದನ್ನು ಹೇಳುತ್ತೇವೆ ಮಾತ್ರ; ಋಗ್ವೇದದ ಗೃಹಸೂತ್ರದಲ್ಲಿಯೂ ಅದ್ಭುತ ಪ್ರಮಾಣದಲ್ಲಿಯೂ ಉಪದ್ರವನ್ನು ಪರಿಹಾರ ಮಾಡುವಂಥ ಬಲಿಗಳನ್ನು ಕುರಿತು ಹೇಳಿಯದೆ.

ಪಾದ್ರೆ: ಆದೇ ಪ್ರಕಾರ ಉಪದ್ರಗಳನ್ನು ನಿಲ್ಲಿಸಿ ಅವುಗಳ ಪರಿಹಾರ ಮಾಡುವ ಕರಣವಾಗಿರುವ ಗಾಯತ್ರಿಯೂ ಬೇರೆ ಬೇರೆ ಮಂತ್ರಗಳೂ ಧರ್ಮಶಾಸ್ತ್ರದಲ್ಲಿ ತೋರುತ್ತವೆ; ಆದರೆ ಮುಂಚೆ ತೋರಿಸಿದ ಹಾಗೆ ಇದರಿಂದ ಏನು ಪ್ರಯೋಜನ? ಉಂಟೆಂದು ನೆನಸುವ ಪಕ್ಷಕ್ಕೆ ಅದನ್ನರಿಯದ ಕೀಳು ಜಾತಿಯವರಿಗೆ ಅದರಿಂದ ಪ್ರಯೋಜನವೇನು?

ಚಂದ್ರಪ್ರಚ: ಗಾಯತ್ರಿಯ ವಿಷಯದಲ್ಲಿ ನಾರಾಯಣೋಪನಿಷತ್ತು

ಹೇಳುವದೇನಂದರೆ — ಮುಖವನ್ನು ಸೂರ್ಯನ ಕಡೆಗೆ ತಿರುಗಿಸಿ ಗಾಯತ್ರಿಯನ್ನು ಪದೆ ಪದೆ ಹೇಳುವವನು ಭಯದಿಂದಲೂ ಸಂಕಟದಿಂದಲೂ ಕಷ್ಟದಿಂದಲೂ ಎಲ್ಲಾ ಉಪದ್ರಗಳಿಂದಲೂ ಬಿಡುಗಡೆಯಾಗುತ್ತಾನೆ. ಮತ್ತು ಗರುಡ ಪುರಾಣದಲ್ಲಿ ಪ್ರೇತೋದ್ಧಾರ ಆಗುವ ಮಾರ್ಗದ ವಿಷಯದಲ್ಲಿ ನಾವು ಓದುವದೇನಂದರೆ:

ಪ್ರೇತತ್ವದ ಮುಕ್ತಿ.

ವಿಷ್ಣು ಪೂಜೆಯೂ ಪರಿತತ್ವಕಾರಿಣಿಯೂ ಎರಡು ತೂಕ ಚಿನ್ನವೂ ಸ್ವಂತಾರ್ಜಿತದ್ದು ಆಗಿರ ಬೇಕು.

ಅದರಿಂದ ನಾರಾಯಣನ ಒಂದು ಪ್ರತಿಮೆ ಮಾಡ ಬೇಕು; ಅರಸಿನ ಬಣ್ಣದ ಒಂದು ವಸ್ತ್ರ ಉಡಿಸಿ ಇನ್ನೊಂದು ಹೊಂದಿಸಿ ಎಲ್ಲಾ ಆಭರಣಗಳಿಂದ ಅಲಂಕರಿಸಿ,

ನಾನಾ ತರದ ಉತ್ತಮ ನೀರುಗಳಿಂದ ಅಭಿಷೇಕ ಮಾಡಿ ಪೂಜಿಸ ಬೇಕು; ಪೂರ್ವ ದಿಕ್ಕಿನಲ್ಲಿ ಶ್ರೀಧರನನ್ನೂ, ದಕ್ಷಿಣ ದಿಕ್ಕಿನಲ್ಲಿ ಮಧುಸೂದನನನ್ನೂ,

ಪಶ್ಚಿಮ ದಿಕ್ಕಿನಲ್ಲಿ ವಾಮನನನ್ನೂ, ಉತ್ತರದಲ್ಲಿ ಗಧಾಧರನನ್ನೂ, ಮಧ್ಯದಲ್ಲಿ ಬ್ರಹ್ಮನನ್ನೂ, ಹಾಗೆ ಮಹೇಶ್ವರನನ್ನೂ,

ಗಂಧ, ಹೂ, ದೀಪಾದಿಗಳಿಂದ ಪ್ರತ್ಯಪ್ರತ್ಯೇಕ ಪೂಜೆ ಮಾಡಿ ಆ ಮೇಲೆ ಅವುಗಳಿಗೆ ಪ್ರದಕ್ಷಿಣೆ ಮಾಡಿ, ಅವುಗಳ ಎದುರಿಗೆ ಹೋಮದಿಂದ ಎಲ್ಲಾ ದೇವತೆಗಳಿಗೂ ತೃಪ್ತಿ ಪಡಿಸ ಬೇಕು.

ತುಪ್ಪ, ಮೊಸರು, ಹಾಲು ಇವುಗಳಿಂದ ವಿಶ್ವೇದೇವತೆಗಳನ್ನು ತರ್ಪಿಸ ಬೇಕು; ಅನಂತರ ಆ ಯಜಮಾನನು ಇನ್ನೊಮ್ಮೆ ಸ್ನಾನ ಮಾಡಿ ಶುಚಿಯಾಗಿ,

ಆ ಭಂಗಾರದ ನಾರಾಯಣನ ಎದುರಿಗೆ ಸತ್ತವನಿಗೆ ಕ್ರಿಯೆಗಳನ್ನು ಕ್ರೋಧ ಲೋಭ ಇಲ್ಲದೆ ಭಕ್ತಿಯಿಂದ ಮಾಡ ಬೇಕು.

ಎಲ್ಲಾ ಶ್ರಾದ್ಧಗಳು ಮಾಡ ಬೇಕು; ಆ ಮೇಲೆ ಗೂಳಿಯನ್ನು ಸತ್ತವನ ಹೆಸರಿನಿಂದ ಬಿಡ ಬೇಕು. (ಆ ಕಾರ್ಯವು ವೃಷೊತರ್ಷ) ಆ

ಮೇಲೆ ೧೩ ಪಾತ್ರೆಗಳಲ್ಲಿ ಅಕ್ಕಿ, ಬೇಳೆ, ತುಪ್ಪ ಮೊದಲಾದ ಭೋಜನ ಸಾಹಿತ್ಯವು ಕೊಡ ಬೇಕು.

ಹಾಸಿಗೆದಾನ ಮಾಡ ಬೇಕು; ಆ ಮೇಲೆ ಅಶ್ವದಾನ ಮಾಡ ಬೇಕು; ಭಂಗಾರದ ತಂಬಿಗೆಯಲ್ಲಿ ಹಾಲು, ತುಪ್ಪ ತುಂಬಿ, ಧೂಪ ದೀಪಾದಿಗಳಿಂದ ಪೂಜೆ ಮಾಡಿ, ದಾನ ಮಾಡ ಬೇಕು.

ಸರ್ವ ದಾನಕ್ಕೂ ಹೆಚ್ಚಿನ ದಾನ ಮಹಾಪಾತಕ ನಾಶನ—ಇದರಿಂದ ಪ್ರೇತೋದ್ಧಾರ ಆಗುತ್ತದೆ.

ಪಾದ್ರೆ: ಇದು ಬರೇ ಮಾತು; ಅದರ ಪ್ರಕಾರ ಮಾಡಿದರೆ ಏನಾದರೂ ಆಗುವದಿಲ್ಲ! ಅದು ಹೊರ್ತಾಗಿ ಮುಂಚೆ ಹೇಳಿದ ಹಾಗೆ ಇದು ಬ್ರಾಹ್ಮಣರಿಗೆ ಮಾತ್ರ ಇರುತ್ತದೆ. ಕೆಲವು ಶಾಸ್ತ್ರ ಪುಸ್ತಕಗಳಲ್ಲಿ ಕೀಳು ಜಾತಿಯವರಿಂದಲೂ ಮಾಡ ಬಹುದಾದ ಮಂತ್ರಗಳನ್ನು ತೋರಿಸಿ, ಅವರು ಅದನ್ನು ಮಾಡಲಿಕ್ಕೆ ತಕ್ಕ ಮಾರ್ಗವನ್ನು ತಿಳಿಸುತ್ತದೆ; ಹಾಗೆಯೇ ಮಂತ್ರಶಾಸ್ತ್ರದಲ್ಲಿ ಕೆಟ್ಟ ಆತ್ಮಗಳನ್ನೂ ಅವುಗಳ ಉಪಹತಿಯನ್ನೂ ಓಡಿಸುವ ಜಯಮೃತಿ, ಸಂಭಾನ, ಅಕ್ಷರಹನ, ಉಚ್ಚಾಟನ ಮುಂತಾದ ಮಂತ್ರಗಳು ಬರದವೆ. ಮಾರ್ಕಂಡೇಯ ಪುರಾಣದಲ್ಲಿ ಚಂಡಿಪತಿ ಎಂಬ ಮಂತ್ರದ ವಿಷಯ ಹೇಳುವದೇನಂದರೆ; ಈ ಮಂತ್ರ ಇದ್ದವನ ಮುಂದೆ ಭೂತ, ಗ್ರಹ, ಪಿಶಾಚಿ, ಯಕ್ಷ, ಬ್ರಹ್ಮರಾಕ್ಷಸ, ಬೇತಾಳ, ಭೈರವನು ಮುಂತಾದ ಎಲ್ಲಾ ಅಶುದ್ಧ ಆತ್ಮಗಳು ಓಡಿ ಹೋಗುತ್ತವೆ.

ಪುಟ್ಟಣ್ಣಾಚಾ: ಕರ್ಮಖಂಡದ ತರ್ಪಣ ಮಾಡುವವನು ಹೇಳಬೇಕಾದ ಮಾತು ಹೇಳುತ್ತದೆ, ಯಾವದಂದರೆ: ಪಿತೃಗಳೊಳಗೆ ಮಿಂಚು ಹೊಡದು, ಕಳ್ಳರ ಕೈಯಲ್ಲಿ ಬಿದ್ದು, ಮೃಗಗಳಿಂದ ಶೀಳಲ್ಪಟ್ಟು, ಎತ್ತು ಗೋವು ಹಾಯಿದು ಸತ್ತು ಹೋದವನನ್ನು ಬಿಡಿಸಲಿಕ್ಕಾಗಿ ಈ ಕಾರ್ಯ ಮಾಡುವದಾಗಿರುತ್ತದೆ.

ಪಾದ್ರೆ: "ಮಂತ್ರಿಸಿದರೆ ಮಾವಿನ ಕಾಯಿ ಬಿದ್ದೀತೇ?" ಎಂಬಂತೆ, ನೀವು ಈಗ ಹೇಳಿದ್ದನ್ನು ಸೂಕ್ಷ್ಮವಾಗಿ ಮಾಡಿದರೂ ಬಿಡುಗಡೆಯೂ ಪರಿಹಾರವೂ ಪೂರ್ಣ ಸಮಾಧಾನವೂ ಯಾರಿಗೂ ಸಿಕ್ಕುವದುಂಟೋ? ಯಾರಿಗೂ ಇಲ್ಲ! ಯಾಕಂದರೆ ಇವು ನಿಸ್ಸಮ್ಮಂಥವಾದ ಕಾರ್ಯಗ

ಳಾಗಿರುತ್ತವೆ. ಮತ್ತು ಇಂಥವುಗಳಿಂದ ಒಬ್ಬನು ಎಂದೂ ತನ್ನ ಪುರುಷಾರ್ಥವು ನೆರವೇರುವದೆಂದು ನಿರೀಕ್ಷಿಸುವದು ವ್ಯರ್ಥ. “ನೋಟವಿಲ್ಲದೆ ಓಟ ಮಾಡಿದರೆ ಕಾಟ ತಪ್ಪದು” ಎಂಬ ಗಾದೆ ಸತ್ಯವೇ. ಇದನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿದರೆ, ದೊಡ್ಡ ಕರೆಕರೆಯಾಗಿರುವ ಕಂಗಾಲಿನ ಸ್ಥಿತಿ ಎಂದು ಹೇಳ ಬೇಕು. ಅದರಲ್ಲಿ ಸ್ವಲ್ಪ ಮಾತ್ರ ಸತ್ಯ ಉಳಿಯಿತು, ಖರೆ! ಭಾಗವತ ಪುರಾಣದಲ್ಲಿ ಅಜಾಮಿಳನ ಕಥೆಯಲ್ಲಿ ಹೇಳುವ ಪ್ರಕಾರ ನಾರಾಯಣನೆಂಬ ಹೆಸರು ಮಾತ್ರ ಕರೆಯುವಾಗ ಎಲ್ಲಾ ಕೇಡಿನಿಂದಲೂ ನರಕದ ಶ್ರಮದಿಂದಲೂ ಸಹ ಬಿಡುಗಡೆಯಾಗುತ್ತದೆಂದು ಹೇಳಿಯದೆ; ಹೌದು ಕರ್ತನ ಹೆಸರನ್ನು ಸ್ಮರಣೆ ಮಾಡುವವನು ಯಾರೋ, ಅವನು ರಕ್ಷಣೆ ಹೊಂದುವನು ಎಂಬ ದೇವರ ವಾಕ್ಯ ಉಂಟು. ಆದರೆ ದೇವರು ಪಾಪಿಷ್ಠರನ್ನು, ಅಂದರೆ ಪಾಪವನ್ನು ಪ್ರೀತಿ ಮಾಡುವವರನ್ನು ಕೇಳದೆ, ಪಾಪದ ವಿಷಯದಲ್ಲಿ ಮಾನಸಾಂತರ ಪಡಕೊಳ್ಳುವವರನ್ನು ಮಾತ್ರ ಕೇಳುತ್ತಾನೆ. ಜನರು ನಾರಾಯಣನೆಂಬ ಹೆಸರು ಎಷ್ಟು ಸಾರಿ ಸುಮ್ಮನೆ ಹೇಳಿ ಕರೆಯುತ್ತಾರೆ! ಅವರಿಗೆ ಸಹಾಯ ಸಿಕ್ಕುತ್ತದೋ? ಅದನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿ ನೋಡಿದರೆ, ಎಲ್ಲಾ ಮನುಷ್ಯರನ್ನು ಪಾಪದಿಂದ ಬಿಡಿಸಲಿಕ್ಕೆ ಕೂಡದೆ ಇರುವ ಅದು ಅವರ ಕಣ್ಣು ಕಟ್ಟಿ ಅವರನ್ನು ಕೆಡಿಸಿ ತಿಳಿಯದೆ ನಾಶನಕ್ಕೆ ವೈಯಲಿಕ್ಕೆ ಮಾಡಿದ್ದೆಂದು ಹೇಳ ಬೇಕು.

ರಾಮಶೆ: ನಮ್ಮ ಭೂತಗಳ ವಿಷಯ ಯಾಕೆ ಶಾಸ್ತ್ರವನ್ನು ಹುಡುಕುತ್ತೀರಿ? ಭೂತಗಳು ನಮಗೇನು ಮಾಡ ಬೇಕೆಂಬದನ್ನು ನಾವೇ ಅವುಗಳಿಗೆ ಹೇಳುತ್ತೇವೆ; ಮತ್ತು ಅವುಗಳಿಗೆ ತಕ್ಕ ಕಾರ್ಯ ಮಾಡಲು, ನಾವು ಹೇಳುವ ಪ್ರಕಾರವಾಗುತ್ತದೆ.

ಪಾದ್ರಿ: ಹೌದು ಆಗುತ್ತದೆ, ಯಾವದೆಂದರೆ, ನೀವು ಜೀವದಲ್ಲಿರುವವರೆಗೆ ಇರುಳು ಹಗಲು ಭಯ ಪಡುವದೂ ರಾತ್ರಿಯಲ್ಲಿ ಯಾರಾದರೂ ಒಬ್ಬನಾಗಿ ಮನೆಯಿಂದ ಹೊರಡದ ಹಾಗೆ ಆಗುವದೂ ಉಂಟು; ಇದು ಒಳ್ಳೇದೊ?

ನೋಡಿರಿ, ಶರೀರಾತ್ಮ ಪ್ರಾಣವುಳ್ಳ ಮನುಷ್ಯನು ಭೂಲೋಕದ ಸೃಷ್ಟಿಯ ಕಿರೀಟವಾಗಿರುತ್ತಾನೆ; ಅವನು ದೇವರ ಎಲ್ಲಾ ಕ್ರಿಯೆಗಳಲ್ಲಿ ರ

ಷ್ಯವೂ ಮುಖ್ಯವೂ ಆಗಿರುತ್ತಾನೆಂಬು ಅವನ ದೇಹದ ಆಕಾರವೂ ಚಾವವೂ ತೋರಿಸುತ್ತದೆ. ಶರೀರಚಾವವನ್ನು ಮಾತ್ರ ನೋಡುವಾಗ ಬೇರೆ ಬೇರೆ ಜೀವರಾಶಿಗಳಿಂದ ಅವನನ್ನು ವಿಂಗಡಿಸಿ ದೊಡ್ಡವನೂ ಉತ್ತಮನೂ ಎಂದೂ, ಮೇಲಿರುವ ಆತ್ಮಗಳ ಲೋಕದ ಐಕ್ಯದಲ್ಲಿ ಜೀವವುಳ್ಳವನೆಂದು ಕಾಣಿಸುವದೂ ಬಹಳ ತರದಲ್ಲಿ ತಿಳಿದು ಕೊಳ್ಳ ಬಹುದು. ಆದರೆ ಈ ಶರೀರಚಾವದ ದೊಡ್ಡಸ್ಥಿಕೆ ಅಲ್ಲದೆ ಬೇರೆ ಯಾವ ಸೃಷ್ಟಿಯಲ್ಲಿಯೂ ಕಾಣ ಬಾರದಂಥ ವಿಶೇಷವಾದ ಬಲಹೀನತ್ವವು ಸ್ಪಷ್ಟವಾಗಿಯೂ ಆಶ್ಚರ್ಯವಾಗಿಯೂ ಕಾಣ ಬರುತ್ತದೆ; ಅದರ ವಿಷಯವಾಗಿ ಧರ್ಮಶಾಸ್ತ್ರದ ೬ನೇ ಅಧ್ಯಾಯದಲ್ಲಿ ಸಹ ಒಂದು ಮಾತು ಉಂಟು; ಯಾವದಂದರೆ ಕೋಲು ಕಂಚವಾಗಿರುವಂಥಾ ನರಗಳಿಂದ ಯುಕ್ತವಾದಂಥಾ ಮಾಂಸ ರಕ್ತಗಳ ಲೇಪವುಳ್ಳಂಥ ಚರ್ಮದಿಂದ ಮುಚ್ಚಲ್ಪಟ್ಟಂಥ ಮಲಮೂತ್ರಗಳ ನಾತದಿಂದ ಚರಿತವಾದಂಥಾ ಮುಪ್ಪುದುಃಖಗಳಿಂದ ತುಂಬಿದಂಥ ರೋಗದ ಮನೆಯಾಗಿರುವಂಥಾ ವ್ಯಥೆಯುಳ್ಳಂಥಾ ಅಶುದ್ಧ ರಕ್ತದಿಂದ ಹುಟ್ಟಿದಂಥ ಅನಿತ್ಯವಾದಂಥ ಪಂಚಭೂತಗಳ ವಾಸಸ್ಥಾನವಾಗಿರುವ ಮನುಷ್ಯ ಶರೀರ ಉಂಟು.

ಕೃಷ್ಣರಾ: ಇದು ಖರೆ!

ಪಾದ್ರಿ: ಖರೆ ಮಾತ್ರವಲ್ಲ, ಇದು ದೊಡ್ಡ ದುಃಖದ ಸಂಗತಿಯಾಗಿರುತ್ತದೆ. ನೋಡಿರಿ, ಒಂದೊಂದು ಮೃಗವು ಹುಟ್ಟಿ ಕೆಲವು ಘಳಿಗೆ ಇಲ್ಲವೆ ದಿವಸಗಳ ವರೆಗೆ ಎಲ್ಲಾ ಅಂಗಗಳ ಅಭ್ಯಾಸ ಮಾಡಿ ತನ್ನ ಜಾತಿಯವುಗಳ ಹಾಗೆ ನಡದು ಹಾರುತ್ತಾ ಓಡ್ಯಾಡಿ ಹೋಗುತ್ತಾ ಬರುತ್ತಾ ಇರ ಬಹುದು; ಆದರೆ ಮನುಷ್ಯನು ಹುಟ್ಟಿ ಸ್ವತಂತ್ರವುಳ್ಳವನಾಗಿ ತನ್ನ ಕೈ ಕಾಲು ಮುಂತಾದ ಅಂಗಗಳ ಅಭ್ಯಾಸದವನಾಗುವ ವರೆಗೆ ತಿಂಗಳುಗಳು ಮಾತ್ರವಲ್ಲ, ವರ್ಷಗಳು ಸಹ ಹೋಗುತ್ತವೆ. ಪರಿಪಾಲಿಸುವವರಿಗೆ ಅಷ್ಟರೊಳಗೆ ಎಷ್ಟೋ ಕಷ್ಟವಾಗುತ್ತದೆ! ಇದಲ್ಲದೆ ಮೃಗಗಳಿಗೆ ರೋಗವೂ ನೋವೂ ಕಷ್ಟವೂ ಆಗುವದು ಬಹಳವಾಗಿದ್ದರೂ ಅದರಂತೆ ಮನುಷ್ಯ ಜಾತಿಯಲ್ಲಿ ಒಂದು ದೊಡ್ಡ ಸೈನ್ಯದ ಹಾಗೆಯೇ ಆಗಿರುವ ರೋಗ ಸಂಕಟ ನೋವುಗಳನ್ನು ನೋಡುತ್ತೇವೆ. ಇದರಲ್ಲಿ ಕ್ಷಣದಲ್ಲಿ

ಆಗುವಂಥ ದಿವಸ ತಿಂಗಳು ವರುಷಗಳು ಒಂದೊಂದು ಸಾರಿ ಜೀವ ಹೋಗುವ ತನಕ ಇರುವಂಥಾ ಬಹಳ ಕಷ್ಟಗಳನ್ನು ಕಾಣ ಬಹುದು. ಮನುಷ್ಯನು ಒಂದು ತರದಲ್ಲಿ ಎಲ್ಲಾ ಸೃಷ್ಟಿಗಿಂತ ಸುಂದರನೂ ಮುಖ್ಯಸ್ಥನೂ ಆಗಿದ್ದು ಇಂಥಾ ಬಲಹೀನನಾಗಿ ಕಾರುಣ್ಯಕ್ಕೆ ತಕ್ಕವನೂ ಸಹಾಯ ಬೇಕೆಂಬುವವನೂ ಆಗಿರುವ ಸ್ಥಿತಿಯು ಎಲ್ಲಿಂದುಂಟಾಯಿತು? ಇದು ಎಲ್ಲಾ ಮುಂಚೆ ತೋರಿಸಿದ ಪ್ರಕಾರ ಪಾಪದಿಂದಲೇ ಹುಟ್ಟಿ ಅದಕ್ಕೆ ನಿರ್ಣಯಿಸಿದ ಸಂಬಳವಾಗಿದೆ. ಪಾಪಪರಿಹಾರವಾಗದೆ ಇರುವಲ್ಲಿಯೇ ಅದರಿಂದ ಹುಟ್ಟುವ ಕಷ್ಟವೂ ನೋವೂ ಬಲಹೀನತ್ವವೂ ಉಂಟು. ಇಂಥಾದ್ದಕ್ಕೆ ವಿರೋಧವಾಗಿ ನಿಂತು ಪಾಪದಿಂದಲ್ಲ, ಅದರಿಂದ ಹುಟ್ಟುವ ಶಿಕ್ಷೆಯಿಂದ ಮಾತ್ರವೇ ಬಿಡುಗಡೆ ಹುಡುಕಿದರೂ ಸಿಕ್ಕದು. ರೋಗಗಳನ್ನು ಸ್ವಲ್ಪ ಗುಣ ಮಾಡಿ ನೋವುಗಳನ್ನು ತತ್ಕಾಲಕ್ಕೆ ಪರಿಹರಿಸುವ ಮದ್ದುಗಳನ್ನು ದೇವರು ನಮಗೆ ಕೊಟ್ಟನು; ಆದರೆ ಇವುಗಳಿಂದ ಪೂರ್ಣ ಗುಣವಾಗಿ ಇನ್ನು ಮೇಲೆ ಏನೂ ರೋಗ ಸಂಕಟ ಬಾರದ ಹಾಗೆ ಮಾಡುವಂಥ ಒಳ್ಳೇ ಖಾರವೂ ತ್ರಾಣವೂ ವುಳ್ಳಂಥ ಮದ್ದು ಕೊಟ್ಟರೂ ನಡಿಯಲಿಲ್ಲ. ಅದೇ ಪ್ರಕಾರ ಅಷ್ಟು ಬುದ್ಧಿ ಸಾಮರ್ಥ್ಯಗಳಲ್ಲಿ ಹೆಸರು ಹೋದ ವೈದ್ಯನು ಮದ್ದು ಸಮವಾಗಿ ಆದು ಕೊಂಡು ಮಾಡುವದರಿಂದ ಮಾತ್ರ ಗುಣವಾಗುವದಿಲ್ಲ. ಅದು ನಮ್ಮ ಶರೀರದಲ್ಲಿ ಜೀವ ಬಲ ತ್ರಾಣಗಳನ್ನು ದಯೆಯಿಂದ ಕೊಟ್ಟು ಕಾದಿರುವ ದೇವರಿಂದಲೇ ಮಾತ್ರ ಆಗುವ ಕೆಲಸವಾಗಿರುತ್ತದೆ. ಈ ಪ್ರಕಾರ ಅನೇಕ ರೋಗಗಳು ಏನೂ ಮದ್ದು ಮಾಡದೆ ಇದ್ದರೂ ಒಂದೊಂದು ಸಾರಿ ಆಗದ ಮದ್ದು ಸಹ ಕೊಟ್ಟರೂ ತಮ್ಮಷ್ಟಕ್ಕೆ ಗುಣವಾಗುತ್ತವೆ; ಇಂಥಾ ಸಾಮರ್ಥ್ಯವನ್ನು ದೇವರು ಶರೀರದಲ್ಲಿಯೇ ಇಟ್ಟಿದ್ದಾನೆಂದು ನಾವು ದಿನಾಲೂ ನೋಡ ಬಹುದು. ಶರೀರಕ್ಕೆ ಅಹಿತವಾದ ಹೇಶಿಗೆ ತನ್ನಷ್ಟಕ್ಕೆ ಹೊರಟು ಹೋಗುವದಲ್ಲದೆ ಕೆಟ್ಟ ಬಾವು ಮೊದಲಾದದ್ದು ಒಡಿಯುತ್ತದೆ; ವಿಶೇಷವಾಗಿ ಬಾಯಿ ಬಾರದ ಮಕ್ಕಳಿಗೆ ಆಗುವ ಅನೇಕ ರೋಗಗಳನ್ನು ನೋಡುವವರು ಅದನ್ನು ಏನೆಂದು ತಿಳು ಕೊಳ್ಳದೆ ಕೂಸು ತನ್ನ ನೋವನ್ನು ಹೇಳ ಕೂಡದೇ ಇರುವದರಿಂದ ಅದಕ್ಕೆ ತ

ಕ್ಕ ಔಷಧವನ್ನು ಮಾಡಲಿಕ್ಕೆ ಕೂಡದೆ ಇದ್ದರೂ ಒಂದೊಂದು ಸಾರಿ ಆಶ್ಚರ್ಯವಾಗಿ ತನ್ನಷ್ಟಕ್ಕೆ ಬೇಗ ಗುಣವಾಗುತ್ತದೆ. ಮನುಷ್ಯರಿಗೆ ಆ ಗುಮಂಥಾ ಸಂಕಟಗಳ ಅರೆವಾಶಿ ಹ್ಯಾಗಾದರೂ ಮದ್ದು ಕೊಡದೆ ಆರೈಕೆ ಮಾಡಿ, ಶರೀರದ ಅನುಪಾನ ತಕ್ಕ ಮಟ್ಟಿಗೆ ಮಾಡಿ, ಸಾಧಾರಣ ಪತ್ಯದಿಂದ ಇದ್ದು, ಷಾಳಿ ಮುಂತಾದ್ದು ತಗಲದ ಹಾಗೆ ನೋಡುತ್ತಾ ಇದ್ದರೆ, ತನ್ನಷ್ಟಕ್ಕೆ ಗುಣವಾಗುತ್ತದೆ.

ರಾಮಶೆ: ಹಾಗಾದರೆ ಮದ್ದು ಮಾಡ ಬೇಡ ಅನ್ನುತ್ತೀರಾ?

ಪಾದ್ರಿ: ಹಾಗಲ್ಲ! ಎಷ್ಟು ಬಡ ಜನರಿಗೆ ಸಂಕಟವಿದ್ದು ಏನಾದರೂ ಮಾಡಲಿಕ್ಕೆ ಉಪಾಯ ಕಾಣದಿದ್ದರೂ ಕಡೇಲಿ ಗುಣವಾಗುವದುಂಟು! ಈ ಪ್ರಕಾರವಾಗಿದ್ದರೂ ನಾನು ಮದ್ದು ಮಾಡಲಿಕ್ಕೆ ಹೇಳುತ್ತೇನೆ. ಎಷ್ಟೋ ಜನರಿಗೆ ಮದ್ದು ಮಾಡಿ ಕೊಡುತ್ತೇನೆ! ಯಾಕಂದರೆ ಬಹಳ ರೋಗಗಳಲ್ಲಿ ತಕ್ಕ ಔಷಧವನ್ನು ಬೇಗ ಮಾಡದೆಯೂ ಚನ್ನಾಗಿ ನೋಡದೆಯೂ ಇದ್ದರೆ ಪ್ರಾಣ ಸಂಕಟವಾಗುವದು. ಒಂದು ವೇಳೆ ಅದು ಆಗದಿದ್ದರೂ ಬಹಳ ವರುಷಗಳ ಪರಿಯಂತರ ಇರುವ ಕ್ಷಯ, ಜಲೋದರ ಇತ್ಯಾದಿ ರೋಗಗಳು, ಇಲ್ಲವೇ ಏನಾದರೂ ಒಂದು ಊನತೆ ವಾತ ಮುಂತಾದವುಗಳುಂಟಾಗುತ್ತವೆ. ಇದನ್ನು ವಿಶೇಷವಾಗಿ ಮೈಲೆಗಜ್ಜಿ ಆದವರಲ್ಲಿ ನೋಡ ಬಹುದು. ದೇವರಿಂದಲೂ ದೇವರ ಸಂಗಡಲೂ ಬದುಕಿ ಪೂರ್ಣ ಸ್ವತಂತ್ರವುಳ್ಳವನಾಗಿ ಮಹಿಮೆಗೂ ಚಾಗ್ಯಕ್ಕೂ ಶೇರ ತಕ್ಕವನಾಗುವಂತೆ ಸೃಷ್ಟಿಸಲ್ಪಟ್ಟ ಮನುಷ್ಯನು ಈ ಪ್ರಕಾರ ಕೈ ಕಾಲು ಕಟ್ಟಿದವನ ಹಾಗೆ ಹೀನನಾಗಿ ಸಹಾಯ ಹೊಂದ ತಕ್ಕ ಮಾರ್ಗವನ್ನು ಕಾಣದೆ ಕೆಟ್ಟ ಕತ್ತಲೆಯ ಆಧಿಕಾರದೊಳಗೆ ಇದ್ದು ರಕ್ಷಣೆ ಶಿಕ್ಕುವದೋ ಏನೋ ಎಂದು ತಿಳಿಯದೆ ಹುಡುಕುವಾಗ, ಒಳ್ಳೇದನ್ನು ನಿರೀಕ್ಷಿಸಿ ಕೇಡು ಬಂತು, ಬೆಳಕನ್ನು ಎದುರು ನೋಡಿ ಅಂಧಕಾರವಾಯಿತು ಎಂಬ ಸ್ಥಿತಿ ಇರುವದಿಲ್ಲವೋ? ಇಂಥಾ ದುಃಖವೂ ನಾಶನವೂ ಆದ ಪ್ರವಾಹಕ್ಕೆ ಬಿದ್ದು ಏನರಿಯದವನಾದರೂ ಹಿಡಿಯಲಿಕ್ಕೆ ಅಪೇಕ್ಷೆ ಮಾಡಿ ಸಿಕ್ಕದೆ ಹೋಗುವನು. ಒಂದು ವೇಳೆ ಏನಾದರೂ ಸಿಕ್ಕುವದೆಂದು ನೆನಸಿ ಬೊಬ್ಬುಳಿಯಂತೆ ಇರುವ ಲೋಕದ ವಿಷಯಗಳನ್ನು ನಂಬಿ ಅದರ ಮೋಸವನ್ನು ತಿಳಿದು ಕೊಳ್ಳುವಾ

ಗ, ಅದು ಎಷ್ಟು ದುಖ್ಖಕರವಾಗಿ ಕಾಣುವದು! "ದಿಕ್ಕು ದಿಕ್ಕಿಗೆ ಹೋದರೂ ದುಖ್ಖ ತಪ್ಪೀತೇ?" ಪೂರ್ಣ ನಾಶನವನ್ನು ಮಾತ್ರ ಎದುರು ನೋಡುತ್ತಾನೆ. ಇಂಥಾ ಕಂಗಾಲು ಸ್ಥಿತಿಯಲ್ಲಿ ಸಹಾಯ ಮಾಡುವವರೆಂದು ನೆನಸಿದ ತನ್ನ ಗುರುಗಳೂ, ಭಟ್ಟರೂ, ಶಾಸ್ತ್ರಿಗಳೂ, ಮಂತ್ರವಾದಿಗಳೂ ಹಿಂಜರಿಯುತ್ತಾರೆ; ಕೆಲವು ಸಾವಿರಾರು ವರ್ಷಗಳಿಂದ ಈಚೆಗೆ ಹೀಗೆಯೇ ನಡಿಯುವಂಥಾದ್ದು ಎಷ್ಟು ದುಖ್ಖದ ಸಂಗತಿಯಾಗಿದೆ! ಆದಕಾರಣ ಕಡೆಗೆ ಎಲ್ಲರೂ ಬೇರೆ ಮಾರ್ಗವೂ ಸ್ಥಿತಿಯೂ ಇಲ್ಲವೆಂದು ನೆನಸಿ ಈ ಕತ್ತಲೆಯ ಆತ್ಮಗಳಾಗಿರುವ ಭೂತಗಳ ಸೇವೆಯು ಅನೇಕರಿಗೆ ರಮ್ಯವೂ ಒಳ್ಳೇದೂ ಎಂದು ಕಾಣುವಂಥಾದ್ದು ಆಶ್ಚರ್ಯವಲ್ಲ.

ಪಾಟಾಳಿ ಪೂ: ದೇವರನ್ನು ನಾವು ನೋಡ ಕೂಡದು, ಅವನು ನಮಗೆ ದೂರವಾಗಿರುತ್ತಾನೆ; ಆದರೆ ಭೂತಗಳ ಸಂಗಡ ನಮಗೆ ಬಳಿಕೆ ಆಗುತ್ತದೆ.

ಪಾದ್ರಿ: ಹೌದು ಭೇದ ತಿಳಿದಿದ್ದರೂ ವಾದ ಬಿಡುವದಿಲ್ಲ.

ರಾಮಶೆ: ನಮಗೂ ನಮ್ಮ ದನಗಳಿಗೂ ಸಂಕಟವಾಗುವಾಗ, ನಾವು ಭೂತಗಳಿಗೆ ಹರಿಕೆ ಹೇಳಿ ಪೂಜೆ ಮಾಡುತ್ತೇವೆ; ಆಗ ಗುಣವಾಗುತ್ತದೆ. ಕಳ್ಳರು ನಮ್ಮವುಗಳನ್ನು ಕದ್ದುಕೊಳ್ಳುವಾಗ ಭೂತಗಳು ಅದನ್ನು ತಿರುಗಿ ಸಿಕ್ಕುವ ಹಾಗೆ ಮಾಡುತ್ತವೆ; ನಮಗೆ ಶತ್ರುಗಳಾಗಿರುವವರಿಗೆ ಉಪದ್ರ ಕೊಡಬೇಕೆಂದು ಭೂತಗಳಿಗೆ ಹೇಳುವಾಗ ಮಾಡುತ್ತವೆ; ಮತ್ತು ಹೆಚ್ಚಾದ್ದಕ್ಕೆ ನಮಗೇನು ಚಿಂತೆ? ಅದಕ್ಕಾಗಿ ನಮ್ಮ ಹಿರಿಯರು ಅವುಗಳಿಗೆ ಸೇವೆ ಮಾಡಿದ ಹಾಗೆಯೇ ನಾವೂ ಮಾಡುತ್ತೇವೆ; ಬಿಡಲಿಕ್ಕೆ ಕೂಡದು, ನಿಮಗೂ ನಿಮ್ಮ ಸಂಗಡ ಕೂಡಿದವರಿಗೂ ಉಪದ್ರವಾಗುವದಿಲ್ಲ ಸರಿ. ಯಾಕಂದರೆ ನೀವು ಭಯ ಪಡುವದಿಲ್ಲ; ಧೈರ್ಯವುಳ್ಳವನು ಇದನ್ನು ಮಾಡಲಿ! ನಾವು ಮಾಡುವದಿಲ್ಲ; ಮಾಡಿದರೆ ಹೆಚ್ಚು ಉಪದ್ರವಾದೀತು.

ಪಾದ್ರಿ: ನೀವು ಈಗ ಹೇಳಿದ್ದು "ಶೆಖೆ ಹೆಚ್ಚಾಯಿತೆಂದು ಕಂಬಳಿ ಹೊದ್ದುಕೊಂಡ ಹಾಗೆ" ಎಂಬ ಗಾದೆ ಹೇಳುವ ಪ್ರಕಾರ ಕಾಣುತ್ತದೆ. ಭಕ್ತಿಯ ಕ್ರಮವನ್ನು ದೇವರು ನಮಗೆ ದಯೆಯಿಂದ ತೋರಿಸುವದು ಹೊರ್ತಾಗಿ ಹಿರಿಯರೂ ಪಿತೃಗಳೂ ಬೇರೆ ಯಾವ ಮನುಷ್ಯರಾದರೂ

ತೋರಿಸ ಕೂಡದು. ನೀವು ದೇವರ ವಾಕ್ಯವಾದ ಸುವಾರ್ತೆಯನ್ನು ಕೇಳಿ ನಂಬ ಬೇಕು! ದೇವರಿಗೆ ಕೇವಲ ವಿರೋಧವಾಗಿರುವಂಥ ನಿಮಗೆ ಇಷ್ಟು ಕಷ್ಟವೂ ದುಖ್ಖವೂ ಕೊಡುವಂಥಾ ಈ ಭೂತದ ಸೇವೆಯು ನಿಮ್ಮೆಲ್ಲರಿಗೆ ಅಷ್ಟು ಪ್ರಿಯವೂ ಬಲವೂ ಆಗಿರುವ ಕಾರಣ ಸ್ವಲ್ಪ ಶೋಧಿಸಿ ನೋಡಿ ಕೊಳ್ಳಿರಿ! ಇದರಲ್ಲಿ ಎಲ್ಲಾ ಮನುಷ್ಯರನ್ನು ಕೆಡಿಸಲಿಕ್ಕೆ ಪ್ರಯತ್ನ ಮಾಡುವ ಸೈತಾನನು ತನ್ನಿಂದಲೂ ತನ್ನ ದೂತರಿಂದಲೂ ನಡಿಸುವ ಯುಕ್ತಿಯನ್ನೂ ಬಲವನ್ನೂ ಎಲ್ಲಾ ಕೆಟ್ಟ ತಂತ್ರದ ಕೆಲಸಗಳನ್ನೂ ಅಡಗಿಸಿ, ಕತ್ತಲೆಯಲ್ಲಿ ಅವುಗಳನ್ನು ತಿಳಿದು ಕೊಳ್ಳಲಿಕ್ಕೆ ಜನರಿಂದಾಗುವದಿಲ್ಲ ಎಂದು ನೆನಸಿ ಕೊಂಡು, ವಿಗ್ರಹಾರಾಧನೆಯನ್ನೂ ಭೂತಗಳ ಸೇವೆಯನ್ನೂ ಒಂದೇ ಐಕ್ಯಕ್ಕೆ ಇಟ್ಟು, ಇದು ದೇವರಿಗೆ ಮೆಚ್ಚುವ ಭಕ್ತಿ ಎಂದೂ ನಿಮಗೆ ಅದರಲ್ಲಿ ಪ್ರಯೋಜನವೂ ಕುಶಾಲೂ ಇರುವದೆಂದೂ ತೋರಿಸುತ್ತಾನೆ; ಇದು ಮೊದಲನೇ ಕಾರಣ. ಮತ್ತೊಂದು ಯಾವದೆಂದರೆ: ಭೂತಗಳ ಸಂಗಡ ಪ್ರೇತಗಳನ್ನೂ ಶೇರಿಸಿರುವದರಿಂದ ನಿಮ್ಮ ಪಿತೃಗಳ ನೆನಪಿಗಾಗಿ ನಿಮ್ಮೊಳಗೆ ಹೆಚ್ಚು ಮನಸ್ಸೂ ಆಸಕ್ತಿಯೂ ಹುಟ್ಟಿಸಿತು.

ಪುಟ್ಟಣ್ಣಾಚಾ: ನೀವು ಹೇಳುವದು ಒಂದು ತರದಲ್ಲಿ ಹೌದು ಎಂತ ತೋರುತ್ತದೆ; ಆದರೂ ಭೂತ ಸೇವೆಯಲ್ಲಿ ಭಯ ಪಡುವದು ಬಹಳವಿಲ್ಲವೊ? ಇದರಲ್ಲಿ ಕುಶಾಲು ಏನು?

ಪಾದ್ರಿ: ಇದೇ ಸೈತಾನನ ಯುಕ್ತಿ. ಭಯ ಪಡುವದಾಗಿದ್ದರೂ ಅದು ಕುಶಾಲಿನಿಂದ ಮರೆಯಾದದ್ದು; ವಿಶೇಷವಾದ ಕಷ್ಟದ ಸಮಯದಲ್ಲಿ ಮಾತ್ರ ಅದು ತಿಳಿಯುತ್ತದೆ. ನಿಮ್ಮೆಲ್ಲರಿಗೆ ಅದು ತಿಳಿದು ಬರುವ ಹಾಗೆ ದೇವರು ಸಹಾಯ ಮಾಡಿ ಆತ್ಮದ ಕಣ್ಣುಗಳನ್ನು ತೆರೆದು ಬುದ್ಧಿಯನ್ನು ಕೊಡ ಬೇಕೆಂದು ಅವನಿಗೆ ಪ್ರಾರ್ಥನೆ ಮಾಡುವ. ಸ್ವಲ್ಪ ಮಾತ್ರ ಆಲೋಚನೆ ಮಾಡಿ ನೋಡಿರಿ, ಆಗ ಈ ಭೂತಗಳ ಸಂಗತಿಗಳಲ್ಲಿ ಸುಳ್ಳು ಬಹಳವೆಂದೂ, ಸತ್ಯವು ಸ್ವಲ್ಪ ಮಾತ್ರವೇ ಎಂದೂ ಕಂಡು ಬರುವದು. ನಾವು ಕೆಲವು ದಿಕ್ಕಿನಲ್ಲಿ ಭೂತಗಳ ಕಲ್ಲು ಮಂಚ ಮೊದಲಾದವುಗಳನ್ನು ಮಗುಚಿ ಹಾಕಿದ್ದೇವೆ, ಆದರೆ ನಮಗೇನೂ ಆಗಲಿಲ್ಲ, ಇದಕ್ಕೆ

ನಿಮ್ಮ ಸಂಗಡ ಅದೇ ಸೇವೆ ಮಾಡುವ ಜನರು ಹೇಳುವ ದೃಷ್ಟಾಂತ ಕೊಡುತ್ತೇನೆ. ಶುಮಾರು ಹತ್ತಿಪ್ಪತ್ತು ವರುಷಗಳ ಮುಂಚೆ ಬೈಲೂರು ಎಂಬ ಊರಿನ ಬೈದರುಗಳ ಗರಡಿಯನ್ನು ಮಗುಚಿ ಹಾಕುವಾಗ ಅಲ್ಲಿರುವವರಿಗೆ ಬಹಳ ಭಯವಿತ್ತು; ಈ ಬೈದರುಗಳು ಬಹಳ ಸಿಟ್ಟು ಮಾಡಿ ತಮಗೆ ಬಹಳ ಉಪದ್ರ ಕೊಡುವವೆಂದು ನೆನಸಿದರು. ಒಂದು ವಾರ, ಒಂದು ತಿಂಗಳು, ೧೦-೧೫ ವರುಷಗಳು ಸಹ ಕಳದವು, ಏನೂ ಆಗಲಿಲ್ಲ ಮಾತ್ರ ಎಂಬುವದಲ್ಲ; ಈಗ ಅಲ್ಲಿ ಏನು ಹೇಳುತ್ತಾರೆ? ಬೈದರುಗಳು ಹೋದ ಈಚೆಗೆ ನಮಗೆ ಸುಖವೇ! ಇದು ನಿಮ್ಮ ಜಾತಿಯವರ ಸಾಕ್ಷಿ. ಅದೇ ಪ್ರಕಾರ ಬೇರೆ ಊರುಗಳಲ್ಲಿ ಪಾದ್ರಿ ಧೊರೆಯವರು ಬಂದ ಮೇಲೆ ಭೂತಗಳ ಕಾರ್ಣಿಕವು ನಡಿಯುವದಿಲ್ಲವೆಂದು ಹೇಳುತ್ತಾರೆ. ಮನೆಯ ಭೂತಗಳನ್ನು ಎಷ್ಟು ತೆಗದು ಹಾಕಿದೆವು? ಕೆಲವು ಕಾಲದ ಮುಂಚೆ ಒಂದು ಮನೆಯಲ್ಲಿ ಏಳು ಭೂತದ ಮಂಚಗಳನ್ನು ಮುರಿದು ಹಾಕಿದಾಗ ನೆರೆಯವರೆಲ್ಲರೂ ಮನೆಯ ಯಜಮಾನನೂ ಸಹ ಏನಾದರೂ ಆಗುವದೆಂದು ಬಹಳ ಹೆದರಿ ನಡುಗಿ ಎದುರು ನೋಡುತ್ತಾ ಇದ್ದರು. ಅವುಗಳ ಕೋಣೆ ಶುದ್ಧ ಮಾಡಿಸಿದ ಮೇಲೆ ಅಲ್ಲಿ ಚಾಪೆ ಹಾಕಿ ಕೂಡಿ ಪ್ರಾರ್ಥನೆ ಮಾಡಿದೆವು; ಮತ್ತು ರಾತ್ರಿಯಲ್ಲಿ ನಾನು ಅದೇ ಕೋಣೆಯಲ್ಲಿ ಮಲಗಿ ನಿದ್ದೆ ಮಾಡಿದೆನು. ಅಂದಿನಿಂದ ಈಚೆಗೆ ಏನೂ ಆಗದರಿಂದ ಭಯ ಈಗ ಹೋಯಿತು. ನೀವು ಹೇಳುವ ಪ್ರಕಾರ ಭೂತಗಳು ದೇವರ ಚಾಕ್ರಿಯವರಾಗಿ ಇಷ್ಟು ದೊಡ್ಡವರಾಗಿರುವದು ಅಹುದಾದರೆ, ಬಡ ಮನುಷ್ಯರಾದ ನಮ್ಮ ಎದುರಿನಲ್ಲಿ ಹೀನರಾಗಿ ಹೋಗುವದೇನು? ಅವುಗಳನ್ನು ತೆಗದು ಹಾಕುವವರಾದ ನಮಗೆ ಯಾಕೆ ಉಪದ್ರ ಕೊಡುವದಿಲ್ಲ?

ರಾಮಶೆ: ನೀವು ಸಹ ಭೂತಗಳಿಗೆ ಪೂಜೆ ಮಾಡುವದಿಲ್ಲವೋ? ಬಬ್ಬರ್ಯನಿಗೆ ಬಹಳ ಭಯ ಪಡುತ್ತೀರಿ ಎಂಬ ಸುದ್ದಿ ಉಂಟು.

ಪಾದ್ರಿ: ಈ ಮಾತು ಒಂದೊಂದು ಸಾರಿ ಕೇಳಿದೆನು, ಅದು ಎಲ್ಲಿಂದ ಎದ್ದಿತು ಎಂದು ನನಗೆ ತಿಳಿಯುವದಿಲ್ಲ. ಹ್ಯಾಗಾದರೂ ನೀವು ಎಲ್ಲಿಯಾದರೂ ಕೇಳಿ ಇರುವಿರಿ. ನಾವು ಭೂತಗಳಿಗೆ ಏನಾದರೂ ಪೂ

ಜೆ ಮಾಡುವದುಂಟೆಂದು ಯಾರೂ ಹೇಳಲಾರರು; ಒಂದು ವೇಳೆ ಮುಲ್ಕಿಯಲ್ಲಿ ಈ ಸುದ್ದಿ ಎದ್ದಿರುವದು; ಹ್ಯಾಗಂದರೆ ಆ ಬಂಗ್ಲೆಯ ಹತ್ತರ ಒಂದು ಸ್ಥಳವನ್ನು ದರಖಾಸ್ತು ಮಾಡುವಾಗ ಒಂದು ಹೊಲೆಯರ ಸ್ಥಾನ ಅಲ್ಲಿತ್ತು; ಅದಕ್ಕಾಗಿ ಆ ಸ್ಥಳವನ್ನು ನಮಗೆ ಕೊಡ ಕೂಡದೆಂಬುವದಕ್ಕೆ ವ್ಯವಹಾರ ಮಾಡಿದರು. ಆಗ ಅವರ ಸಂಗಡ ವಿವೇಕವಾಗಿ ಆ ಸ್ಥಾನವನ್ನು ತೆಗದು ಹಾಕಿ ಬೇರೆ ದಿಕ್ಕಿಗೆ ತಕ್ಕೊಂಡು ಹೋಗಿ ಕಟ್ಟುವದಕ್ಕೋಸ್ಕರ ಒಂದು ವೇಳೆ ನಾಲ್ಕೈದು ರೂಪಾಯಿ ಕೊಡುವದಕ್ಕೆ ಮನಸ್ಸಾಯಿತು; ಆದರೆ ಅವರಿಗೆ ಏನೂ ಮನಸ್ಸಿಲ್ಲದೆ ಇದರಿಂದ ನ್ಯಾಯಪ್ರಕಾರ ತೀರ್ವಿಕೆಯಾಗಿ ಅವರಿಗೆ ಏನಾದರೂ ಸಿಕ್ಕದೆ ಆ ಸ್ಥಾನವನ್ನು ತೆಗಿಯ ಬೇಕಾಯಿತು. ಇದನ್ನು ಒಂದು ವೇಳೆ ಜನರು ಕೇಳಿ ನಾವು ಕೋಟೆ ಬಬ್ಬುಗೆ ಜಯ ಪಟ್ಟು ಪೂಜೆ ಮಾಡುತ್ತೇವೆಂದು ಸುಳ್ಳುಗಾರರು ಕೂಡಿಸಿ ಹೇಳಿರುವರು.

ಚಂದ್ರಜ: ಹೀಗಾಗಿರುವದು; ನಿಮ್ಮದನ್ನು ತಿಳಿಯುವವರು ನೀವು ಭೂತಗಳನ್ನು ನಂಬುತ್ತೀರಿ ಎಂಬುವದನ್ನು ಹ್ಯಾಗಾದರೂ ನಂಬರು.

ರಾಮಶೆ: ನೀವು ಹಾಗಾದರೆ ಭೂತವನ್ನು ನಂಬುವದೇ ಇಲ್ಲವೋ? ಭೂತ ಇರುವದೇ ಇಲ್ಲವೆಂದು ಅನ್ನುತ್ತೀರೋ?

ಪಾದ್ರೆ: ಕೆಟ್ಟ ಆತ್ಮಗಳು, ಇಲ್ಲವೇ ನೀವು ಹೇಳುವ ಭೂತಗಳು ಇರುವದಿಲ್ಲವೆಂದು ನಾನು ಹೇಳಿದ್ದುಂಟೋ? ಉಂಟೆಂದು ನಾವು ಸಹ ಹೇಳುತ್ತೇವೆ. ಆದರೆ ಅವುಗಳು ಉಪದ್ರ ಕೊಡುವ ವಿಷಯದಲ್ಲಿ ನೀವು ನೆನಸುವದಕ್ಕೂ ನಾವು ಹೇಳುವದಕ್ಕೂ ಬಹಳ ಹೆಚ್ಚು ಕಡಿಮೆ ಉಂಟು. ಮೊನ್ನೆ ತೋರಿಸಿದ ಹಾಗೆಯೇ ತಿಳಿಯದ ಜನರು ಘಾಬ್ರಿಯಾಗಿ, ಅಪರೂಪವಾದದ್ದನ್ನು ನೋಡುವಾಗ, ಅದು ಭೂತಪ್ರೇತಗಳ ಪ್ರಕೃತಿ ಎಂದು ಹೇಳುತ್ತಾರೆ. ನಾವು ಹೇಳುವದೇನಂದರೆ ಮನುಷ್ಯನು ಭೂತಗಳಿಗೆ ಇಂಬು ಕೊಡದೆ ಅವುಗಳಲ್ಲಿ ವಿಶ್ವಾಸ ಇಡದೆ ಇದ್ದರೆ, ಭೂತಗಳು ಸಾಧಾರಣವಾಗಿ ಏನೂ ಮಾಡಲಾರವು. ಜನರ ಭ್ರಮೆಯಲ್ಲಿಯೂ ಭಯದಲ್ಲಿಯೂ ವಿಶೇಷವಾಗಿ ಅವುಗಳ ಬಲ ಇರುವದರಿಂದ ಅವುಗಳ ಮುಖ್ಯಸ್ಥನಾದ ಸೈತಾನನು ಇದು ಹೋಗದ ಹಾಗೆ ಅನೇಕ ತರದ

ಯುಕ್ತಿಗಳಿಂದ ಜನರನ್ನು ತನ್ನ ಬಲೆಯಲ್ಲಿ ಹಿಡಿದು ಇಟ್ಟು ಕೊಳ್ಳಲಿಕ್ಕೆ ನೋಡುತ್ತಾನೆ. ಹಾಗೆ ಕೆಲವು ವರುಷಗಳ ಮುಂಚೆ ಹದಿಮೂರು ವರುಷ ಪ್ರಾಯದ ಒಂದು ಹೆಣ್ಣು ಬಹಳ ಒಳ್ಳೇಯವಳಾಗಿದ್ದು ಒಂದು ದಿವಸ ತನ್ನ ಮನೆಗೆ ಹೋಗುವಾಗ ಒಬ್ಬ ಚಿಕ್ಕ ಹುಡುಗಿಯು ನೀರಿನಲ್ಲಿ ಬೀಳುವದನ್ನು ನೋಡಿ ಬಹಳ ಭಯ ಪಟ್ಟಳು. ಒಂದು ಘಳಿಗೆಯ ಮೇಲೆ ಮೂರ್ಛಿತಳಾಗಿ, ಮರು ದಿವಸದ ಪರಿಯಂತರ ಇದ್ದು, ಶಿರಿಗಿ ಸ್ವಸ್ಥವಾಗಿ ನಾಲ್ಕು ದಿವಸ ಪರಿಯಂತರ ಏನೊಂದು ಕಾಣಲಿಲ್ಲ. ನಾಲ್ಕನೇ ದಿವಸದಲ್ಲಿ ಮತ್ತೊಬ್ಬಳ ಸಂಗಡ ಒಂದು ಗುಡ್ಡೆಗೆ ಹೋಗುವಾಗ ಸ್ವಯವಿಲ್ಲದವಳಾಗಿ ಬಿದ್ದು ಒಂದು ಘಳಿಗೆಯ ಪರಿಯಂತರ ಮಲಗಿದಳು; ಇದನ್ನು ನೋಡುವದಕ್ಕೆ ಕೆಲವು ಮಂದಿ ಬಂದರು, ಅವರು ಸಹ ಅದೇ ಪ್ರಕಾರ ಮೂರ್ಛಿತರಾಗಿ ಬಿದ್ದು ವಿಶೇಷವಾಗಿ ತಾವು ಮುಂಚೆ ಸ್ನೇಹಿಸಿದವರನ್ನು ಬಹಳವಾಗಿ ಬೈದು ಶಾಪದ ಮಾತುಗಳನ್ನು ಹೇಳಿ, ತಮಗೆ ಯಾರೂ ಕೃತ್ರಿಮ ಮಾಡಿದರಿಂದ ಹೀಗೆ ಆಗುತ್ತದೆಂದು ಶಿಳಿಸಿದರು. ಮೂರು ನಾಲ್ಕು ಮಂದಿ ಬಲಿಷ್ಠರಾದ ಗಂಡಸರು ಅವರನ್ನು ಹಿಡಿಯುವದು ಕಷ್ಟವಾಗಿತ್ತು. ಅವರಲ್ಲಿ ಒಬ್ಬ ಹುಡುಗಿಯು: — ನನಗಾದ ಹಾಗೆಯೇ ನನ್ನ ತಂದೆಗೂ ಇಬ್ಬರು ಹುಡುಗಿಯರಿಗೂ ಕೆಲವು ದಿವಸದ ಮೇಲೆ ಸಂಕಟ ಬರುವದು, ಮತ್ತು ಅವರು ಸಾಯುವರೆಂದು ಹೇಳಿದಳು. ಇವರು ಆ ಸುದ್ದಿ ಕೇಳುವಾಗ ಬಹಳ ಭಯ ಪಟ್ಟರು; ಆ ಹೆಣ್ಣುಗಳಲ್ಲಿ ಒಬ್ಬಳಿಗೆ ಕ್ಷಣದಲ್ಲಿ ಬಲಪಾರ್ಶ್ವದ ಮೊಣಕಾಲಿನಲ್ಲಿ ಬಹಳ ನೋವಾಯಿತು; ಮತ್ತು ಸ್ವಯವಿಲ್ಲದವಳಾಗಿ ತನ್ನನ್ನು ಭೂತ ಹಿಡಿಯಿತೆಂದು ಏಳು ಭೂತಗಳ ಹೆಸರುಗಳನ್ನು ಹೇಳಿದಳು. ಮತ್ತೊಬ್ಬ ಹುಡುಗಿಯೂ, ಅವಳ ತಂದೆಯೂ ಬೇರೊಬ್ಬ ಹುಡುಗನೂ ಅಸ್ವಸ್ಥದಲ್ಲಿ ಬಿದ್ದರು. ಕೆಲವು ಮಂದಿ ಸತ್ತು ಹೋದರು. ಎಲ್ಲರೂ ಭೂತಗಳ ಉಪದ್ರವೆಂದು ಹೇಳಿ ಭೂತಗಳನ್ನು ಹೊರಡಿಸುವವರನ್ನು ಕರಿಸಿ ಈ ಪ್ರಕಾರ ಗುಣವಾಗ ಬೇಕೆಂದು ನೋಡಿದರು. ಭೂತವನ್ನು ಹೊರಡಿಸುವವರು ತಮ್ಮ ಕಾರ್ಯವನ್ನು ಮಾಡುವಾಗ ಆ ಭೂತದಿಂದ ಹಿಡಿಯಲ್ಪಟ್ಟವರು ಅವರ ಮೇಲೆ ಬಿದ್ದು ಅ

ವರನ್ನು ಬೈದು ಗೌಜಿ ಮಾಡಿದರಿಂದ ಅವರಿಗೆ ಸಂಕಟವು ಹೆಚ್ಚಾದದ್ದು ಹೊರ್ತಾಗಿ ಏನೂ ಪ್ರಯೋಜನ ಕಾಣಲಿಲ್ಲ. ಊರಿನವರು ಇದನ್ನು ನೋಡುವಾಗ ಬಹಳ ಕೋಪ ಮಾಡಿದರು; ಮತ್ತು ಆರಂಭದಲ್ಲಿ ಬಾಯಿಗೆ ಹಾಕಿದರೆಂದು ಹೇಳಿದವರನ್ನು ಕೊಲ್ಲಲಿಕ್ಕೆ ಆಲೋಚನೆ ಮಾಡಿದರು. ಆಗ ಸರ್ಕಾರಿನವರು ಅದರ ಸುದ್ದಿ ಕೇಳಿ ಬಹಳ ಘಟ್ಟಿಗನಾದ ಒಬ್ಬ ವೈದ್ಯನನ್ನು ಕಳುಹಿಸಿ ಆ ಊರಿನ ಎಲ್ಲಾ ಸಂಕಟದವರನ್ನು ಚನ್ನಾಗಿ ಪರಾಮರಿಸ ಬೇಕೆಂದು ಅಪ್ಪಣೆ ಕೊಟ್ಟರು. ಹಿರಿ ಕಿರಿಯರಾದ ನೂರ ಇಪ್ಪತ್ತು ಜನರಿಗೆ ಚೂತ ಹಿಡಿಯಿತೆಂಬುವದನ್ನು ನೋಡಿ ಬಹಳ ಆಶ್ಚರ್ಯವಾದ ಈ ಸಂಗತಿಯನ್ನು ತಿಳಿಸಿದರು; ಹ್ಯಾಗಂದರೆ, ಒಬ್ಬನಿಗೆ ಬರೇ ನೀರು ಕುಡಿಯಲಿಕ್ಕೆ ಕೊಟ್ಟಾಗ ಬಹಳ ನೋವಾಯಿತು. ಮತ್ತೊಬ್ಬನಿಗೆ ಬಹಳ ದಿವಸದ ತನಕ ಸ್ವಲ್ಪ ಮದ್ದನ್ನು ಕೊಡುವ ಸಮಯದಲ್ಲಿ ಕಾರುವದು ತೊಡಗಿತು; ತಲೆ ಕೆಳಗೆ ಕಾಲು ಮೇಲೆ ಮಾಡಿ ನಡದು ಮುಂಚೆ ಕಲಿಯದ ಬೇರೆ ಭಾಷೆಗಳಲ್ಲಿ ಸಹ ಮಾತಾಡಿದರು. ಆ ಧೊರೆ ಬಹಳ ಪ್ರಯತ್ನ ಮಾಡಿ ಬೇರೆ ಬೇರೆ ತರದ ಮದ್ದುಗಳನ್ನು ಮಾಡಿದರೂ ಕೆಲವು ಮಂದಿಗೆ ಮಾತ್ರ ಗುಣವಾಯಿತು ಹೊರ್ತಾಗಿ, ಏನೂ ಹೆಚ್ಚು ಪ್ರಯೋಜನ ಕಾಣದಿರುವದರಿಂದ, ತಿರಿಗಿ ಹೋಗಿ ಮೂರು ತಿಂಗಳಿನ ಮೇಲೆ ಮತ್ತೊಂದು ಸಾರಿ ಬಂದರು. ಅದರೊಳಗೆ ಆ ಊರಿನ ಪ್ರಮಾಣಿಗಳು ನಾನಾ ತರದ ಕಾರ್ಯಗಳನ್ನು ನಡಿಸಿ ಸಂಕಟದವರಿಗೆ ಹ್ಯಾಗಾದರೂ ಗುಣ ಮಾಡ ಬೇಕೆಂದು ಬಹಳ ಖರ್ಚು ಮಾಡಿ ನೋಡಿದರು. ಕಲೆಕ್ಟರ್ ಧೊರೆ ಸಹ ಆ ಊರಿಗೆ ಹೋಗಿ ಜನರನ್ನು ಕೂಡಿಸಿ ಬುದ್ಧಿ ಹೇಳ ನೋಡಿದರು. ಆದರೆ ಅವರು ಮಾತಾಡುವಷ್ಟರೊಳಗೆ ಕೆಲವು ಮಂದಿಗೆ ಸಂಕಟವಾಗಿ ಧೊರೆಯ ಮೇಲೆ ಬಿದ್ದು ಅವರನ್ನು ಬೈದು ಬಹಳ ಆಗದ ಕೆಲಸಗಳನ್ನು ಮಾಡಿದರು; ಅವರ ಕೈಯಿಂದ ತಪ್ಪಿಸಲಿಕ್ಕೆ ಪೊಲಿಸ್‌ನವರಿಗೆ ಬಹಳ ಕಷ್ಟವಿತ್ತು. ಆಗ ಆ ದೊಕ್ತರ್ ಧೊರೆ ಇದೆಲ್ಲಾ ನೋಡಿ ಬಹಳ ಆಶ್ಚರ್ಯ ಪಟ್ಟರೂ ಇದರಲ್ಲಿ ಅನೇಕ ಮೋಸವೂ ದುರ್ಬುದ್ಧಿಯೂ ಶೇರಿಯಿದೆಂದು ತಿಳಿದು, ಇದಕ್ಕೆ ಚನ್ನಾಗಿ ಭಯ ಪಡುವಂಥ ಕಠಿಣವಾದ ಶಿಕ್ಷೆಯನ್ನು ಕೊಡುವದು ಹೊರ್ತಾಗಿ

ಏನೂ ನಡಿಯುವದಿಲ್ಲವೆಂದು ತಿಳಿದು ಕೊಂಡು, ಅರುವತ್ತು ಜನ ಶಿಪಾಯಿಗಳನ್ನು ಕರ ಕೊಂಡು ಬಂದು, ವಿಶೇಷವಾದ ಸಂಕಟದವರನ್ನು ಆಸ್ಪತ್ರಿಗೆ ಕಳುಹಿಸಿ ಶುಮಾರಿನ ಸಂಕಟದವರನ್ನು ಜಯ ಪಡಿಸಿ ಕೆಲವು ವಾರದೊಳಗೆ ಆ ಊರು ಶುದ್ಧವಾಗುವ ಹಾಗೆ ಮಾಡಿದರು. ಶುಮಾರು ನಾಲ್ಕು ತಿಂಗಳ ಪರಿಯಂತರ ಆ ದಂಡಿನವರು ಊರಿನಲ್ಲಿದ್ದು ಏನೂ ಆಗುವದಿಲ್ಲವೆಂದು ನೋಡಿ ಬಂದೋಬಸ್ತಿಗಾಗಿ ಇನ್ನೊಂದು ಸಾರಿ ಜನರನ್ನು ಕೂಡಿಸಿ, ಇನ್ನೂ ಏನೂ ಆಗದ ಹಾಗೆ ನೋಡ ಬೇಕೆಂದು ಬುದ್ಧಿ ಹೇಳಿ ಊರನ್ನು ಬಿಟ್ಟು ಹೊರಟರು. ಈಗ ಶುಮಾರು ಒಂದು ವರುಷದಿಂದ ಈಚೆಗೆ ಆ ಊರಿನಲ್ಲಿ ವಿಶೇಷವಾದದ್ದೇನಾದರೂ ನಡಿಯದೆ ಸಮಾಧಾನವಿರುತ್ತದೆ. ನೋಡಿರಿ! ಈ ಪ್ರಕಾರ ಒಂದೊಂದು ಸಾರಿ ಬಹಳ ಆಶ್ಚರ್ಯವಾದ ಸಂಗತಿಗಳು ಆಗುತ್ತವೆ; ನೀವು ಸಹ ಸಂಕಟದಲ್ಲಿ ಬಿದ್ದು ಭೂತಗಳ ಕಾರ್ಯಗಳನ್ನು ಮಾಡಿ ಗುಣವಾಗುವದು ಇರುತ್ತದೆ; ಆದರೆ ಇದು ಆಶ್ಚರ್ಯವಲ್ಲ; ಯಾಕಂದರೆ ಸೈತಾನನು ಆರಂಭದಿಂದ ಈ ವರೆಗೆ ತನ್ನ ಕೆಟ್ಟ ಕ್ರಿಯೆಗಳು ತಿಳಿಯದ ಹಾಗೆ ಬೆಳಕಿನ ದೂತನ ವೇಷವನ್ನು ಧರಿಸಿ ಕೊಂಡು ಆಶ್ಚರ್ಯವಾದ ಗುರ್ತಗಳನ್ನು ಮಾಡಿ ತನಗೆ ತಕ್ಕವನಾಗಿರುವವನು ಯಾರೂ ಇಲ್ಲವೆಂದು ಜನರು ನೆನಸುವ ಹಾಗೆ ಪ್ರಯತ್ನ ಮಾಡುವನು. ಆದರೆ ಹುಲಿಯು ಕುರಿಯ ವೇಷ ಧರಿಸಿದರೂ ಹುಲಿಯ ಸ್ವಭಾವವು ಬೇರೆಯಾಗುವದುಂಟೋ?

ಕೃಷ್ಣರಾ: ಇದು ಸತ್ಯ! ಹುಲಿಗೆ ಏನು ಮಾಡಿದರೂ ಹುಲಿಯಾಗಿಯೇ ಇರುವದು.

ಪಾದ್ರೆ: ನೋಡಿರಿ! ನಾವು ಸಹ ಭೂತಗಳ ಬಲವೂ ಉಪದ್ರವೂ ಮನುಷ್ಯನನ್ನು ಬಾಧಿಸ ಬಹುದೆಂಬದನ್ನು ಒಂದು ತರದಲ್ಲಿ ನಂಬುತ್ತೇವೆ; ಆದರೂ ಇಂಥಾ ಸಂಗತಿಗಳಲ್ಲಿ ಚನ್ನಾಗಿ ಎಚ್ಚರಿಕೆಯಾಗಿರಬೇಕು. ಯಾಕಂದರೆ ಅದರಲ್ಲಿ ಬಹಳ ಸಾರಿ ಮೇಲುಮರಡಿಯೂ, ಮರುಹುವೂ, ಮತಿಭ್ರಾಂತಿಯೂ ಇರುತ್ತದೆ. ಇದರ ಉಪದ್ರಗಳಲ್ಲಿಯೂ ಪಾಪ ಪರಿಹಾರವಾಗುವ ಮಾರ್ಗಗಳಲ್ಲಿಯೂ ಅನೇಕರು ತಪ್ಪು ಮಾಡುತ್ತಾರೆ.

ರಾಮಶೆ: ಇದರಲ್ಲಿ ತಪ್ಪು ಆಗುವದು ಹ್ಯಾಗೆ? ಎಂಬದು ನನಗೆ ತಿಳಿಯುವದಿಲ್ಲ. ಇಂದಿನ ವರೆಗೆ ಭೂತ ಹಿಡಿಯಿತೆಂಬುವದರ ವಿಷಯದಲ್ಲಿ ಬಹಳ ಕೇಳಿದೆನು, ಆದರೆ ಹಿಡಿದವನನ್ನು ಈ ವರೆಗೂ ನೋಡಲಿಲ್ಲ.

ಪಾದ್ರಿ: ಹೌದು, ಇದಕ್ಕಾಗಿ ಹೇಳಿದ್ದು ಹ್ಯಾಗೆ ಎಂಬುವದು ನಿಮಗೆ ತಿಳಿಯುವದಿಲ್ಲ. ಆದ ಸಂಗತಿಗಳ ವಿಷಯದಲ್ಲಿ ಈಗ ನಿಮಗೆ ತಿಳಿಸುತ್ತೇನೆ; ಏನಂದರೆ — ಮೂವತ್ತು ವರುಷ ಪ್ರಾಯದವನಾಗಿ, ಬಹಳ ಉದ್ದವಾಗಿಯೂ ಪುಷ್ಟನಾಗಿಯೂ ಇರುವ ಒಬ್ಬ ಮನುಷ್ಯನು ಅರ್ಶವ್ಯಾಧಿಯವನಾಗಿದ್ದನು; ಹದಿನೆಂಟು ವರುಷದವನಾಗಿರುವಾಗ ಅದು ಶುರುವಾಗಿ ಬಹಳ ಕಠಿಣವಾಗುತ್ತಾ, ಒಂದೊಂದು ಸಾರಿ ಧಾತಿಲ್ಲದೆ ಬೀಳುತ್ತಿದ್ದನು. ಒಂದಾನೊಂದು ದಿವಸದಲ್ಲಿ ಅವನಿಗೆ ವಿಶೇಷವಾದ ಕಷ್ಟ ಉಂಟಾದದರಿಂದ ಅವನ ಹೆಂಡತಿ ಒಬ್ಬನನ್ನು ವೈದ್ಯರಿಗೆ ಕರೆ ಕಳುಹಿಸಿ ತನ್ನ ಗಂಡನಿಗೆ ಹೊಟ್ಟೆ ಉಬ್ಬುವ ರೋಗವಾಯಿತೆಂದು ತಿಳಿಸಿದಳು. ಮತ್ತು ಅದೇ ಆಳು ಮಾವನ ಬಳಿಗೆ ಹೋಗಿ ತಿಳಿಸಿದಾಗ ಮಾವನೂ ದೊಕ್ತರ್ ಧೊರೆಯೂ ಕೂಡಾ ಬಂದು ನೋಡಿ ಇದು ಅರ್ಶವ್ಯಾಧಿಯಿಂದ ಉಂಟಾದದ್ದಲ್ಲದೆ ಹೆಚ್ಚು ಸಂಕಟವಿಲ್ಲವೆಂದು ತಿಳಿದು ಕೊಂಡು, ಬಹಳ ಬಲಹೀನನಾಗಿ ತೋರುವ ಆ ಮನುಷ್ಯನಿಗೆ ವೈದ್ಯರು ಹೇಳಿದ್ದೇನಂದರೆ, — ನಿನಗೆ ಪ್ರಾಣ ಸಂಕಟ ಬಂತೆಂದು ನೀನು ನೆನಸಿದಿ, ಇದು ಬಹಳವಾಗಿ ನೆಗಾಡ ತಕ್ಕ ಸಂಗತಿಯಾಗೆದೆ; ಯಾಕಂದರೆ ನಿನಗೆ ಮುಂಚೆ ಬಹಳ ಸಾರಿ ಆದ ಹಾಗೆ ಈ ಹೊತ್ತು ಸಹ ಸ್ವಲ್ಪ ವಿಶೇಷವಾದ ತರದಲ್ಲಿ ಮಾತ್ರವಾಯಿತು, ಬೇರೇನು ಇಲ್ಲ; ಈಗ ನೀನೆದ್ದು ನಮ್ಮ ಸಂಗಡ ಕೂತು ಕೊಳ್ಳಬಹುದೆಂದು ಹೇಳಿದರು. ಸಂಕಟದವನು ಇದನ್ನು ಕೇಳಿ ಬಹಳ ಸಂತೋಷಿಸಿ ನೋವೆಲ್ಲಾ ಕ್ಷಣದಲ್ಲಿ ಹೋಯಿತೆಂದು ಹೇಳಿ ಎದ್ದು ಅವರ ಸಂಗಡ ಕೂತನು. ಈ ಪ್ರಕಾರ ಅವನನ್ನು ನೋಡುವವರೆಲ್ಲರಿಗೆ ಬಹಳ ಸಂತೋಷವಾಯಿತು. ಶುಮಾರು ಒಂದು ಘಳಿಗೆ ಕೂತ ಮೇಲೆ ಅವನ ಮಾವನು ಅವನನ್ನು ಪರೀಕ್ಷಿಸ ಬೇಕೆಂದು ಪ್ರತ್ಯೇಕವಾದ ಒಂದು ಕೋಣೆಗೆ ತೆಗದು ಕೊಂಡು ಹೋಗಿ ಅವನ ಸಂಗಡ ಸ್ವಲ್ಪ ಮಾತಾಡಿದ

ಮೇಲೆ ಅವನ ಸಂಕಟದ ವಿಷಯದಲ್ಲಿಯೂ ಮಾತಾಡಲಿಕ್ಕೆ ಆರಂಭಿಸಿ ಬೆಳಗ್ಗೆ ಹ್ಯಾಗೆ ಇತ್ತೋ ಹಾಗೆಯೇ ಇನ್ನೊಮ್ಮೆ ತೊಡಗುವದೆಂದು ವೈದ್ಯರು ತಿಳಿಸಿದರೆಂಬಂತೆ ಹೇಳಿದ್ದನ್ನು ಅವನು ಕೇಳಿ, ಹೌದು ಈಗಲೇ ತಿರಿಗಿ ಆರಂಭವಾಗುವ ಹಾಗೆ ಆಗುತ್ತದೆಂದು ಹೇಳಿದನು; ಆಗ ಅವನ ಮಾವನು ಬಹಳ ನಗಾಡಿ ಅವನನ್ನು ಹಾಸ್ಯ ಮಾಡಿ ಪರೀಕ್ಷೆ ಮಾಡಲಿಕ್ಕಾಗಿ ಮಾತ್ರ ಇದನ್ನು ಹೇಳಿದೆನೆಂದು ತಿಳಿಸಿದಾಗ ಮುಂಚಿನ ಹಾಗೆಯೇ ಅವನಿಗೆ ಉಂಟೆಂದು ಕಂಡಿತು. ಅದೇ ಪ್ರಕಾರ ಸಂಕಟದವರನ್ನು ನೋಡುವವರಿಗೆ ಮೇಲುಮರಡಿಯಾಗಿರ ಬಹುದು. ಒಂದು ಊರಿನಲ್ಲಿ ಒಬ್ಬ ಹೆತ್ತವಳು ಬಹಳ ತಲೆ ನೋವು ಇದ್ದವಳಾಗಿ ಒಂದೊಂದು ಸಾರಿ ಬಗುಳುಸನ್ನಿಯುಳ್ಳವಳಾಗಿದ್ದಳು. ಬುದ್ಧಿ ಸ್ಥಿರವಿರುವ ಸಮಯದಲ್ಲಿ ತನ್ನ ಗಂಡನ ಮತ್ತು ಕೂಸಿನ ವಿಷಯದಲ್ಲಿ ಬಹಳ ದುಃಖ ಪಡುವವಳಂತೆ ಮಾತಾಡಿ, ಇನ್ನು ಮುಂದೆ ಬದುಕುವದು ಕಾಣುವದಿಲ್ಲವೆಂದು ಹೇಳಿ ತನ್ನನ್ನು ಹೂಣಿಡ ಬೇಕೆಂಬ ಸ್ಥಳ ಮುಂತಾದ್ದನ್ನು ತೋರಿಸಿದಳು. ಇದನ್ನು ಕೇಳಿದವರಲ್ಲಿ ಒಬ್ಬನು — ನೀನು ಸತ್ತ ಮೇಲೆ ಎಲ್ಲಿಗೆ ಹೋಗುವಿ? ಅಂತ ಕೇಳಿದನು. ಈ ಮಾತಿಗಾಗಿ ಅವಳು ಬಹಳ ಹೆದರಿ ನಡುಗಿದಳು. ರಾತ್ರಿಯಲ್ಲಿ ನಿದ್ರೆ ಬರಲಿಲ್ಲ; ಮಧ್ಯ ರಾತ್ರಿಯಲ್ಲಿ ಬಹಳ ಜ್ವರವೂ ಬಂದು ಬಗುಳುಸನ್ನಿಯೂ ಆದಾಗ ತಾನು ಸಾಯುತ್ತೇನೆಂದು ಬಹಳ ಸಾರಿ ಕೂಗಿ ಒಂದು ಚೂರಿ ತೆಗದು ಕೊಂಡು ಯಾರೂ ನೋಡದೆ ಇರುವಾಗ ಕೊರಳು ಕೊಯ್ದು ಕೊಳ್ಳಲಿಕ್ಕೆ ತೊಡಗಿದಳು; ಶುಮಾರು ಘಾಯವಾದಾಗ, ಅವಳ ಹತ್ತರ ಇದ್ದವರು ರಕ್ತ ಬರುವದನ್ನು ನೋಡಿ, ಗೌಜಿ ಮಾಡಿ, ನೆರೆಯವರನ್ನೂ ವೈದ್ಯರನ್ನೂ ಕರೆಸಿದರು. ನೆರೆಯವರು ಅವಳನ್ನು ಚೂತ ಹಿಡಿದು ಮರುಳು ಮಾಡಿತೆಂದು ಹೇಳಿದರು. ವೈದ್ಯರು ಬಂದು ಪರೀಕ್ಷೆ ಮಾಡುವಾಗ ಇದು ಚೂತವಾಗಲೀ ಮರುಳಾಗಲೀ ಅಲ್ಲ, ಅವಳ ತಲೆಗೆ ಹಾಲು ಏರಿಧವರಿಂದ ಈ ಪ್ರಕಾರವಾಯಿತೆಂದು ಹೇಳಿ, ಆ ಘಾಯವನ್ನು ಕಟ್ಟುವಾಗ ಅವಳು ಬಹಳ ಬೈದು ಅಪಹಾಸ್ಯ ಮಾಡಿ ಕೆಟ್ಟ ಮಾತುಗಳನ್ನು ಹೇಳಿದಳು. ಅವಳ ತಲೆಯ ಕೂದಲುಗಳನ್ನು ತೆಗಸಿ, ಮದ್ದು ತಲೆಗೆ ಇಟ್ಟು ಸಾಸಿವೆಯ ಹಿಟ್ಟಿನ ಪೋ

ಲ್ಪಿಸನ್ನು ಕಾಲುಗಳಿಗೆ ಹಚ್ಚಿ ಹೊಟ್ಟೆಗೆ ಮದ್ದನ್ನು ಕೊಟ್ಟರು. ಕೆಲವು ಘಳಿಗೆ ಹೋದ ಮೇಲೆ ಗುಣವಾಗುತ್ತಾ, ಸಂಕಟದವಳಿಗೆ ಸ್ಥಿರ ಬುದ್ಧಿ ಉಂಟಾದಾಗ, ತನಗೆ ಘಾಯ ಮಾಡಿ ಕೊಂಡದ್ದನ್ನಾದರೂ ವೈದ್ಯರನ್ನು ಬೈದ ಸಂಗತಿಯನ್ನಾದರೂ ಒಂದೂ ತಿಳಿಯದೆ ಇದ್ದು ಬಹಳ ದುಃಖ ಮಾಡಿದಳು. ಘಾಯವು ಬೇಗ ಗುಣವಾಗಿ ಎರಡು ವಾರಗಳೊಳಗೆ ಪೂರ್ಣ ಸ್ವಸ್ಥವಾದಳು. ಈ ಪ್ರಕಾರ ಭೂತದ ಉಪದ್ರವೆಂದು ಜನರು ಹೇಳುವಂಥಾ, ಅನೇಕ ಸಾರಿ ಶಾಂತಿಯಾಗಲಿಕ್ಕೆ ಮದ್ದು ಕೊಟ್ಟಾಗ, ಭೂತಪೀಡೆ ಎಂದು ನೆನಸುವಂಥಾ ಉಪಹತಿಯು ಒಂದೇ ದಿವಸದಲ್ಲಿ ನಿಂತು ಹೋಗುತ್ತದೆ. ಎಷ್ಟು ಸಾರಿ ಜನರು ನನ್ನ ಬಳಿಗೆ ಬಂದು ಭೂತಗಳ ಇಲ್ಲವೆ ಸತ್ತವರ ಉಪದ್ರವೆಂದು ಹೇಳುತ್ತಾರೆ! ಪರೀಕ್ಷೆ ಮಾಡಿ ನೋಡುವಾಗ ಅದು ಪಿತ್ತತಲೆಗೆ ಏರಿದದರಿಂದಾಗಲೀ, ಹೊಟ್ಟೆಯಲ್ಲಿ ಹುಳ ತುಂಬಿದ್ದದರಿಂದಾಗಲೀ, ಇಲ್ಲವೆ ಈ ತರದ ಏನಾದರೊಂದು ಸಂಗತಿ ಉಂಟೆಂದು ಕಂಡು ಅದಕ್ಕೆ ತಕ್ಕ ಔಷಧವನ್ನು ಕೊಟ್ಟದರಿಂದ ಕೆಲವು ದಿವಸದೊಳಗೆ ಶುಮಾರು ಜನರಿಗೆ ಗುಣವಾಯಿತು. ಕೆಲವು ತಿಂಗಳ ಮುಂಚೆ ಒಬ್ಬ ಸ್ತ್ರೀಯ ಸಂಗತಿಯನ್ನು ನನಗೆ ತಿಳಿಸಿದರು; ಅದೇನಂದರೆ: ಅವಳು ಶುಮಾರು ೪೦ ವರುಷ ಪ್ರಾಯದವಳಾಗಿದ್ದು ಹೊಟ್ಟೆ ಉಬ್ಬಿ ಹೋದದರಿಂದ ಅವಳು ಬಸುರೆಂದು ನೆನಸಿ ಎಲ್ಲರೂ ಬಹಳ ಆಶ್ಚರ್ಯ ಪಟ್ಟರು. ಆದರೆ ಅದು ರೋಗವೆಂದು ತಿಳಿದು ಕೊಂಡಾಗ, ಜಲೋದರ ರೋಗವೆಂದು ನೆನಸಿ ಶುಮಾರು ಒಂದು ವರುಷ ತನಕ ಇದಕ್ಕೆ ಮದ್ದು ಮಾಡಿದರು. ಅವಳು ಹೆಚ್ಚು ಹೆಚ್ಚಾಗಿ ಬಲಹೀನಳಾಗಿ ಸತ್ತು ಹೋದಳು. ಅವಳನ್ನು ಸುಡುವದಕ್ಕೆ ಕೊಂಡು ಹೋಗಿ ಬೆಂಕಿ ಮಾಡಿ ಸ್ವಲ್ಪ ಸಮಯ ಉರಿಯುವಾಗ, ಹೊಟ್ಟೆ ಬಿಚ್ಚಿ ಹೋಗಿ ಹುಳದ ರಾಶಿಯು ಕಾಣ ಬಂತಂತೆ. ಒಂದೊಂದು ಸಾರಿ ಒಬ್ಬನಿಗೆ ಅರ್ಶವ್ಯಾಧಿಯು ಇದ್ದರೆ, ಅವನಿಗೆ ಭೂತ ಹಿಡಿಯಿತೆಂದು ನೆನಸುತ್ತಾರೆ. ಆದರೆ ವಿಶೇಷವಾಗಿ ಕಾಮಾತುರದ ನಾನಾ ಅಶುದ್ಧ ಕೆಲಸಗಳಿಂದುಂಟಾದ ನರರಸಗಳ ಬಲಹೀನತ್ವ ಮಂದತ್ವ ಸನ್ನಿ ಮುಂತಾದ ರೋಗಗಳುಂಟಾಗುವಾಗ ಭೂತಗಳ ಉಪದ್ರವೆಂದು ಹೇಳುತ್ತಾರೆ.

ರಾಮಶೆ: ಚಂದ್ರಭಟ್ಟರೇ! ನೀವು ಧೊರೆ ಹೇಳುವದರ ವಿಷಯ ಏನೂ ಉತ್ತರ ಕೊಡುವದಿಲ್ಲ.

ಚಂದ್ರಭ: ನಾನು ಏನು ಹೇಳಲಿ? ಅವರಿಗೆ ಈ ರೋಗದ ಸಂಗತಿಯು ನಮಗಿಂತ ಹೆಚ್ಚು ಗೊತ್ತುಂಟು. ಅವರು ಹೇಳುವದರಲ್ಲಿ ಸಂಶಯ ಏನೂ ಇಲ್ಲ. ಬಹಳ ಆಶ್ಚರ್ಯವಾದ ಸಂಗತಿಗಳನ್ನು ತಿಳಿಸಿ ಎರಡು ಮೂರು ದಿವಸದೊಳಗೆ ಗುಣವಾಯಿತಂತಲ್ಲವೋ? ಇದಕ್ಕೆ ಇನ್ನೇನು ಹೇಳ ಬಹುದು?

ಪಾದ್ರಿ: ನಿಮ್ಮಲ್ಲಿ ಮದ್ದು ಕೊಡುವವರು ಜನರಿಗೆ ಒಂದೊಂದು ಸಾರಿ ಬಹಳ ಮೋಸ ಮಾಡಿ ಬಹಳ ಹಣ ತೆಗದು ಕೊಂಡು ನೆಗಾಡುತ್ತಿರುತ್ತಾರೆ ಎಂಬುವದಕ್ಕೂ ಒಂದು ದೃಷ್ಟಾಂತ ಕೊಡುತ್ತೇನೆ: — ಒಬ್ಬನಿಗೆ ಸಂಕಟವಾದಾಗ, ಅವನ ಸಂಸಾರದವರು ಅವನಿಗೆ ಸ್ಥಿರ ಬುದ್ಧಿ ಇಲ್ಲವೆಂದು ನೆನಸಿದರು. ಅವನು, ಒಬ್ಬ ಮಾಟಗಾರನು ಒಂದು ಹಲ್ಲಿ ತನ್ನ ಹೊಟ್ಟೆಯೊಳಗೆ ಹೋಗ ಮಾಡಿದನೆಂದೂ, ಅದು ತನ್ನಲ್ಲಿ ಜೀವವಾಗಿ ಉಂಟೆಂದೂ ನೆನಸಿ ಅನೇಕ ವೈದ್ಯರ ಹತ್ತರ ಹೋಗಿ ಬಹಳ ಹಣ ಖರ್ಚು ಮಾಡಿ ಬಹಳ ಔಷಧಗಳನ್ನು ತೆಗದು ಕೊಂಡು ಮಂತ್ರ ಮುಂತಾದ ಕ್ರಿಯೆಗಳನ್ನು ಮಾಡಿ ಹರಿಕೆ ಹೇಳಿ ಕೊಂಡಾಗ್ಯೂ ಗುಣವಾಗಲಿಲ್ಲ. ಹಾಗೆಯೇ ಅವನು ನಮ್ಮ ಮತದವನಾಗಿರುವ ಒಬ್ಬ ವೈದ್ಯನ ಬಳಿಗೆ ಹೋಗಿ ತನ್ನ ಸಂಗತಿಗಳನ್ನು ತಿಳಿಸಿದಾಗ, ಹಲ್ಲಿ ಉಂಟೆಂದು ಸುಮ್ಮನೆ ನೆನಸುವದು ಹೊರ್ತಾಗಿ ಇವನಿಗೇನೂ ಸಂಕಟವಿಲ್ಲವೆಂದು ತಿಳಿದು ಒಂದು ಶೀಶೆಯಲ್ಲಿ ಬರೇ ನೀರನ್ನು ತುಂಬಿಸಿ ಅದನ್ನು ಮೂರು ದಿವಸಕ್ಕೆ ಸಮ ಮಾಡಿ ಕುಡಿದು ಆದ ಮೇಲೆ ತಿರುಗಿ ಬರ ಬೇಕೆಂದು ಅಪ್ಪಣೆ ಕೊಟ್ಟು ಕಳುಹಿಸಿದನು. ಅಷ್ಟರೊಳಗೆ ಒಂದು ಹಲ್ಲಿಯನ್ನು ಹಿಡಿದು ಒಂದು ಸಣ್ಣ ಪೆಟ್ಟಿಗೆಯಲ್ಲಿ ಹಾಕಿ ಇವನು ತಿರುಗಿ ಬರುವ ತನಕ ಜೀವದಿಂದುಳಿಯುವ ಹಾಗೆ ಮಾಡಿ ನಾಲ್ಕನೇ ದಿವಸದಲ್ಲಿ ಅವನು ಬರುವಾಗ ಅವನಿಗೆ ಚನ್ನಾಗಿ ವಾಂತಿಯಾಗುವ ಹಾಗೆ ಒಂದು ಮದ್ದನ್ನು ಕೊಟ್ಟು ಅಲ್ಲಿಯೇ ಮಲಗಲಿಕ್ಕೆ ಹೇಳಿದನು. ವಾಂತಿ ಮಾಡುತ್ತಿರುವಾಗ ಆ ಹಲ್ಲಿಯನ್ನು ಅವನ ಹತ್ತರ ತಕ್ಕೊಂಡು

ಬಂದು ಅವನು ಮಾಡಿದ ವಾಂತಿಯೊಳಗೆ ಅವನು ನೋಡದ ಹಾಗೆ ಹಾಕಿ ಆ ಮೇಲೆ ಅದನ್ನು ಅವನಿಗೆ ತೋರಿಸಿ, ಇಗೋ! ಈಗ ಹಲ್ಲಿಯು ವಾಂತಿಯಾಗಿ ಬಂತೆಂದು ಸಂತೋಷವುಳ್ಳ ಮುಖದಿಂದ ಆ ವೈದ್ಯನು ಹೇಳಿವನು. ಆಗ ಆ ರೋಗಿಷ್ಠನು ಆ ಹಲ್ಲಿಯು ತನ್ನ ಹೊಟ್ಟೆಯಿಂದ ಬಂತೆಂದು ನಂಬಿ ಗುಣವಾದನು. ಹಾಗೆಯೇ ಮತ್ತೊಬ್ಬನು ತನ್ನ ತಲೆಯಲ್ಲಿ ಹುಳ ಉಂಟೆಂದು ನೆನಸಿ ನಾನಾ ತರದ ಚಿಕಿತ್ಸೆ ಮಾಡಿದನು. ಆದರೆ ಏನೂ ಗುಣವಾಗುವದಿಲ್ಲವೆಂದು ನೋಡಿದಾಗ ಅವನ ಗುರುತಿನವನಾಗಿರುವ ಒಬ್ಬ ಯುಕ್ತಿಯುಳ್ಳವನು ಕೆಲವು ಹುಳಗಳನ್ನು ಹಿಡಿದು ಅವನ ಬಳಿಗೆ ಹೋಗಿ ಒಂದು ಸಣ್ಣ ಸೂಜಿಯನ್ನು ಅವನ ಕಿವಿಯಲ್ಲಿ ಹಾಕಿ ತಿರುಗಿ ತೆಗಿಯುವಷ್ಟರೊಳಗೆ ಆ ಹುಳಗಳಲ್ಲಿ ಒಂದನ್ನು ಮೆಲ್ಲಗೆ ತೆಗದು ಅವನಿಗೆ ತೋರಿಸಿ ಇಗೋ, ಈ ಹುಳವನ್ನು ನಿನ್ನ ಕಿವಿಯಿಂದ ಎಳೆದು ತೆಗದೆನೆಂದು ಹೇಳಿ, ಈ ಪ್ರಕಾರವೇ ಕೆಲವು ಸಾರಿ ಮಾಡಿ ಹುಳಗಳನ್ನು ಅವನಿಗೆ ತೋರಿಸಿದಾಗ ಹುಳ ಉಂಟೆಂದು ನೆನಸಿದವನು ನಂಬಿ ಗುಣವಾದನು. ಇಂಥಾ ಸಂಗತಿಗಳು ಅನೇಕ ನಡಿಯುತ್ತವೆ, ಮತ್ತು ಬುದ್ಧಿ ಇಲ್ಲದ ಜನರು ಇಂಥವುಗಳನ್ನು ಪರೀಕ್ಷೆ ಮಾಡದೆ ಎಲ್ಲಾ ಸತ್ಯವೆಂದು ನೆನಸುತ್ತಾರೆ.

ಪಾಟಾಳಿ ಪೂ: ನಾವು ಹಳ್ಳೀಜನರಲ್ಲ? ನಾವು ಹ್ಯಾಗೆ ಪರೀಕ್ಷೆ ಮಾಡ ಬಹುದು?

ಪಾದ್ರಿ: ಹ್ಯಾಗಾದರೂ ಜನರು ಇಂಥಾ ಸಂಗತಿಗಳನ್ನು ಹೇಳಿದರೆ, ಅದೆಲ್ಲಾ ಸತ್ಯವೆಂದು ನೆನಸಲಿಕ್ಕಾಗದು. ಬಹಳ ಆಶ್ಚರ್ಯವಾಗಿಯೂ ಅದ್ಭುತವಾಗಿಯೂ ನಮ್ಮ ಸುತ್ತಲೂ ಇರುವ ಕೆಲವು ಸಂಗತಿಗಳನ್ನು ತೋರಿಸುತ್ತೇನೆ. ಸೂಜಿಕಲ್ಲು ನಿಮಗೆ ಗೊತ್ತುಂಟೋ? ಅದು ಕುಮಾರು ದೂರದಿಂದ ಚಿಕ್ಕ ಕಬ್ಬಿಣದ ತುಂಡುಗಳನ್ನು ಎಳೆಯುತ್ತದೆ; ಅದರಿಂದ ಆಕರ್ಷಣ ವಿದ್ಯೆಯಾಯಿತು. ಐವತ್ತು ವರುಷಗಳ ಮುಂಚೆ ಹೆಲ್ ಎಂಬ ಒಬ್ಬ ಧೊರೆಯು ಕಬ್ಬಿಣದಂತೆ ಕಾಣುವ ಚಿಕ್ಕ ತುಂಡುಗಳನ್ನು ತೆಗದು ಸಂಕಟದವರಿಗೆ ಮುಟ್ಟಿಸಿ ಈ ಪ್ರಕಾರ ಸ್ವಸ್ಥ ಮಾಡುತ್ತಾರೆಂಬ ಸುದ್ದಿಯನ್ನು ಮೆಸ್ಮರ್ ಎಂಬ ವೈದ್ಯರು ಕೇಳಿ ಆ ಹೆಲ್ ಧೊರೆಯ ಬಳಿಗೆ ಹೋಗಿ ಅದರ ಸಂಗತಿಯನ್ನು ವಿಚಾರಿಸಿದರು. ಆ ಹೆಲ್ ಧೊರೆ ಕೆಲ

ವು ಕಬ್ಬಿಣದ ಕೋಲುಗಳನ್ನು ತೋರಿಸಿ ಇವುಗಳಿಗೆ ಸೂಜಿಕಲ್ಲನ್ನು ಸ್ವಲ್ಪ ಮುಟ್ಟಿಸಿ ಇಟ್ಟು, ಆ ಮೇಲೆ ಸಂಕಟದವರು ಇಂಥಾ ಕಬ್ಬಿಣದ ಕೋಲುಗಳನ್ನು ಮುಟ್ಟುವಂತೆ ಮಾಡಿ, ಅವುಗಳಿಂದ ಅನೇಕರಿಗೆ ಗುಣವಾಗುವದನ್ನು ನೋಡಿ, ಮತ್ತು ಬೇರೆ ಬೇರೆ ದೇಶಗಳಿಗೆ ಪ್ರಯಾಣವಾಗಿ ಹೋಗಿ ಅದೇ ರೀತಿ ಮಾಡಿದಾಗ ಜನರಿಗೆಲ್ಲಾ ಸ್ವಸ್ಥವಾದದ್ದಲ್ಲದೆ ಅದರ ವಿಷಯ ಎಲ್ಲೆಲ್ಲಿಯೂ ಬಹಳ ಆಶ್ಚರ್ಯ ಪಟ್ಟು ಮಾತಾಡಿದರು. ಕೆಲವು ವರುಷ ಹೀಗೆ ನಡಿಯಿತು. ಆದರೆ ಆ ಮೇಲೆ ಸಂಕಟದವರು ಗುಣವಾಗುವದು ಕಡಿಮೆಯಾಗುತ್ತಾ ಬಂದದರಿಂದ ಕಡೇಲಿ ಈ ಕೆಲಸವನ್ನು ಬಿಡ ಬೇಕಾಯಿತು. ಈಗ ಅಪರೂಪವಾಗಿ ಮಾತ್ರ ನಡಿಯುತ್ತದೆ. ಅಗ್ನೀಕರಣವಿದ್ಯೆಯು ಅದೇ ತರದಲ್ಲಿ ಬಹಳ ಆಶ್ಚರ್ಯವುಳ್ಳದ್ದಾಗಿರುತ್ತದೆ. ಇದರಿಂದ ಈ ತಂತಿಟಪ್ಪಾಲ್ ಎಂಬದು ಉಂಟಾಗಿ ಈಗ ನಡಿಯುತ್ತದೆ; ಮಂಗಳೂರಿನಲ್ಲಿ ಒಬ್ಬನು ಕೂತು ಯಾವ ಗುರುತನ್ನು ಮಾಡುತ್ತಾನೋ, ಅದೇ ಸಮಯದಲ್ಲಿ ಅದು ಮಡಕೇರಿಯಲ್ಲಾಗಲೀ ಮುಂಬಾಯಲ್ಲಾಗಲಿ ಆ ಗುರುತನ್ನು ಬರೆಯುತ್ತದೆ. ಮತ್ತು ಹಾಗೆಯೇ ನಾವೆಯೂ ಗಾಡಿಗಳೂ ಬಹಳ ಭಾರವಾಗಿದ್ದರೂ ಹೊಗೆಯ ಬಲದಿಂದ ಅಷ್ಟು ಚಮತ್ಕಾರದಲ್ಲಿ ಹೋಗುವದು ಬಹಳ ಆಶ್ಚರ್ಯವಾಗಿಯೂ ವಿಚಿತ್ರವಾಗಿಯೂ ಇರುತ್ತದಲ್ಲವೋ? ಆದರೆ ಇಂಥಾ ಸಂಗತಿಗಳನ್ನು ತಿಳಿಯದವರು, ಅಪರೂಪವಾದಂಥ ಸಂಗತಿಯಾಗಿರುವದರಿಂದ, ಅದು ಒಂದು ವೇಳೆ ಭೂತದ ಇಲ್ಲವೆ ಬೇರೊಂದರ ಬಲದಿಂದ ನಡಿಯುತ್ತದೆಂದು ನೆನಸ್ಯಾರು.

ಚಂದ್ರಭ: ಹೌದು, ನೀವು ಈಗಲೇ ಹೇಳಿದ್ದನ್ನು ನಾವು ಸ್ವಲ್ಪ ಆಲೋಚಿಸಿ ನೋಡಿ ಬಹಳ ಆಶ್ಚರ್ಯ ಪಡುತ್ತೇವೆ. ಲೋಕದಲ್ಲಿ ತಿಳಿಯದ್ದು ಬಹಳ ಉಂಟು, ಮತ್ತು ಜನರು ಮಾಡುವ ಮೋಸವೂ ಹುಚ್ಚುತನವೂ ಅನೇಕ ಉಂಟು; ಆದರೆ ಭೂತಗಳನ್ನು ಕುರಿತು ವಿಶೇಷವಾಗಿ ಮನುಷ್ಯನಿಗೆ ಸಮ್ಮಂಧಿಸುವದು ಏನಿಲ್ಲವೆಂದು ನಂಬುತ್ತೀರೋ?

ರಾಮಶೆ: ಕೋಲ ಮುಂತಾದ್ದನ್ನು ಮಾಡುವಾಗ ಭೂತವು ಪೂಜಾರಿಯನ್ನು ಹಿಡಿಯುತ್ತದೆಂದು ನಂಬುವದಿಲ್ಲವೋ?

ಪಾದ್ರಿ: ಕೆಲವು ಸಾರಿ ಹೇಳಿದ ಹಾಗೆ ಇನ್ನೊಂದು ಸಾರಿ ಹೇಳು ತ್ತೇನೆ; ಭೂತ ಇಲ್ಲವೆ ದೆವ್ವಗಳ ಬಲದಿಂದ ಹಿಡಿಯಲ್ಪಟ್ಟವನಾಗಿ ಒಂ ದೊಂದು ಸಾರಿ ಇಂಥವನಿಗೆ ತಕ್ಕ ಕ್ರಿಯೆಯನ್ನು ಮಾಡುತ್ತಾನೆ; ಆದರೆ ಸಾಧಾರಣವಾಗಿ ಅವರು ಮಾಡುವಂಥಾದ್ದು ಒಂದು ಆಟದ ಹಾಗೆ ಯೇ ಆಗಿರುತ್ತದೆ. ಅವರು ಬಹಳ ಅಭ್ಯಾಸದಿಂದ ಜನರ ಕಣ್ಣು ಕಟ್ಟು ತ್ತಾರೆ. ಮುಂಚೆ ಅದೇ ಕ್ರಿಯೆಯನ್ನು ಮಾಡಿ ಈಗ ನಮ್ಮ ಕ್ರೈಸ್ತ ಮತಕ್ಕೆ ಬಂದ ಪೂಜಾರಿಗಳು ಇದಕ್ಕೆ ಸಾಕ್ಷಿ ಹೇಳುತ್ತಾರೆ. ಏನಂದರೆ ಸಂಜೆಯ ತನಕ ಊಟ ಮಾಡದೆ ಕೂತು ಕೊಳ್ಳುವಾಗ ಒಂದು ತರದ ಗರ್ವದ ಮನಸ್ಸು ಇರುತ್ತದೆ; ಇದಲ್ಲದೆ ಜನರ ಸಮೂಹವನ್ನು ನೋಡಿ ಅವರ ಘೋಷವನ್ನು ಕೇಳುವಾಗ, ಸ್ವಲ್ಪ ತಲೆ ತಿರುಗುವ ಹಾಗೆ ಆಗುವದುಂ ಟು. ವೇಷ ಕಟ್ಟಿ ನಾಟ್ಯವಾಡುವದನ್ನು ನೋಡಿದವರು ಭೂತವು ಅ ವನನ್ನು ಹಿಡಿಯಿತೆಂದು ನಂಬುತ್ತಾರೆ. ಇಂಥಾ ಪೂಜಾರಿಯು ತನ್ನ ನ್ನು ತಿವಿದು ಕೊಳ್ಳುವಾಗ ನೋವಾಗುವದಿಲ್ಲವೆಂದು ಹೇಳುವದು ಸುಮ್ಮನೆ; ಇದನ್ನು ಪಾಟಾಳಿ ಪೂಜಾರಿಯು ತೋರಿಸಿದನು. ಪೂ ಜಾರಿಗಳು ಸಾಧಕದಿಂದ ತಮ್ಮ ಕೈಗಳಲ್ಲಿರುವ ಕತ್ತಿಗಳಿಂದ ತಮ್ಮ ಹೊಟ್ಟೆಗಳನ್ನು ತಿವಿದು ಕೊಂಡರೆಂದು ದೂರದಲ್ಲಿ ನಿಂತು ನೋಡುವ ವರು ನೆನಸುವ ಹಾಗೆ ಮಾಡುತ್ತಾರೆ. ಒಂದೊಂದು ಸಾರಿ ಸ್ವಲ್ಪ ಘಾ ಯವಾಗುವದು; ಯಾಕಂದರೆ ಹಾಗೆಯೇ ಪೂರ್ವದಲ್ಲಿ ನಿಶ್ಚಯವಾ ಗಿ ಮಾಡಿದರು. ಪ್ರವಾದಿಯಾದ ಎಲಿಯನ ಸಮಯದಲ್ಲಿ ಬಾಳನ ಪೂಜಾರಿಗಳು ತಮ್ಮ ಮರ್ಯಾದೆಯ ಪ್ರಕಾರವೇ ದೊಡ್ಡ ಶಬ್ದದಿಂ ದ ಕೂಗಿ ರಕ್ತವು ತಮ್ಮ ಮೇಲೆ ಸೋರುವ ಮಟ್ಟಿಗೂ ಕತ್ತಿಗಳಿಂದಲೂ ಚೂರಿಗಳಿಂದಲೂ ತಮ್ಮನ್ನು ಕೊಯಿದು ಕೊಂಡರೆಂದು ನಾವು ಓದುತ್ತೇವೆ. ಈ ಸಂಗತಿಗಳು ಇಲ್ಲಿಯ ಭೂತಗಳ ಪೂಜೆಗೆ ಬಹಳ ಮಾನಕರವಾ ಗಿರುವದೆಂದು ಕಾಣುತ್ತದೆ; ಆದರೆ ರಕ್ತ ಬರುವ ತನಕ ಇಂಥಾ ಘಾಯ ಮಾಡಿದ ಪೂಜಾರಿಯು ಈ ದೇಶದಲ್ಲಿ ಸಿಕ್ಕುತ್ತಾನೋ ಏನೋ! ಹ ತ್ತು ವರುಷಗಳ ಈಚೆಗೆ ನಾನು ಒಬ್ಬನನ್ನಾದರೂ ನೋಡಲಿಲ್ಲ. ಇ ಲ್ಲವೆ ನೀವು ಇಂಥವರನ್ನು ನೋಡಿದ್ದೀರೋ?

ರಾಮಶೆ: ಅದರ ಸಂಗತಿ ಕೇಳುವದು ಹೊರ್ತಾಗಿ ನೋಡಲಿಕ್ಕೆ ಶಿಕ್ಕುತ್ತದೋ?

ಪಾದ್ರೆ: ಕೆಟ್ಟ ಆತ್ಮಗಳಾಗಿರುವ ಭೂತಗಳ ಉಪದ್ರವು ಪರಿಹಾರ ವಾಗುವದರ ವಿಷಯದಲ್ಲಿ ಜನರು ಹೇಳುವದೂ ಮಾಡುವದೂ ಶಾಸ್ತ್ರದಲ್ಲಿ ಬರದದ್ದೂ ಒಂದಕ್ಕೊಂದು ಸರಿ ಬೀಳುವದಿಲ್ಲವೆಂದು ನೋಡಿದೆವು; ಯಾಕಂದರೆ ಒಂದು ಭೂತ ಮತ್ತೊಂದು ಭೂತವನ್ನು ಓಡಿಸಬಹುದೇ? ಈ ಪ್ರಕಾರ ಮಾಡುವದೆಲ್ಲಾ ಮಣ್ಣುಕಾಲು ನೀರಿಗೆ ಹಾಕಿದ ಹಾಗೆಯೇ; ಅದು ಆಗದು ಅಲ್ಲವೋ? ಅದರಲ್ಲಿ ನಡಿಯುವವರು ಅದರ ಸಂಗಡ ನೀರಿಗೆ ಬೀಳುತ್ತಾರೆ. ಇದಕ್ಕೆ ವಿಶೇಷವಾಗಿ ಕುಷ್ಠರೋಗದವರು ಸಾಕ್ಷಿಯಾಗಿದ್ದಾರೆ; ನಾಗೋಪದ್ರವೆಂದು ಹೇಳಿ ಅದನ್ನು ಪರಿಹರಿಸಲಿಕ್ಕಾಗಿ ಬೇಕಾದ ಹರಿಕೆ ಹೇಳಿ ನಾಗ ಕಲ್ಲಿಟ್ಟು ಸುಬ್ರಮ್ಹಣ್ಯ ದೇವಸ್ಥಾನದಲ್ಲಿ ಮಡಸ್ತಾನ ಹಾಕಿದರೂ ಸಾಧಾರಣವಾಗಿ ಹೆಚ್ಚು ಹೆಚ್ಚಾಗಿ ಬಲಹೀನರಾಗಿ ಸತ್ತು ಹೋಗುತ್ತಾರೆ. ಕದ್ದು ಕೊಂಡ ಸಾಮಾನವನ್ನು ಅಡಗಿಸುವವನು ಹ್ಯಾಗೆ ಕಳ್ಳನಿಗೆ ಸಮಾನನಾಗಿದ್ದಾನೋ ಹಾಗೆಯೇ ಮಂತ್ರ ಮಾಡುವ ಭಟ್ಟರು ಮುಂತಾದವರು ಕತ್ತಲೆಯ ರಾಜ್ಯದವರಾಗಿರುವ ಭೂತ ಪಿಶಾಚಿಗಳಿಗೆ ಸಮಾನರಾಗಿದ್ದಾರೆ. ಹಾಗಾದರೆ ನಿಮಗೆ ಅವರಿಂದ ಸಹಾಯವಾಗ ಬೇಕೆಂದು ನೆನಸುವದು ಕದ್ದು ಕೊಂಡ ಸಾಮಾನುಗಳನ್ನು ಕ್ರಯಕ್ಕೆ ತೆಗದು ಕೊಂಡ ಹಾಗೆಯೇ ಅಲ್ಲವೋ? ಇಂಥಾ ಕೆಟ್ಟ ಕೆಲಸದಲ್ಲಿ ಪ್ರಯೋಜನವೂ ದೇವರ ಆಶೀರ್ವಾದವೂ ಇರ ಬಹುದೋ? ಅದು ಬಾಳೇ ತೋಟಕ್ಕೆ ಆನೆ ಬಂದ ಹಾಗಲ್ಲವೋ? ಅದಕ್ಕಾಗಿ ಇಂಥಾ ಕೆಟ್ಟ ಸಂಗತಿಗಳನ್ನು ಬಿಟ್ಟು ಅದಕ್ಕಿಂತ ಒಳ್ಳೇದಾಗಿಯೂ ಸ್ಥಿರವಾಗಿಯೂ ಇರುವ ಸತ್ಯಕ್ಕೆ ಮನಸ್ಸು ಕೊಡ ಬೇಕು! ಅದರ ವಿಷಯದಲ್ಲಿ ಪೂರ್ಣ ಸತ್ಯವಾಗಿರುವ ಕರ್ತನಾದ ದೇವರ ಮಾತನ್ನು ಕೇಳುವಾ; ಅದು ಏನಂದರೆ: ದೇವರ ಮಾರ್ಗವನ್ನು ಡೊಂಕು ಮಾಡಿ ತಮ್ಮ ರಕ್ಷಣೆಯ ದೇವರನ್ನು ಮರತು ಬಿಡುವದರಿಂದ ಬಿಕ್ಕಿ ಬಿಕ್ಕಿ ಅಳುವ ಶಬ್ದ ಕೇಳುತ್ತದೆ; ಇಂಥವರಿಗೆ ದೇವರು ಕರಿಯುತ್ತಾನೆ ಹ್ಯಾಗಂದರೆ: ಹಿಂತಿರಿಗಿದ ಮಕ್ಕಳೇ, ತಿರುಗಿ ಕೊಳ್ಳಿರಿ! ನಿ

ಮ್ಮ ಹಿಂತಿರುಗುವಿಕೆಗಳನ್ನು ಸ್ವಸ್ಥ ಮಾಡುವೆನು. ಜನರೇ! ನೀವು ತಿರುಗಿ ಕೊಂಡರೆ, ನೀವು ನಿಮ್ಮ ಅಸಹ್ಯಗಳನ್ನು ನನ್ನ ಮುಂದಿನಿಂದ ತೊಲಗಿಸಿದರೆ ನಿಮಗೆ ಸಹಾಯ ಮಾಡುವೆನು. ಹೀಗಿರುವದರಿಂದ ಏನು ಮಾಡುವಾ? ಎಂಬುವದನ್ನು ಸಹಾ ದೇವರ ವಾಕ್ಯವು ನಮಗೆ ಹೇಳುತ್ತದೆ. ಹ್ಯಾಗಂದರೆ: ಇಗೋ ನಿನ್ನ ಬಳಿಗೆ ಬರುತ್ತೇವೆ, ಯಾಕಂದರೆ ನೀನೇ, ಓ ಯೆಹೋವ, ನಮ್ಮ ದೇವರಾಗಿದ್ದೀ; ನಿಶ್ಚಯವಾಗಿ ಗುಡ್ಡಗಳಿಂದಲೂ ಬೆಟ್ಟಗಳ ಸಮೂಹದಿಂದಲೂ ರಕ್ಷಣೆ ವ್ಯರ್ಥವಾಗಿದೆ; ನಿಶ್ಚಯವಾಗಿ ನಮ್ಮ ರಕ್ಷಣೆ ನಮ್ಮ ದೇವರಾದ ಯೆಹೋವನಲ್ಲಿಯೇ! ನಾಚಿಕೆಯಾದದ್ದು ನಮ್ಮ ಯೌವನದಾರಭ್ಯ ನಮ್ಮ ತಂದೆಗಳ ಕಷ್ಟವನ್ನು ಅವರ ಕುರಿಗಳನ್ನೂ ಅವರ ದನಗಳನ್ನೂ ಅವರ ಕುಮಾರರನ್ನೂ ಅವರ ಕುಮಾರ್ತೆಗಳನ್ನೂ ತಿಂದು ಬಿಟ್ಟದೆ. ನಮ್ಮ ನಾಚಿಕೆಯಲ್ಲಿ ಮಲಗಿ ಕೊಳ್ಳುತ್ತೇವೆ. ನಮ್ಮ ನಿದ್ದೆ ನಮ್ಮನ್ನು ಮುಚ್ಚಿ ಕೊಳ್ಳುತ್ತದೆ; ಯಾಕಂದರೆ ನಾವೂ ನಮ್ಮ ತಂದೆಗಳೂ ನಮ್ಮ ಯೌವನದಾರಭ್ಯ ಇಂದಿನ ವರೆಗೂ ನಮ್ಮ ದೇವರಾದ ಯೆಹೋವನಿಗೆ ವಿರೋಧವಾಗಿ ಪಾಪ ಮಾಡಿ ನಮ್ಮ ದೇವರಾದ ಯೆಹೋವನ ಶಬ್ದಕ್ಕೆ ಕಿವಿ ಕೊಡಲಿಲ್ಲ. ಮನುಷ್ಯನ ಬಲದಿಂದ ಸಹಾಯವಾಗುವದಿಲ್ಲವೆಂದು ನೀವು ಒಪ್ಪಿ ಕೊಳ್ಳುತ್ತೀರಿ; ಹಾಗಾದರೆ ಸೈತಾನನ ಬಲದಿಂದ ಆಗುವದೆಂದು ನೆನಸಿ ಮಂತ್ರ ಮುಂತಾದವುಗಳನ್ನು ಮಾಡುವದರ ಬದಲಾಗಿ ಸರ್ವತ್ರಾಣವುಳ್ಳ ದೇವರ ಸಹಾಯ ಹುಡುಕದೆ, ಅವನನ್ನು ಬೇಡಿ ಕೊಳ್ಳದೆ ಇರುವದು ನೀತಿಯೋ? ಅವನೇ ನಮ್ಮನ್ನೂ ಎಲ್ಲವುಗಳನ್ನೂ ಉಂಟು ಮಾಡಿ, ದಿನಾಲೂ ಕಾದು ಸಂರಕ್ಷಣೆ ಮಾಡುತ್ತಾನೆ; ಅವನಿಂದ ಮಾತ್ರ ನಮಗೆ ಸಹಾಯ ಬರುತ್ತದೆ; ಅವನೇ ತನ್ನ ಬಳಿಯಲ್ಲಿ ಏನು ಬೇಡಿ ಕೊಳ್ಳ ಬೇಕೆಂಬದನ್ನು ನಮಗೆ ತಿಳಿಸಿದ್ದಾನೆ; ಹ್ಯಾಗಂದರೆ: ಪರಲೋಕದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪರಿಶುದ್ಧವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ, ನಮ್ಮ ಸಾಲಗಳ

ನ್ನು ನಮಗೆ ಬಿಡು! ನಮ್ಮನ್ನು ಶೋಧನೆಯಲ್ಲಿ ಸೇರಿಸದೆ ಕೇಡಿನೊಳಗಿಂದ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಎಂದೆಂದಿಗೂ ನಿನ್ನವೇ. ನೋಡಿರಿ, ಹೀಗೆ ಎಲ್ಲಾ ಕಷ್ಟಗಳಲ್ಲಿ ನಮ್ಮ ಕಣ್ಣುಗಳನ್ನು ಆತನ ಕಡೆಗೆ ಎಬ್ಬಿಸ ಬಹುದು, ಆತನು ನಮ್ಮನ್ನು ಎಲ್ಲಾ ಕೇಡಿಗೆ ತಪ್ಪಿಸುವನು.

ಪುಟ್ಟಣ್ಣಾಚಾ: ಹೌದು, ದಿಕ್ಕಿಲ್ಲದ ಮನುಷ್ಯನಿಗೆ ದೇವರೇ ಗತಿ.

ಪಾದ್ರಿ: ಇದು ನಿಶ್ಚಯವೇ, ಆತನು ಸಕಲ ಮನುಷ್ಯರು ರಕ್ಷಿಸಲ್ಪಟ್ಟು ಸತ್ಯದ ತಿಳುವಿಕೆಗೆ ಬರ ಬೇಕೆಂದು ಮನಸ್ಸುಳ್ಳವನಾಗಿದ್ದಾನೆ; ಅದಕ್ಕಾಗಿ ಈ ಸತ್ಯವನ್ನು ತನ್ನ ವಾಕ್ಯದಲ್ಲಿ ನಮ್ಮ ರಕ್ಷಣೆಗಾಗಿ ಬರಿಸಿ ತಿಳಿಸಿದನು. ಅವನೇ ಎಲ್ಲಾ ರಕ್ಷಣೆಯ ಮಾರ್ಗವನ್ನು ಗೊತ್ತು ಮಾಡಿ, ತನ್ನ ದಯೆಯ ಚಿತ್ತದ ಪ್ರಕಾರ ನಿರ್ಣಯಿಸಿದ ಸಮಯದಲ್ಲಿ ಸಾರಿದನು. ಆತನೇ ನಮ್ಮ ಮೇಲೆ ಕರುಣೆ ಮಾಡಿ ಎಲ್ಲರೂ ಅದರಲ್ಲಿ ನಡಿಯಲಿಕ್ಕೆ ಕೂಡುವ ಹಾಗೆ ಸಮಾಧಾನದ ಮಾರ್ಗವನ್ನು ತೋರಿಸಿದನು. ಅವನ ಮೇಲೆ ಭರವಸವಿಟ್ಟು ಅವನ ಸಹಾಯ ಕಾದು ಕೊಳ್ಳುವವರು ಭಾಗ್ಯವಂತರು.

ರಾಮಶೆ: ಹಾಗಾದರೆ ದೇವರನ್ನು ನೋಡ ಬಹುದೋ?

ಪಾದ್ರಿ: ಯೆಹೋವನು ನಿಮಗೆ ದಯ ತೋರಿಸುವದಕ್ಕೆ ಕಾದು ಕೊಳ್ಳುವನು, ನಿಮ್ಮ ಮೇಲೆ ಅಂತಃಕರಣ ಪಡುವದಕ್ಕೆ ಏಳುವನು; ಯಾಕಂದರೆ ಯೆಹೋವನು ನ್ಯಾಯದ ದೇವರಾಗಿದ್ದಾನೆ, ಅವನಿಗೋಸ್ಕರ ಕಾದು ಕೊಳ್ಳುವವರೆಲ್ಲರು ಭಾಗ್ಯವಂತರು; ಯಾಕಂದರೆ ಚಿಯೋನಿನ ಜನರು ಯೆರುಸಲೇಮಿನಲ್ಲಿ ವಾಸವಾಗಿದ್ದವರು ಇನ್ನು ಮೇಲೆ ಅಳದೆ ಇರುವರು. ನೀನು ಕೂಗುವ ಶಬ್ದಕ್ಕೆ ನಿನಗೆ ನಿಶ್ಚಯವಾಗಿ ದಯ ತೋರಿಸುವನು; ಕೇಳಿದಾಗಲೇ ನಿನಗೆ ಉತ್ತರ ಕೊಡುವನು. ಕರ್ತನು ನಿಮಗೆ ಇಕ್ಕಟ್ಟಿನ ರೊಟ್ಟಿಯನ್ನೂ ಬಾಧೆಯ ನೀರನ್ನೂ ಕೊಟ್ಟರೂ, ಇನ್ನು ನಿನ್ನ ಬೋಧಕರು ತಮ್ಮನ್ನು ಮುಚ್ಚಿ ಕೊಳ್ಳುವದಿಲ್ಲ, ನಿನ್ನ ಕಣ್ಣುಗಳು ನಿನ್ನ ಬೋಧಕರನ್ನು ನೋಡುತ್ತಿರುವವು; ಮತ್ತು ನೀವು ಎಡಕ್ಕಾದರೂ ಬಲಕ್ಕಾದರೂ ತಿರುಗುವಾಗ, ನಿನ್ನ ಕಿವಿಗಳು ಇದೇ ದಾರಿ, ಇದರಲ್ಲಿ

ನಡಿಯಿರಿ ಎಂಬ ಮಾತನ್ನು ನಿನ್ನ ಹಿಂದೆ ಕೇಳುವವು; ಆಗ ಬೆಳ್ಳಿಯಿಂದ ಹೊದಗಿಸಲ್ಪಟ್ಟ ನಿಮ್ಮ ವಿಗ್ರಹಗಳನ್ನೂ ಚಿನ್ನದಿಂದ ಎರಕ ಹೊಯ್ಯಲ್ಪಟ್ಟ ನಿಮ್ಮ ವಿಗ್ರಹಗಳನ್ನೂ ಅಪವಿತ್ರವಾಗಿ ಎಣಿಸುವಿರಿ. ಅವುಗಳನ್ನು ಮುಟ್ಟಿನ ವಸ್ತ್ರದಂತೆ ಬಿಸಾಡಿ ಅದಕ್ಕೆ ಹೋಗು ಅನ್ನುವಿ. ಹಾಗೆಯೇ ದೇವರು ನಮಗೆ ಸಮಜಯಿಸಿಗೆಯನ್ನೂ ಬುದ್ಧಿಯನ್ನು ಹೇಳಿ ನೀತಿಯ ಮಾರ್ಗವನ್ನು ತೋರಿಸುತ್ತಾನೆ. ನರಪುತ್ರರಾದ ನಮಗೆ ಆಯುಧಗಳನ್ನು ಹಿಡು ಕೊಂಡ ಬಲಿಷ್ಠನಾಗಿರುವ ಲೋಕಾಧಿಪತಿಯನ್ನು ಜೈಸಿ ಕಟ್ಟಲಿಕ್ಕೆ ಕೂಡದದರಿಂದ ಅವನಿಗಿಂತ ಬಲಿಷ್ಠನಾದಂಥ ಮನುಷ್ಯನಾದ ನಮ್ಮ ರಕ್ಷಕನಾಗಿರುವ ಯೇಸು ಕ್ರಿಸ್ತನು ಬಂದು ನಮಗಾಗಿ ಈ ಕೆಲಸವನ್ನು ಮಾಡಿದರಿಂದ ಪರಲೋಕದ ದೂತರು ಬಹಳ ಸಂತೋಷಿಸಿ, ದೇವರು ಮನುಷ್ಯರಿಗೆ ಮಾಡುವ ರಕ್ಷಣೆಗಾಗಿ ಸ್ತುತಿ ಸ್ತೋತ್ರ ಮಾಡಿ ಹಾಡಿದ ಗೀತವೇನಂದರೆ: — ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯೂ! ಭೂಮಿಯ ಮೇಲೆ ಸಮಾಧಾನವೂ! ಮನುಷ್ಯರಲ್ಲಿ ದಯವೂ! ಇದಕ್ಕೆ ನಾವು ಸಹ ಕೂಡಿ ಕೊಂಡು ದೇವರಿಗೆ ಮಾನವಾಗಲಿ! ಎಂದು ಹೇಳುವದು ತಕ್ಕದ್ದಾಗಿದೆ; ಯಾಕಂದರೆ ದೇವರ ಮಗನಾದ ಯೇಸು ಕ್ರಿಸ್ತನು ಸೈತಾನನ ಎಲ್ಲಾ ಕ್ರಿಯೆಗಳನ್ನು ನಾಶನ ಮಾಡಿ ಎಲ್ಲಾ ಮನುಷ್ಯರ ಚಾಡಿಗಾರನೂ ಕೆಡಿಸುವವನೂ ಆಗಿರುವ ವೈರಿಯನ್ನು ಜೈಸಿ ಅವನ ಎಲ್ಲಾ ಅಶುದ್ಧ ಆತ್ಮಗಳಿಗೆ ಬಲದಿಂದಲೂ ಅಧಿಕಾರದಿಂದಲೂ ಅಪ್ಪಣೆ ಕೊಡುವಾಗ ಅವುಗಳು ಅವನಿಗೆ ಬಹಳ ಹೆದರಿ ವಿಧೇಯವಾಗಿದ್ದವು. ಪಾಪಕ್ಕಾಗಿ ನಮ್ಮ ಮೇಲೆ ಇರುವ ದೇವರ ಶಾಪವನ್ನು ನನ್ನ ಮೇಲೆ ತೆಗದು ಕೊಂಡು ಸೈತಾನನು ಮನುಷ್ಯರ ಮೇಲೆ ಬರ ಮಾಡಿದ ನ್ಯಾಯಶೀರ್ಪನ್ನು ಪೂರ್ಣವಾಗಿ ಅವನು ಪಾಪವಿಲ್ಲದವನಾಗಿಯೂ ಪರಿಶುದ್ಧನಾಗಿಯೂ ನಡದು ಸೈತಾನನ ಎಲ್ಲಾ ಶೋಧನೆಗಳನ್ನು ಜೈಸಿ ತನ್ನನ್ನು ನಮಗಾಗಿ ಪರಿಶುದ್ಧನಾಗಿ ದೋಷವಿಲ್ಲದವನಾಗಿ ಶ್ರಮೆ ಪಟ್ಟಿರುವದರಿಂದ ಸೈತಾನನ ಅಧಿಕಾರಕ್ಕೆ ಇಂಬೂ ಕಾರಣವೂ ಕೊಡಲಿಕ್ಕಾರಂಭಿಸಿದಂದಿನಿಂದ ಈಚೆಗೆ ನಡದ ಎಲ್ಲಾ ಲೋಕದ ಪಾಪಗಳನ್ನು ಹೊತ್ತು ಕೊಂಡು ವಿಮೋಚನೆ

ಮಾಡಿ ನಮಗೆ ವಿರೋಧವಾಗಿದ್ದಂಥ ಕೈಬರಹವನ್ನು ತೆಗದು ಹಾಕಿದನು. ಇದರಿಂದಲೇ ನಮ್ಮನ್ನು ದೂರುವವನಿಗೆ ನ್ಯಾಯಶೀರ್ಪಾಗಿ ಅವನ ಅಧಿಕಾರ ಹೋಯಿತು; ಅವನದನ್ನು ಸುಲಿಗೆ ಮಾಡಿ ಆಯಿತು. ಬದುಕುವ ಕಾಲವೆಲ್ಲಾ ಮರಣದ ಭಯದಿಂದ ದಾಸತ್ವದೊಳಗಿದ್ದವರಾದ ನಾವು ಬಿಡುಗಡೆ ಹೊಂದಿದರಿಂದ ಮರಣದ ಅಧಿಕಾರವುಳ್ಳ ಪಿಶಾಚನಾಗಲೀ ಅವನ ದೂತರಾಗಲೀ ನಮ್ಮ ವಿಷಯ ಏನೂ ಬಾಧ್ಯತೆ ಇಲ್ಲದವರಾಗಿಯೂ ಇನ್ನು ಮೇಲೆ ಏನು ಮಾಡ ಕೂಡದವರಾಗಿಯೂ ಇದ್ದು, ಸೈತಾನನು ಪೂರ್ಣವಾಗಿ ತೆಗದು ಬಿಸಾಡಲ್ಪಟ್ಟವನಾಗಿದ್ದರೂ, ಇನ್ನೂ ಶಿರುಗುತ್ತಾ ಯಾರನ್ನು ನುಂಗಿ ಬಿಡ ಬಹುದೆಂದು ಹುಡುಕಿದರೂ ನಾವು ಸ್ವಂತ ಮನಸ್ಸಿನಿಂದ ಅವನ ಉರ್ಲಿಗೆ ಶಿಕ್ಕಿ ಬೀಳುವದು ಹೊರ್ತಾಗಿ ಅವನಿಂದ ಏನೂ ಆಗುವದಿಲ್ಲ; ಅವನನ್ನು ಜೈಸಿದವನಾದ ನಮ್ಮ ರಕ್ಷಕನಾಗಿರುವ ಯೇಸು ಕ್ರಿಸ್ತನು ಒಳ್ಳೇ ನಂಬಿಕೆಯುಳ್ಳ ಕುರುಬನಾಗಿ ತನ್ನವರನ್ನು ಜೋಕೆ ಮಾಡಿ ತೋಳವಾಗಿರುವ ಸೈತಾನನು, ಹತ್ತರ ಬಂದರೂ ತನ್ನ ಪರಾಮರಿಕೆಯಿಂದ ವೈಯಲಿಕ್ಕೆ ಬಿಡನು. ಯೇಸುವಿನ ಕೈಕೆಳಗಿರುವವರು ಯಾವಾಗಲೂ ಆದರಣೆ ಪಡ ಕೊಂಡು ಸಂತೋಷದಿಂದ ಹೇಳುವದೇನಂದರೆ: ಭೂವೆಲ್ಲ ತುಂಬಿದ್ದಾದರೂ ನಮ್ಮನ್ನು ನುಂಗೋದಿಲ್ಲ. ವಿಜಯ ನಮ್ಮದಾಗಿದೆ; ನಮ್ಮಲ್ಲಿ ಭಯವಿಲ್ಲ. ಈ ಲೋಕೇಶನು ಶಿಟ್ಟಾಗಿದ್ದರೂ ಹ್ಯಾಗೂ ನಿಲ್ಲನು. ಹಾ, ಶೀರಿಕೆ ಆಯಿತು! ಈ ಒಂದೇ ಮಾತು ಸಾಕು. ಹೌದು, ದೇವರು ಅವರಿಗೆ ಬೇಕಾಗಿ ಯುದ್ಧ ಮಾಡುವನು; ಅದಕ್ಕಾಗಿ ಅವರು ಸುಮ್ಮನೆ ಇರುತ್ತಾರೆ. ಅವರು ದೇವರ ಐಕ್ಯದಲ್ಲಿರುವದರಿಂದ ಸೈತಾನನ ಕೆಟ್ಟ ದೂತರು ಅವರನ್ನು ಬಿಡ ಬೇಕು; ದೇವದೂತರು ಅವರ ಕಾವಲಿನವರಾಗಿದ್ದಾರೆ. ಒಂದೊಂದು ಸಾರಿ ಎಲ್ಲಾ ಲೋಕವು ತನ್ನದೆಂಬುವ ಹಾಗೆ ದೊಡ್ಡ ಉಗ್ರವನ್ನು ತೋರಿಸಿದರೂ ಅವನಿಗೆ ಅಪಜಯವಾಯಿತೆಂಬುವದು ನಿಶ್ಚಯ. ಭೂಪರಲೋಕಗಳ ಅಧಿಕಾರವನ್ನು ಹೊಂದಿದ ಮುಖ್ಯಸ್ಥನೂ ತಲೆಯೂ ಆಗಿರುವ ಯೇಸು ಕ್ರಿಸ್ತನಿಗೆ ಮರಣದ ಮತ್ತು ಪಾತಾಳದ ಬೀಗದ ಕೈಗಳು ಇರುವದರಿಂದ ಎಲ್ಲಾ ಕತ್ತಲೆಯ ಆತ್ಮಗಳನ್ನು ಸಂಕೋಲೆಗಳಿಂದ ಕಟ್ಟಿ

ಹಾಕಿ, ಅಂತ್ಯದಲ್ಲಿ ಅವರೆಲ್ಲರನ್ನು ನ್ಯಾಯತೀರಿಸಿ ಸೈತಾನನನ್ನೂ ಅವನ ದೂತರನ್ನೂ ಅವರಿಗೆ ಸಿದ್ಧ ಮಾಡಿದ ಬೆಂಕಿಯಲ್ಲಿ ಹಾಕುವನು.

ಕೃಷ್ಣರಾ: ನೀವು ಹೇಳುವಂಥಾದ್ದು ನಮ್ಮ ಶಾಸ್ತ್ರಗಳಿಗೆ ಕೇವಲ ವಿರೋಧವಾಗಿರುತ್ತದೆ. ನೀವು ಹೇಳುವದು ಸತ್ಯವಾಗಿದ್ದರೆ, ಅದಕ್ಕೆ ಶೇರಿ ನಂಬಲಿಕ್ಕೆ ಕಷ್ಟ ಉಂಟು. ಇದಕ್ಕೆ ತಕ್ಕ ಬುದ್ಧಿಯನ್ನು ದೇವರು ನಮಗೆ ಕೊಡುವದು ಹೊರ್ತಾಗಿ ಅದನ್ನು ನಂಬಲಿಕ್ಕೆ ನಮ್ಮಿಂದ ಕೂಡದು.

ಚಂದ್ರಪ್ರಜ: ನಮ್ಮ ಗ್ರಹಚಾರ ಹ್ಯಾಗೋ ಹಾಗೆಯೇ ಆಗುತ್ತದೆ. ನಿಮ್ಮ ಶಾಸ್ತ್ರದಲ್ಲಿ ಮಂತ್ರ ಜಾತಕ ಶಕುನ ಮುಂತಾದವುಗಳನ್ನು ಮಾಡುವವರ ವಿಷಯದಲ್ಲಿ ಏನು ಹೇಳುತ್ತದೆ?

ಪಾದ್ರೆ: ಬಹಳ ಹೇಳುತ್ತದೆ; ಅವರು ಮನುಷ್ಯರಿಗೆ ಉಪಕಾರ ಮಾಡುವ ಧರ್ಮಿಷ್ಠರೆಂಬ ಹೆಸರುಳ್ಳವರಾಗಿ ಮಾನ ಮರ್ಯಾದೆಗಳನ್ನು ಹೊಂದಿರ ಬಹುದು; ಆದರೆ ಅವರ ಕ್ರಿಯೆಗಳು ದೇವರಿಗೆ ಪೂರ್ಣ ವಿರೋಧವಾಗಿರುತ್ತವೆ. ಯಾಕಂದರೆ ಅವರು ಮನುಷ್ಯನ ಪ್ರಾಣಕ್ಕೆ ಏನೂ ಚಿಂತೆ ಮಾಡದೆ, ಶರೀರಬಾಧದ್ದನ್ನು ಮಾತ್ರ ಚಿಂತಿಸಿ, ತಮ್ಮ ಸ್ವಂತ ಇಚ್ಛೆಯ ಪ್ರಕಾರ ದೇವರ ಚಿತ್ತಕ್ಕೂ ಮಾರ್ಗಕ್ಕೂ ವಿರೋಧವಾಗಿದ್ದರೂ ಪ್ರಪಂಚದ ಆಸ್ತಿಯನ್ನೂ ಇಹಾದೃಷ್ಟ ಭೋಗ ಮುಂತಾದ್ದನ್ನೂ ಹುಡುಕಿ, ಇವುಗಳಿಗೆ ನಾಶಕರವಾದ ಕಂಟಕಗಳನ್ನು ಮಾತ್ರ ತೆಗದು ಹಾಕಲಿಕ್ಕೆ ನೋಡುತ್ತಾರೆ.

ಚಂದ್ರಪ್ರಜ: ಜೀವದಲ್ಲಿರುವ ಪರ್ಯಂತರ ಹೊಟ್ಟೆಗಾಗಿ ಚಿಂತೆ ಮಾಡ ಬೇಡವೋ? ಆ ಲೋಕದ್ದು ಮತ್ತು ನೋಡ ಬಹುದು.

ಪಾದ್ರೆ: ಇದು ಪ್ರಪಂಚದವರ ಚಿಂತೆ ಹೌದು, ಆದರೆ ದೇವರ ವಾಕ್ಯವು ನಮಗೆ ಅಪ್ಪಣೆ ಕೊಡುತ್ತದೆ ಏನಂದರೆ: ಏನು ಉಣ್ಣುವ, ಏನು ಕುಡಿಯುವ, ಏನು ಹೊದ್ದು ಕೊಳ್ಳುವ ಎಂದು ನಿಮ್ಮ ಶರೀರಕ್ಕೋಸ್ಕರ ಚಿಂತೆ ಪಡ ಬೇಡಿರಿ! ಯಾಕಂದರೆ ಇವುಗಳೆಲ್ಲಾ ನಿಮಗೆ ಬೇಕೆಂದು ನಿಮ್ಮ ಪರಲೋಕದ ತಂದೆಯು ಬಲ್ಲನು. ಹೀಗಿರುವದರಿಂದ ನೀವು ಮೊದಲು ದೇವರ ರಾಜ್ಯವನ್ನೂ ಅವನ ನೀತಿಯನ್ನೂ ಹುಡುಕಿರಿ! ಆಗ ಇವುಗಳೆಲ್ಲಾ ನಿಮಗೆ ಕೂಡ ಕೊಡಲ್ಪಡುವವು. ನಾನು ಮಂ

ತ್ರ ಮುಂತಾದವುಗಳನ್ನು ಮಾಡುವವರ ವಿಷಯದಲ್ಲಿ ಹೇಳಿದ್ದು ಸತ್ಯವೆಂದು ಅವರ ಚರಿತ್ರೆಯಿಂದಲೇ ತಿಳಿದು ಕೊಳ್ಳ ಬಹುದು; ಹ್ಯಾಗಂದರೆ, ಮಂತ್ರಗಾರರು ಮೊದಲು ಐಗುಪ್ತ ದೇಶದಲ್ಲಿದ್ದ ಮೋಶೆ ಎಂಬವನು ದೇವರ ಅಪ್ಪಣೆಯನ್ನು ಹೊಂದಿ ಆ ದೇಶದ ಅರಸನ ಮುಂದೆ ದೇವರ ಪ್ರಜೆಯ ವಿಷಯದಲ್ಲಿ ಮಾತಾಡಿ, ದೇವರ ಆಜ್ಞೆಯಿಂದ ಬಂದನೆಂಬುವದಕ್ಕೆ ದೃಷ್ಟಾಂತ ಕೊಟ್ಟು ಬಹಳ ಆಶ್ಚರ್ಯವಾದ ಕ್ರಿಯೆಗಳನ್ನು ಮಾಡುವಾಗ, ಆ ದೇಶದ ಮಂತ್ರಗಾರರಾಗಿರುವ ಯಂನನೂ ಯಂಬ್ರನೂ ಎಂಬವರು ಅವನಿಗೆ ಎದುರು ನಿಂತು ಮಂತ್ರ ಬಲದಿಂದ ಅದೇ ಕ್ರಿಯೆಗಳನ್ನು ಮಾಡಿದರು. ಆದರೆ ಅದು ಕೆಲವು ದಿವಸದ ಪರ್ಯಂತರ ಮಾತ್ರ ನಡಿಯಿತು. ಮೋಶೆ ದೇವರ ಅಪ್ಪಣೆಯಿಂದಲೂ ಬಲದಿಂದಲೂ ಹೆಚ್ಚಾಗಿ ಬೇರೆ ಬೇರೆ ಆಶ್ಚರ್ಯವಾದ ಕ್ರಿಯೆಗಳನ್ನು ನಡಿಸುವಾಗ, ಅವುಗಳನ್ನು ಮಾಡುವದು ಅವರಿಂದಾಗಲಿಲ್ಲ; ಆದರೆ ಅವರು ಇದು ದೇವರ ಕೈಯಿಂದಾದ ಕೆಲಸವೆಂದೂ ಅವನ ಮುಂದೆ ನಮ್ಮದು ಇನ್ನು ನಡಿಯುವದಿಲ್ಲವೆಂದೂ ಅರಿಕೆ ಮಾಡಿದರು. ಇದರಲ್ಲಿ ಮಂತ್ರಗಾರರಿಗೆ ಒಂದು ತರದ ಬಲವಿದ್ದರೂ ಅದು ದೇವರಿಂದಾದದ್ದೂ ದೇವರ ಚಿತ್ತದ ಪ್ರಕಾರ ಕೆಲಸ ಮಾಡುವಂಥಾದ್ದೂ ಅಲ್ಲ, ಸೈತಾನನ ಬಲದಿಂದಾಗಿರುತ್ತದೆಂದು ಕಾಣುತ್ತದೆ. ಇದರ ಸಹಾಯದಿಂದ ಇನ್ನು ಮುಂದೆ ಬರುವಂಥಾದ್ದನ್ನು ಆಗುವ ಮುಂಚೆ ತೋರಿಸಿ, ಬೇರೆ ಬೇರೆ ತರದ ಆಶ್ಚರ್ಯವಾದ ಕ್ರಿಯೆಗಳನ್ನು ಒಂದೊಂದು ಸಾರಿ ಮಾಡಲಾಗುವದು. ಈ ದೇಶದಲ್ಲಿಯೂ ಹೀಗೆ ನಡಿಯುವದು. ಚಂದ್ರಭಟ್ಟರು ಒಂದು ವೇಳೆ ಇಂಥಾದ್ದನ್ನು ಮಾಡುವಂಥಾದರ ವಿಷಯ ಸ್ವಂತ ಅನುಭವದಿಂದಲೇ ಹೇಳ ಬಹುದು. ಮಂತ್ರವಾದವು ಸೈತಾನನ ಕತ್ತಲೆಯ ತ್ರಾಣದಿಂದ ಮಾತ್ರವಾಗುತ್ತದೆ; ಅದರಿಂದ ಅವನು ಮನುಷ್ಯನ ಕಣ್ಣುಗಳನ್ನು ಕಟ್ಟಿ ಜೀವವುಳ್ಳ ದೇವರಿಗೆ ಮಾನ ಕೊಡದೆ, ಆತನ ಸಹಾಯವನ್ನು ಹುಡುಕದೆ ಇರುವ ಹಾಗೆ ಮಾಡಿರುವದರಿಂದ ದೇವರಾದ ಯೆಹೋವನ ಕೋಪವು ಮಂತ್ರ ಮೊದಲಾದ ಪಾಪಗಳಿಗೆ ವಿರೋಧವಾಗಿ, ಕಠಿಣವಾಗಿಯೂ ಭಯಂಕರವಾಗಿಯೂ ಕಾಣ ಬರುತ್ತದೆ; ಯಾಕಂ

ಏರೆ ಇಂಥವರು ದೇವರ ರಾಜ್ಯಕ್ಕೆ ಎಂದಿಗೂ ಶೇರ ಕೂಡದು. ಈ ಕೆಲಸಗಳು ಬಹಳವಾಗಿ ನಡಿಯ ಬೇಕೆಂದು ಸೈತಾನನು ಪ್ರಯತ್ನ ಮಾಡಿ, ಮನುಷ್ಯನು ತನ್ನ ಕೈಯೊಳಗಿಂದ ತಪ್ಪಿಸಿ ಕೊಳ್ಳದೆಯೂ ದೇವರ ಬಳಿಗೆ ತಿರುಗಿ ಕೊಳ್ಳದೆಯೂ ಇರುವ ಹಾಗೆ ಮಾಡುತ್ತಾನೆ. ಇಂಥಾದ್ದನ್ನು ಮಾಡುವವರು ಸೈತಾನನ ಸ್ವಭಾವದಲ್ಲಿಯೂ ಅವನ ಚಿತ್ತಕ್ಕನುಸಾರವಾಗಿಯೂ ದೇವರ ಕ್ರಮವನ್ನು ಎರಡು ಮಾಡಿ, ಆತನು ತೋರಿಸಿದ ಮಾರ್ಗವನ್ನು ಹಿಡಿಯದೆ, ಕೆಟ್ಟ ಅನ್ಯಾಯದ ಕರಣಗಳಿಂದಲೂ ಉಪಾಯಗಳಿಂದಲೂ ತಮ್ಮದಾಗ ಬೇಕೆಂಬ ಮನಸ್ಸು ವಿಶೇಷವಾಗಿ ಕೆಟ್ಟದ್ದಾಗಿದ್ದು ದೇವರ ಕೋಪದ ಶಿಕ್ಷೆಗೆ ಯೋಗ್ಯರಾಗಿರುತ್ತಾರೆ. ಇದನ್ನು ತಿಳಿದು ಕೊಳ್ಳುವವರು ಕೂಡುವಷ್ಟು ಬೇಗ ಬಿಡಲಿಕ್ಕೆ ನೋಡುತ್ತಾರೆ. ಹ್ಯಾಗಂದರೆ ದೇವರ ಸೃಷ್ಟಿಗಳಾಗಿರುವ ನಾವು ಮಾಟ, ಮಂತ್ರ, ಯಂತ್ರ ಮುಂತಾದವುಗಳಿಂದಲ್ಲ, ಮಕ್ಕಳಂಥಾ ಭರವಸದಿಂದ, ವಿಶ್ವಾಸದ ಪ್ರಾರ್ಥನೆಗಳಿಂದ ಮಾತ್ರ ನಮ್ಮ ದೇವರ ಸಹಾಯವನ್ನು ಹುಡುಕ ಬೇಕು. ಇಂಥಾ ಪ್ರಾರ್ಥನೆಗಳನ್ನು ಕರ್ತನು ದಯೆಯಿಂದ ಕೇಳಿ ಎಲ್ಲಾ ಮಂತ್ರಗಾರರು ಕೂಡಿ ಮಾಡುವ ಕೆಲಸಗಳಿಗಿಂತ ಹೆಚ್ಚು ಆಶ್ಚರ್ಯಗಳನ್ನು ಮಾಡುತ್ತಾನೆ. ಮತ್ತು ನಮ್ಮ ಕರ್ತನಾದ ಯೇಸುವಿನ ಬಳಿಯಲ್ಲಿ ಯಾವ ಕಷ್ಟದಲ್ಲಿಯೂ ಬಂದು ಬೇಡಿ ಕೊಳ್ಳುವವರೆಲ್ಲರು ಆಶ್ರಯ ಹೊಂದಿ, ಅವನು ತನ್ನ ಹತ್ತರ ಬರುವ ಯಾವನನ್ನಾದರೂ ಹೊರಗೆ ಹಾಕನು ಎಂಬ ವಾಕ್ಯವು ಸತ್ಯವಾಗಿದೆಂದು ಅನುಭವದಿಂದ ತಿಳದಿದ್ದಾರೆ. ಅವನ ಬಳಿಯಲ್ಲಿ ನಾನಾ ತರದ ರೋಗಿಷ್ಠರೂ, ದೆವ್ವ ಹಿಡಿದವರೂ, ಕುರುಡರೂ, ಕುಂಟರೂ, ಮೂಕರೂ ಮುಂತಾದ ಜನರು ಬಂದು ಸಹಾಯ ಹೊಂದಿದರು; ಈಗಲೂ ಅವನು — ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಡುವೆನು ಎಂದು ಹೇಳಿ ಕರಿಯುತ್ತಾನೆ. ಎಷ್ಟು ಅಲ್ಪವಾಗಿದ್ದರೂ ಎಷ್ಟು ವಿಶೇಷವಾಗಿದ್ದರೂ ನಾವು ಏನೂ ಬೇಡಿ ಕೊಳ್ಳುತ್ತೇವೋ ಅದು ನಮಗೆ ಒಳ್ಳೇದಾಗುವದಾದರೆ, ಅವನು ಕೊಡಲಿಕ್ಕೆ ಮನಸ್ಸೂ ಸಾಮರ್ಥ್ಯವೂ ಉಳ್ಳವನಾಗಿದ್ದಾನೆ ಜನರು ಗಾದೆ ಹೇಳುವ ಪ್ರಕಾರ "ಅಲ್ಪ

ಕಾರ್ಯಕ್ಕೆ ಅರಮನೆಗೆ ಹೋಗ ಬಾರದು"ಎಂಬ ಕಟ್ಟಳೆ ಅವನ ಬಳಿಯಲ್ಲಿ
ಇಲ್ಲ. ಯಾರಾಗಿದ್ದರೂ ಏನು ಬೇಕೆಂಧಿದ್ದರೂ ಯಾವ ಸಮಯದಲ್ಲಿ
ಯಾದರೂ ಎಲ್ಲರು ಬಂದು ಬೇಡಿ ಕೊಳ್ಳ ಬಹುದು. ಒಬ್ಬನು ಯಾತ್ರೆ
ಮಾಡಿ ಕಾಶಿ, ತಿರುಪತಿ, ರಾಮೇಶ್ವರ ಮುಂತಾದ ಸ್ಥಳಗಳಿಗೆ ಹೋಗಿ ಅ
ಲ್ಲಿ ಅವಶ್ಯ ಎಷ್ಟು ಹೊತ್ತು ಉಂಟೋ ಅಷ್ಟು ಹೊತ್ತು ಕೂತು ಕೊಳ್ಳುವ
ದು ಹೊರ್ತಾಗಿ, ಕೂಡುವಷ್ಟು ಬೇಗ ತಮ್ಮ ಸಂಸಾರಕ್ಕೂ ಊರಿಗೂ
ತಿರುಗಿ ಬರ ಬೇಕೆಂದು, ಇಲ್ಲವೆ ಒಬ್ಬನು ಪ್ರಯಾಣಕ್ಕೆ ಹೋಗಿ ಮಾಡ
ಬೇಕಾದ ವ್ಯಾಪಾರ ಮುಂತಾದ ಕೆಲಸಗಳನ್ನು ಕೂಡುವಷ್ಟು ಬೇಗ ತೀ
ರಿಸಿ ಹ್ಯಾಗೆ ಬರುತ್ತಾನೋ, ಹಾಗೆಯೇ ನಾವು ಈ ಲೋಕದಲ್ಲಿ ನಾ
ಲ್ಕು ದಿವಸವಿದ್ದು ಪ್ರಯಾಣ ಮಾಡಿ, ನಮ್ಮ ನಿತ್ಯಮನೆಯಾಗಿರುವ
ಪರಲೋಕಕ್ಕೆ ಶೇರ ಬೇಕೆಂಬುವದಕ್ಕಾಗಿ ದೇವರಿಂದ ಜೀವವನ್ನು ಹೊಂ
ದಿದವರಾಗಿ ಈಗ ಬದುಕುತ್ತೇವೆ. ಅವನು ತನ್ನ ಮನಸ್ಸಿನಲ್ಲಿ ನೇಮಕ
ಮಾಡಿದ ಸಮಯದಲ್ಲಿ ನಮ್ಮನ್ನು ತಿರುಗಿ ಕರೆದು ನಮ್ಮಿಂದ ಪರೀಕ್ಷೆ
ತೆಗದು ಕೊಳ್ಳುತ್ತಾನೆ. ನಾವು ಈ ಲೋಕವೆಂಬ ಪರದೇಶದಲ್ಲಿ ಬಹ
ಳ ಸಾರಿ ರಾತ್ರಿಯಲ್ಲಿ ಎಂಬಂತೆ ಮಾರ್ಗ ಗೊತ್ತಿಲ್ಲದವರಾಗಿಯೂ,
ದಿಕ್ಕು ಕಾಣದವರಾಗಿಯೂ, ನಮಗೆ ಸಹಾಯ ಮಾಡಲಿಕ್ಕೂ ಆಲೋಚ
ನೆ ಹೇಳಲಿಕ್ಕೂ ಯಾರೂ ಇಲ್ಲದವರಾಗಿಯೂ, ವೈರಿಗಳಿಂದಲೂ ಕೆಟ್ಟ
ಮೃಗಗಳಿಂದಲೂ ಬರುವ ಬೇರೆ ಬೇರೆ ತರದ ಕಂಟಕಗಳಲ್ಲಿ ಇರುತ್ತೇವೆ.
ಇಂಥಾ ಸ್ಥಿತಿಯಲ್ಲಿರುವ ಸಮಯದಲ್ಲಿ ಒಬ್ಬ ನಂಬಿಕೆಯುಳ್ಳ ಸಂಗಡಿ
ಗನು ನಮಗೆ ಸಿಕ್ಕಿ, ನಮ್ಮನ್ನು ಈ ಕಷ್ಟದಿಂದ ಬಿಡಿಸಿ, ಸಮವಾದ ಮಾ
ರ್ಗವನ್ನು ನಮಗೆ ತೋರಿಸಿ ಕೊಟ್ಟರೆ, ಎಷ್ಟೋ ಉಪಕಾರವಾದೀತ
ಲ್ಲಾ? ಇಂಥ ನಂಬಿಕೆಯುಳ್ಳ ಸಂಗಡಿಗನು ಯಾರಂದರೆ, ನಮ್ಮ ರಕ್ಷಕ
ನಾದ ಯೇಸು ಕ್ರಿಸ್ತನೇ. ಅವನು ಯುಗದಂತ್ಯದ ಪರ್ಯಂತರ ನಮ್ಮ
ಸಂಗಡಲಿದ್ದು ಅಹಂಕಾರ ವಂಚನೆ ಇಲ್ಲದೆ, ನಂಬಿಕೆಯುಳ್ಳವನಾಗಿ ನ
ಮ್ಮನ್ನು ನಡಿಸುತ್ತಾನೆ. ಅವನು ಜೀವದ ಅಧಿಪತಿಯಾಗಿ ಮರಣವ
ನ್ನು ಜೈಸಿ ಅವರ ಕೊಂಡಿಯನ್ನು ತೆಗದು ತನ್ನ ಪುನರುತ್ಥಾನದಿಂದ ಜೀ
ವವನ್ನೂ ನಿರ್ಲಯವನ್ನೂ ಬೆಳಕಿಗೆ ತಂದನು. ಅವನು ಮರಣದ ತಗ್ಗ

ನ್ನೂ ನದಿಯನ್ನೂ ದಾಟಿ ದೇವರ ವಾಸಸ್ಥಾನವನ್ನೂ ದೇವರ ಪಟ್ಟಣ
ವನ್ನೂ ಪರದೈಸವನ್ನೂ ತಿರಿಗಿ ತೆರದು, ಬಡವರಾದ ನಾವು ಅದರಲ್ಲಿ
ಪ್ರವೇಶ ಹೊಂದುವ ಹಾಗೆ ಇದಕ್ಕೆ ಆಶೆ ಮಾಡುವ ಯಾವನಿಗೂ ಅ
ಲ್ಲಿಂದ ಸರ್ವ ತ್ರಾಣವುಳ್ಳ ಕೈ ಹಾಕಿ, ಮಂತ್ರದಿಂದಲ್ಲ, ಅವನ ಸಹಾ
ಯದಿಂದಲೇ ಈ ಕೆಟ್ಟ ಲೋಕವನ್ನು ದಾಟಿ, ಅವನಿದ್ದಲ್ಲಿ ನಾವೂ ಶೇ
ರಿ, ಅವನ ಸಂಗಡ ನಿತ್ಯಜೀವದಲ್ಲಿ ಬದುಕುವ ಹಾಗೆ ನಡಿಸಿ, ತನ್ನ
ಹತ್ತರ ವೈಯುವನು. ಈ ಪ್ರಕಾರ ಸಾಯುವದು ಮರಣವಲ್ಲ, ಪಾಪದ
ಈ ಲೋಕವನ್ನು ದಾಟಿ, ತಂದೆಯ ಮನೆಗೆ ಹೋಗುವದೇ. ಮತ್ತೆ ದೊ
ರಕುವ ಆ ಭಾಗ್ಯವು ಈಗಲೇ ಸಂಶಯವಿಲ್ಲದೆ ನಮಗೆ ಗೊತ್ತದೆ. ಸಾ
ಯುವ ಘಳಿಗೆ ಸ್ವಲ್ಪ ಮುಂದೆಯಾಗಲೀ ಹಿಂದೆಯಾಗಲೀ ಬಂದ
ರೂ, ಅವನು ನಮ್ಮ ಸಂಗಡ ಇರುವದರಿಂದ ಭಯವಿಲ್ಲ. ಆಗ ಪು
ತ್ರರೂ ಮಿತ್ರರೂ ಬಂಧು ಬಳಗದವರೂ ಹತ್ರ ನಿಂತು ನೋಡುವರ
ಲ್ಲದೆ, ಮೃತ್ಯು ಬಂದು ಮನುಷ್ಯನನ್ನು ಎಳಿಯುವಾಗ, ತಂದೆ ತಾಯಿ
ಗಳು ಸಹ ಬಹು ಪ್ರೀತಿಯೂ ಮಮತೆಯೂ ಉಳ್ಳವರಾಗಿದ್ದರೂ ಇ
ನ್ನು ಮುಂದೆ ಹತ್ತರ ನಿಂತು ಸಹಾಯ ಮಾಡಲಿಕ್ಕೆ ಕೂಡದೆ ಇರುವಾ
ಗ, ಅವನೇ ಹತ್ತರ ಇದ್ದು ನಮ್ಮ ಆತ್ಮವನ್ನೂ ಶರೀರವನ್ನೂ ಜೋಕೆ
ಮಾಡಿ, ಕಡೇಲಿ ತಕ್ಕ ಸಮಯದಲ್ಲಿ ಮಹಿಮೆಯ ಭಾವದಲ್ಲಿ ಎಬ್ಬಿ
ಸಿ, ನಿತ್ಯಜೀವಕ್ಕೆ ಶೇರಿಸುವನು. ಹಾಗೆಯೇ ಅವನು ಪಾಪವನ್ನೂ ಅ
ದರಿಂದ ಹುಟ್ಟಿರುವ ಸೈತಾನನ ಅಧಿಕಾರವನ್ನೂ ಮರಣದ ಭಯವ
ನ್ನೂ ತೆಗದು ಹಾಕಿ, ಪರಲೋಕದಿಂದ ನಮಗೆ ಸ್ಥಿರವಾದ ನಿರೀಕ್ಷೆಯ
ಲಂಗರವನ್ನು ಈ ಲೋಕವೆಂಬ ಸಮುದ್ರಕ್ಕೆ ಹಾಕುತ್ತಾನೆ. ಇದನ್ನು ಹಿಡಿ
ದು ಕೊಂಡಿರುವಾಗ ಶೋಧನೆ, ತೊಂದರೆ ಎಂಬ ಬಿರುಘಾಳಿಗಳು ಎಷ್ಟು
ಎದ್ದರೂ ನಾವು ಜೋಕೆಯಾಗಿಯೂ ಭದ್ರವಾಗಿಯೂ ಇರುವೆವು. ಹಾ
ಗಾದರೆ ಪಾಪದಲ್ಲಿಯೂ ಮರಣದಲ್ಲಿಯೂ ಕಟ್ಟಿಸಿ ಕೊಂಡು ಸೈತಾನನ
ದಾಸರಾಗಿ, ಅವನಿಂದ ಉಪದ್ರಗಳನ್ನು ಪಡ ಕೊಳ್ಳುವವರೆಲ್ಲರೇ! ಬಿಡುಗ
ಡೆಯಾಗುವಿರೆಂದು ನೆನಸಿದರೂ, ಈ ವರೆಗೆ ಹೆಚ್ಚು ಹೆಚ್ಚಾಗಿ ಶಿಕ್ಕೊಂಡು
ದುಃಖದಿಂದಲೂ, ಭಯದಿಂದಲೂ, ಕಷ್ಟದಿಂದಲೂ ಬಳಲಿ ನರಳುತ್ತೀರಿ.

ಈಗಲಾದರೂ ಆ ಮೋಸದ ಮಾರ್ಗವನ್ನು ಬಿಡಿರಿ! ಯಾಕಂದರೆ ಅದರ
ಅಂತ್ಯ ನಾಶನವೇ. ಎಲ್ಲಾ ಉಪದ್ರಗಳ ಕಾರಣವಾಗಿರುವ ಪಾಪವ
ನ್ನೂ ನಿಮ್ಮ ಹೃದಯದಲ್ಲಿರುವ ಪಾಪದ ಮನಸ್ಸನ್ನೂ ತಿಳಿದು ಕೊಂ
ಡು, ನಿಮ್ಮನ್ನು ಪ್ರೀತಿ ಮಾಡುವ ದೇವರ ಬಳಿಗೆ ಮಾನಸಾಂತರದಿಂ
ದ ತಿರಿಗಿ ಬನ್ನಿರಿ! ದೇವರು ತನ್ನ ಒಬ್ಬನಾಗಿ ಹುಟ್ಟಿದ ಮಗನನ್ನು ಬಲ
ಹೀನತ್ವಕ್ಕೂ ಕಷ್ಟಕ್ಕೂ ಇಕ್ಕಟ್ಟಿಗೂ ಚಂಗಕ್ಕೂ ವ್ಯಥೆಗೂ, ಮತ್ತು ಗೆತ್ಸೇ
ಮನೆಯಲ್ಲಿಯೂ ದೇವರ ಕೋಪವನ್ನು ತನ್ನ ಮೇಲೆ ತೆಗದು ಕೊಂಡು
ಗೊಲ್ಗಥದಲ್ಲಿಯೂ ಬಹಳ ನಾಚಿಕೆಯೂ ಕಠಿಯೂ ನೋವೂ ಆಗಿರು
ವ ಕ್ರೂಜೆಯ ಮರಣವನ್ನು ಪಡ ಕೊಳ್ಳಲಿಕ್ಕೆ ಒಪ್ಪಿಸಿ ಕೊಟ್ಟು, ಈ ಪ್ರ
ಕಾರ ಲೋಕವನ್ನೂ ನಮ್ಮೆಲ್ಲರನ್ನೂ ಪ್ರೀತಿ ಮಾಡಿದನು. ಅವನಿಗೆ ಬಂ
ದ ಕಷ್ಟವು ನಮ್ಮದು, ನನ್ನದೂ ನಿಮ್ಮದೂ ಆಗಿತ್ತು; ಹಾಗೆಯೇ ನಾ
ವು ಚಯ ಪಟ್ಟು ಸಾಯುವದು ನಮ್ಮ ಪಾಪಗಳಿಗೆ ತಕ್ಕ ಶಿಕ್ಷೆಯಾಗಿ
ತ್ತು. ಈ ವರೆಗೆ ಸೈತಾನನ ಬಲ, ಯುಕ್ತಿ, ತಂತ್ರ, ಮೋಸ ಮುಂತಾದ
ಎಲ್ಲಾ ಕೆಟ್ಟ ಕ್ರಿಯೆಗಳನ್ನು ನೋಡಿದಿರಿ; ಅವನ ಕ್ರಿಯೆಗಳಿಂದ ಓಡಿ
ಹೋಗಿರಿ! ಅವನು ನಿಮ್ಮನ್ನು ಬೇಗ ಬಿಡನು; ಹೌದು, ನಿಮ್ಮನ್ನು
ಹಿಡಿಯುತ್ತಾನೆ. ನಾನಾ ವಿಧದಿಂದ ನಿಮ್ಮನ್ನು ಚಯ ಪಡಿಸಿ ಬೆಂಕಿ
ಯ ಕೊಂಡದಲ್ಲಿ ಬಿಸಾಡಲಿಕ್ಕೆ ನೋಡುತ್ತಾನೆ; ಆದರೂ ದೇವರಿಗೆ
ಹತ್ತರವಾಗಿರಿ ಮಾತ್ರ! ಅವನು ನಿಮಗೆ ಬೇಕಾದ ಸಹಾಯ ಮಾಡು
ವನು; ಮತ್ತು ಸೈತಾನನು ನಿಮಗೇನೂ ಮಾಡ ಕೂಡದು. ದೇವ
ರು ನಿಮ್ಮನ್ನು ಬಿಡನು. ನೀವು ಅಂತ್ಯದ ತನಕ ನಂಬಿಕೆಯುಳ್ಳವರಾಗಿ
ದ್ದು ಅವನ ಸಹಾಯದಿಂದ ಎಲ್ಲಾ ಕೆಟ್ಟವುಗಳನ್ನು ಸಹಿಸ ಬಹುದು.
ನಾನು ಬದುಕುತ್ತೇನೆಂದು ಕರ್ತನು ಹೇಳುತ್ತಾನೆ; ನಿತ್ಯವಾಗಿ ಬದು
ಕುವವನಾಗಿರುವವನಿಗೆ ನಾವು ದಿನಾಲು ನಮ್ಮನ್ನೂ ನಮಗಿರುವ ಎಲ್ಲ
ವುಗಳನ್ನೂ ಧೈರ್ಯದಿಂದ ಒಪ್ಪಿಸ ಬಹುದು. ಮರಣದ ಘಳಿಗೆಯಲ್ಲಿ
ಸಹ ಪಾಪಿಗಳಾದ ಮನುಷ್ಯರ ಹತ್ತರ ಸೈತಾನನ ದೂತರು ಬಂದು
ಪಾಶವನ್ನು ತಂದು ಮಮತೆ ಇಲ್ಲದೆ ಕಟ್ಟುತ್ತಾ ಇರುಲು, ಯೇಸುವ
ನ್ನು ನಂಬುವವನ ಹತ್ತರ ದೇವದೂತರು ಬಂದು ಅವನ ಆತ್ಮವನ್ನು

ಸಮಾಧಾನದಲ್ಲಿ ತಕ್ಕೊಂಡು ಹೋಗುವದರಿಂದ, ವ್ಯಥೆ ಇಲ್ಲದೆ ಅವರ ಸಂಗಡ ಹೋಗ ಬಹುದು. ನಾನು ಬದುಕುತ್ತೇನೆ; ನೀವೂ ಬದುಕುವಿರಿ ಎಂಬ ಮಾತು ಆಗ ಪೂರ್ಣವಾಗುವದು; ಯಾಕಂದರೆ ಅವನು ನಮಗೆ ನಿತ್ಯಸುಖವನ್ನೂ ನಿತ್ಯಜೀವವನ್ನೂ ಕೊಡುತ್ತಾನೆ. ಅದು ಆಗುವ ತನಕ ಅವನು ನಂಬಿಕೆಯುಳ್ಳ ಪ್ರೀತಿಯಿಂದಲೂ ದಯೆಯಿಂದಲೂ ಎಲ್ಲರ ಕಡೆಗೆ, ವಿಶೇಷವಾಗಿ ಬಡವರಾಗಿ ಕಷ್ಟ ಪಟ್ಟು ಜೀವದಲ್ಲಿರುವ ತನಕ ಭಯ ಪಡುವವರ ಕಡೆಗೆ ನೋಡುತ್ತಾನೆ.

ಅವರು ಪ್ರಾರ್ಥಿಸಿ: ಮಧ್ಯ ಜೀವದೊಳಗೆ ಮೃತಿಯಲ್ಲಿದ್ದೇವೆ. ಎಲ್ಲಿ ಗತಿ? ಕೃಪೆಯ ಎಲ್ಲಿ ಹೊಂದುತ್ತೇವೆ? ನಿನ್ನೊಬ್ಬನಲ್ಲೇ ಕರ್ತ! ಓ ಕರ್ತ, ನಮ್ಮ ಕರ್ಮವು ನಿನ್ನ ಕೋಪವೇರ್ಸಿತು! ನಿರ್ಮಲ ಕರ್ತನೇ, ನಿರ್ಮಲ ಶಕ್ತನೇ, ನಿರ್ಮಲ ದಯಾಪರನಾದ ಸಂರಕ್ಷಕನೇ, ತೀಕ್ಷ್ಣ ಸಾವಿನಿಂದ ನಮ್ಮ ಆತ್ಮ ತಪ್ಪಿಸು, ಕಟಾಕ್ಷ ಪಟ್ಟು! ಎಂದು ಬೇಡಿ ಕೊಳ್ಳುವಾಗ, ಅವನು ಅವರ ಕಡೆಗೆ ಕೈ ಚಾಚಿ ಅವರನ್ನು ರಕ್ಷಣೆ ಮಾಡಿ, ಅವರಿಗೆ ಸಹಾಯವನ್ನೂ ನಿತ್ಯಭಾಗ್ಯವನ್ನೂ ದಯಪಾಲಿಸ ಪೂರ್ಣ ಮನಸ್ಸುಳ್ಳವನಾಗಿ, ಉಚಿತವಾಗಿ ಎಲ್ಲರಿಗೆ ಕೊಡಲಿಕ್ಕೆ ನೋಡುತ್ತಾನೆ. ಹೀಗಿರುವದರಿಂದ ಅವನ ಬಳಿಗೆ ಬಂದು ಹಣವಿಲ್ಲದೆ ಅವನ ದಯೆಯ ಪೂರ್ಣತೆಯಿಂದ ದಯೆಯ ಮೇಲೆ ದಯೆಯನ್ನು ಹೊಂದಿ ತೃಪ್ತಿಯಾಗಿ, ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ನಿತ್ಯಜೀವದಲ್ಲಿ ಬದುಕಿ, ಭಾಗ್ಯವಂತರಾಗಿರಿ! ಇದು ದೇವರು ನಮಗೆ ತೋರಿಸಿದ ಮಾರ್ಗವೂ ಅವನು ನಮಗಿಟ್ಟ ಗುರಿಯೂ ಆಗಿದೆ. ಇದರಲ್ಲಿ ಸೇರಿ ನೆಟ್ಟಗೆ ನಡದರೆ, ಬಿಡುಗಡೆಯಾಗುವಿರಿ.

ಪಾಟಾಳಿ ಪೂ: ನಿಮಗೆ ಹ್ಯಾಗಾದರೂ ಭೂತಗಳ ಭಯವಿಲ್ಲ. ಇದನ್ನು ಚನ್ನಾಗಿ ನೋಡುತ್ತೇವೆ; ನನಗೂ ಹಾಗೆಯೇ ಭಯವಿಲ್ಲದೆ ಇರುವದಕ್ಕಾದರೆ ಸಂತೋಷವಿತ್ತು.

ಪಾದ್ರಿ: ಹಾಗಾದರೆ ನಿಮಗೆ ಬರಲಿಕ್ಕೆ ಏನು ಮನಸ್ಸಿಲ್ಲವಲ್ಲ? ಮನವರಿದರೆ, ಬನ್ನಿರಿ! ಆಗ ನಿಮಗೂ ಬಿಡುಗಡೆಯಾಗುವದು. ಬಂದು ಬೇಡಿ ಕೊಳ್ಳುವವರೆಲ್ಲರು ಹಾಗೆಯೇ ಹೊಂದುವರು.

ರಾಮಶೆ: ಎಲ್ಲರೂ ಒಂದೇ ಮನಸ್ಸಾಗಿ ಶೇರಿದರೆ ಆದೀತು! ಮತ್ತು ನೀವು ಹ್ಯಾಗಾದರೂ ಮುಂಚಿನವರು; ಆದರೆ ಒಬ್ಬರಾಗಿ ಬರಲಿಕ್ಕಾಗುತ್ತದೋ? ನಿಮ್ಮ ಮಾತು ಕೇಳಿದ ಮೇಲೆ ಭೂತಗಳ ಭಯವು ಹೋದ ಹಾಗೆ ಆಯಿತು; ಅದರ ಸೇವೆಯನ್ನು ಇನ್ನು ಮುಂದೆ ಪೂರ್ಣವಾಗಿ ಬಿಡ ಬೇಕು, ಹೌದು! ಆದರೆ ನಿಮ್ಮಲ್ಲಿ ಕೂಡುವದರ ಹೊರ್ತು ಅದನ್ನು ಬಿಡಲಿಕ್ಕಾಗುವದಿಲ್ಲ. ಕಾಲಾನುಗತವಾಗಿ ಬರಲಿಕ್ಕೆ ನೋಡುತ್ತೇವೆ.

ಪಾದ್ರಿ: ನೀವು ಇನ್ನು ಹಾಗೆ ಮಾತಾಡುವದು ಬರೇ ನೆವನವೆಂದು ನಿಮ್ಮ ಸ್ವಂತ ಮನಸ್ಸಾಕ್ಷಿಯು ನಿಮಗೆ ಹೇಳುವದು. ನಿಮಗೆ ತಿಳಿಯಲಿಲ್ಲವೆಂದು ಇನ್ನು ಹೇಳ ಕೂಡದು; ಆದರೆ ಗೊತ್ತಿದ್ದು ಬಾರದವರಿಗೆ ಕರ್ತನು ಆ ದಿವಸದಲ್ಲಿ ಏನು ಹೇಳುವನು? ನಿಮಗೆ ಮನಸ್ಸು ಇರಲಿಲ್ಲ, ಅದಕ್ಕಾಗಿ ನನ್ನನ್ನು ಬಿಟ್ಟು ಹೋಗಿರಿ! ಇದನ್ನು ನೀವು ಕೇಳದ ಹಾಗೆ ದೇವರು ನಿಮಗೆ ದಯ ಮಾಡಲಿ! ಈಗ ನಾವು ಬಹಳ ಮಾತಾಡಿದೆವು. ನೀವು ಮೂರು ಸಾರಿ ಬಂದು ಕೇಳಿದ್ದರಲ್ಲಿ ನನಗೆ ಬಹಳ ಸಂತೋಷ ಉಂಟು. ದೇವರು ತನ್ನ ಆಶೀರ್ವಾದವನ್ನು ಅದಕ್ಕಿಡಲಿ! ಮತ್ತು ಆತನ ಚಿತ್ತವಿದ್ದರೆ ಇನ್ನು ಮೇಲೆ ಸಹ ಒಂದು ವೇಳೆ ಒಂದೊಂದು ಸಾರಿ ಕೂಡಿ ಮಾತಾಡ ಬಹುದು. ಪ್ರೀತಿ ಇರಲಿ!

ಕೃಷ್ಣರಾ: ನಮಗೂ ಸಂತೋಷ ಉಂಟು. ನೀವು ಹೇಳಿದ್ದು ನೆನಪಿನಲ್ಲಿ ಉಂಟು; ಅದರ ವಿಷಯದಲ್ಲಿ ನಮ್ಮೊಳಗೆ ಇನ್ನು ಹೆಚ್ಚು ಮಾತಾಡುವೆವು.

ಆಗ ಪಾದ್ರಿಧೊರೆಯು ಎದ್ದು ಸಲಾಂ ಮಾಡಿ ಹೊರಟು ತಮ್ಮ ಊರಿಗೆ ಹೋದರು.

ಸಮಾಪ್ತಿ.

ನೀ ಮಾರ್ಗ, ಕರ್ತ, ನಿನ್ನಲಿ
ಆಶ್ರಯ ಗೊಂಡೆವು;
ನಿನ್ ಹೊರ್ತು ತಂದೆಯೆಡೆಗೆ
ಯಾರೊಬ್ಬ ಬಾರನು.

೨.

ನೀ ಸತ್ಯ; ನಿನ್ನ ವಾಕ್ಯವು
ಜ್ಞಾನೋಪದೇಶವು;
ಸುಬುದ್ಧಿ, ಶುದ್ಧ ಮನಸು
ನಿನ್ನಿಂದ ಬಪ್ಪುದು.

೩.

ನೀ ಜೀವ; ಗೋರಿ ಒಡೆದು
ಸಾವನ್ನು ಜೈಸಿದಿ;
ನಿನ್ನನ್ನು ನಂಬಿದವನು
ಇನ್ನ್ಯಾತಕಂಜಲಿ!

೪.

ನೀ ಮಾರ್ಗ, ಸತ್ಯ, ಜೀವವು;
ಸನ್ಮಾರ್ಗ ತೋರಿಸಿ,
ಸುಶಿಕ್ಷೆ ಕೊಟ್ಟು, ಶೇರಿಸು
ನಮ್ಮನ್ನು ಜೀವದಿ!

1922 g 6572.

c

ON DEMONS

ಭೂತ ವಿದ್ಯೆಯ

ಮೂರು

ಸಂಭಾಷಣೆಗಳಲ್ಲಿ ವಿವರಿಸಿದ್ದು

MANGALORE
PRINTED BY PLEBST & STOLZ, BASEL MISSION